# ಸಮಾಜ ವಿಜ್ಞಾನ

## ಭಾಗ - 2

## ತರಗತಿ VII

Social Science
Part-2
STD-VII
Kannada Medium

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT) ಕೇರಳ
2024

## ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ,
ವಿಂಧ್ಯ ಹಿಮಾಚಲ ಯಮುನಾ ಗಂಗಾ,
ಉಚ್ಛಲ ಜಲಧಿತರಂಗ,
ತವಶುಭ ನಾಮೇ ಜಾಗೇ,
ತವಶುಭ ಆಶಿಷ ಮಾಗೇ,
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ.
ಜಯಹೇ, ಜಯಹೇ, ಜಯಹೇ,
ಜಯ ಜಯ ಜಯ ಜಯಹೇ!

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ; ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆ ಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

7

# ಸಮಾಜ ವಿಜ್ಞಾನ

*Prepared by*
**State Council of Educational Research and Training (SCERT)**
Poojappura, Thiruvananthapuram 695012, Kerala
Website : www.scertkerala.gov.in, e-mail : scertkerala@gmail.com
Typeset and design by : SCERT
First Edition - 2024
Printed at : KBPS, Kakkanad, Kochi-30
© Department of General Education, Government of Kerala

ಪ್ರೀತಿಯ ಮಕ್ಕಳೇ,

ಸಮಾಜ ವಿಜ್ಞಾನವು ಸಾಮಾಜಿಕ ಜೀವನ ಮತ್ತು ಶೈಕ್ಷಣಿಕ ಅಭಿವೃದ್ಧಿಯ ಅಸ್ತಿತ್ವಕ್ಕೆ ಆಧಾರವಾದ ಅಧ್ಯಯನ ಶಾಖೆಯಾಗಿದೆ. ಸಮಾಜ ವಿಜ್ಞಾನದ ಮೂಲಕ ಹಿಂದಿನ ಕಾಲಘಟ್ಟವನ್ನು ಆಧಾರವಾಗಿರಿಸಿ ಹೊಸ ಕಾಲಘಟ್ಟವನ್ನು ಮುನ್ನಡೆಸಲು ಮತ್ತು ಪರಿಸರವು ಉಂಟುಮಾಡುವ ಪ್ರತಿಕೂಲ ಸಂದರ್ಭಗಳನ್ನು ನಿವಾರಿಸಲು ಸಾಧ್ಯವಾಗಬೇಕು. ಸಂವಿಧಾನವು ಮುಂದಿಡುವ ಮೂಲಭೂತ ಹಕ್ಕುಗಳನ್ನು ವೈಜ್ಞಾನಿಕ ಮನೋಭಾವದಿಂದ ಕಾರ್ಯಗತಗೊಳಿಸಲು ಮತ್ತು ದೇಶದ ಆರ್ಥಿಕ ವ್ಯವಸ್ಥೆಯನ್ನು ಪರಿಪೋಷಿಸಲು ಅಗತ್ಯವಾದ ಸಾಧ್ಯತೆಗಳನ್ನು ಕಂಡುಕೊಳ್ಳಲು ಸಮಾಜ ವಿಜ್ಞಾನವು ನಮಗೆ ಸಹಾಯಕವಾಗಿದೆ.

ಅವಗಣಿಸಲ್ಪಡುವ ಎಲ್ಲಾ ಸಾಮಾಜಿಕ ವಿಭಾಗಗಳನ್ನು ಅಂಗೀಕರಿಸುವ ಮನೋಭಾವವನ್ನು ಬೆಳೆಸಲು ಮತ್ತು ದೇಶದ ಸಾಂಸ್ಕೃತಿಕ-ಜಾತ್ಯತೀತ ಪರಂಪರೆಯನ್ನು ಸಂರಕ್ಷಿಸಲು ನಾವು ಸಮಾಜದ ಕುರಿತು ಸ್ಪಷ್ಟ ತಿಳುವಳಿಕೆಯನ್ನು ಹೊಂದಬೇಕು. ಭೌಗೋಳಿಕ ವಿಶೇಷತೆಗಳನ್ನು ಕಂಡುಕೊಳ್ಳಲು, ಪ್ರಕೃತಿ ಸಂರಕ್ಷಣೆ ಮತ್ತು ಕೃಷಿ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸಲು ಒಬ್ಬ ಸಮಾಜ ವಿಜ್ಞಾನ ವಿದ್ಯಾರ್ಥಿಗೆ ಸಾಧ್ಯವಾಗಬೇಕು.

ಪರಿಷ್ಕೃತ ಕೇರಳ ಪಠ್ಯಕ್ರಮ ಚೌಕಟ್ಟು-2023 ಮುಂದಿರಿಸುವ ಇಂತಹ ಪ್ರಗತಿಪರ ದೃಷ್ಟಿಕೋನಗಳು ಒಳಗೊಂಡ ಏಳನೇ ತರಗತಿಯ ಸಮಾಜ ವಿಜ್ಞಾನ ಭಾಗ-2 ಪಠ್ಯಪುಸ್ತಕವು ನಿಮ್ಮ ಜೀವನ ಯಶಸ್ಸಿಗೆ ಒಂದು ಸಂಪತ್ತಾಗಬಹುದು ಎಂದು ಭಾವಿಸುತ್ತೇನೆ.

ಸಮಾಜವನ್ನು ಹೆಚ್ಚು ಕ್ರಿಯಾಶೀಲವಾಗಿಸಲು ಮತ್ತು ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯಲು ಈ ಪಠ್ಯಪುಸ್ತಕ ನಿಮಗೆ ಸಹಾಯಕವಾಗುವುದು .

ಪ್ರೀತಿಪೂರ್ವಕ,

**ಡಾ. ಜಯಪ್ರಕಾಶ್ ಆರ್.ಕೆ**
ಡೈರೆಕ್ಟರ್
ಎಸ್.ಸಿ.ಇ.ಆರ್.ಟಿ. ಕೇರಳ

# Text Book Development Team

**Advisor**

**Dr. K. N. Ganesh**
Chairman, Kerala Council for Historical Research

**Chairperson**

**Dr. Baiju K. C.**
Vice Chancellor (In-charge), Central University, Kasaragod

**Experts**

**Dr. P. P. Abdul Razak**
Associate Professor (Rtd.)
Department of History
P.S.M.O. College,
Thirurangadi

**Dr. Anish V. R.**
Assistant Professor
Department of Political Science
S.A.R.B.T.M. Govt. College,
Quilandy

**Dr. Nandakumar B.V.**
Assistant Professor
Department of History
Sree Narayana College,
Varkala

**Members**

**Anoop K. P.**
P.M.S.A.P.T.H.S.S. Kakkove
Malappuram

**M. Johnbai**
M.V.H.S.S. Arumanoor
Thiruvananthapuram

**Johnson T. Y.**
C.S.I.H.S.S. For Deaf,
Valakom

**Krishnan Kuriya**
A. E. O.(Rtd.), Kannur South

**Musthafa Mattathoor**
Teacher Educator, Govt. Institute of
Teacher Education, Malappuram

**Nisha M. S.**
P.H.S.S. Mezhuveli,
Pathanamthitta

**T. S. Nisha**
S.N.V.U.P.S. Maruthamanpally,
Kollam

**Premjith Sureshbabu**
Artist

**Priya S. S.**
G.B.H.S.S. Mithirmala,
Thiruvananthapuram

**Rajan P. P.**
Trainer, B.R.C., Malappuram

**Rajan Kulangara**
Iringannoor H.S.S., Vadakara,
Kozhikode

**Shanlal A. B.**
H.S.S.T. Geography
P.N.M.G.H.S.S Koonthalloor,
Chirayinkeezhu

**Kannada Version**

**Experts**

**Narayana. D**
Headmaster, G.H.S. Udyawar

**Language Expert**

**Ramanna. D**
Headmaster (Rtd.), G.V.H.S.S. Delampady

**Members**

**Gopala P. K.** U.P.S.T, G.H.S.S. Padre
**Raghava M. N.** H.S.T, Social Science G.H.S.S. Mogralputhur
**Ananda. S.** H.S.T, Social Science G.H.S.S Pandi
**Vijayakumar. A.** U.P.S.T, B.A.U.P.S Katukukke
**Pradeep Kumar. B. S.** U.P.S.T, B.A.U.P.S. Katukukke
**Melvin D Souza P.** G.H.S.S. Bekur

---

## Academic Coordinator

**Dr. Anil D.**
Research Officer, SCERT Kerala

STATE COUNCIL OF EDUCATION RESEARCH AND TRAINING (SCERT)
Vidhyabhavan, Poojappura,Thiruvananthapuram 695 012

# ಅನುಕ್ರಮಣಿಕೆ


8. ಅಧಿಕಾರ ಜನರಿಗೆ ........ 119-131

9. ಭೂಮಿಯನ್ನು ತಿಳಿಯಲು ಭೂಪಟಗಳು ಮತ್ತು ಆಧುನಿಕ ತಂತ್ರಜ್ಞಾನಗಳು ........ 132-151

10. ಬಜೆಟ್ : ಅಭಿವೃದ್ಧಿಯ ಪ್ರತ್ಯಕ್ಷ ದಾಖಲೆ ........ 152-165

11. ತಾರತಮ್ಯದ ವಿರುದ್ಧ ........ 166-179

12. ಚರಿತ್ರೆಯ ಆಧಾರ ಶಿಲೆಗಳು ........ 180-198


ಈ ಪಠ್ಯಪುಸ್ತಕದಲ್ಲಿ ಕಲಿಕಾಸೌಕರ್ಯಕ್ಕಾಗಿ
ಕೆಲವು ಚಿಹ್ನೆಗಳನ್ನು ಉಪಯೋಗಿಸಲಾಗಿದೆ


ಹೆಚ್ಚುವರಿ ಓದು - ಮೌಲ್ಯಮಾಪನಕ್ಕೆ ಒಳಪಡಿಸಬೇಕೆಂದಿಲ್ಲ


ಕಲಿಕಾ ಚಟುವಟಿಕೆಗಳು


ಮುಂದುವರಿದ ಚಟುವಟಿಕೆಗಳು


ನಾವು ಓದುವ

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು 1**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ ;**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,2[ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು; ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ “ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ” ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.



# 8

# ಅಧಿಕಾರ ಜನರಿಗೆ

## ಅಭಿವೃದ್ಧಿಯಲ್ಲಿ ಪೂಕೋಟ್‌ಮಲೆ ಮಾದರಿ



*ಚಿತ್ರ 8.1*

ಪೂಕೋಟ್‌ಮಲೆ ಗ್ರಾಮದ ಕುರಿತು ಇರುವ ವಾರ್ತಾ ಶೀರ್ಷಿಕೆಗಳನ್ನು ಗಮನಿಸಿದಿರಲ್ಲವೆ. ಪೂಕೋಟ್‌ಮಲೆ ಗ್ರಾಮವು ಜನರ ಸಹಭಾಗಿತ್ವದೊಂದಿಗೆ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಿದ ಗ್ರಾಮವಾಗಿದೆ. ಆಹಾರದ ಸ್ವಾವಲಂಬನೆ, ಜಲಾನಯನ ಪ್ರದೇಶದ ಅಭಿವೃದ್ಧಿ, ಎಲ್ಲಾ ವಾರ್ಡಿನಲ್ಲಿಯೂ ಹಸಿರು ವನಗಳು, ಬಂಜರು ಭೂಮಿ ಇಲ್ಲದ ಗ್ರಾಮ, ಜಲ ಸಮೃದ್ಧಿಗಾಗಿ ಯೋಜನೆಗಳು, ಫಿಲಮಿಂಟ್ ರಹಿತ ಗ್ರಾಮ ಹೀಗೆ ಅನೇಕ ಅಭಿವೃದ್ಧಿ ಚಟುವಟಿಕೆಗಳನ್ನು ಸ್ಥಳೀಯಾಡಳಿತ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ವಿವಿಧ ವಾರ್ಡ್‌ಗಳಲ್ಲಿ

ಜಾರಿಗೊಳಿಸಲಾಗಿದೆ. ಗ್ರಾಮ ಸಭೆಗಳಲ್ಲಿ ಉತ್ತಮ ಪಾಲ್ಗೊಳ್ಳುವಿಕೆ, ಯೋಜನೆಗಳು, ನೌಕರರ ಸಮರ್ಪಕವಾದ ಸಹಭಾಗಿತ್ವ, ಮೇಲ್ವಿಚಾರಣೆ ಮತ್ತು ಜನರ ಸಮರ್ಪಣಾ ಮನೋಭಾವವು ಪೂಕೋಟ್‌ಮಲೆ ಗ್ರಾಮದ ಅಭಿವೃದ್ಧಿಯಲ್ಲಿ ಪ್ರಧಾನ ಪಾತ್ರ ವಹಿಸಿದೆ.

ಪೂಕೋಟ್‌ಮಲೆ ಗ್ರಾಮದ ಪ್ರಗತಿಯ ಪಥದಲ್ಲಿ ಪ್ರೇರಕ ಶಕ್ತಿಯಾಗಿ ನೆಲೆ ನಿಂತ ಘಟಕಗಳು ಯಾವುವು?

ಗ್ರಾಮ ಸಭೆಗಳಿಂದಲೋ, ವಾರ್ಡ್ ಸಭೆಗಳ ಮೂಲಕವೋ ಯೋಜನೆ ತಯಾರಿಸಿ ಜಾರಿಗೊಳಿಸಲಾದ ಕೆಲವು ಅಭಿವೃದ್ಧಿ ಚಟುವಟಿಕೆಗಳು ನಿಮ್ಮ ಪ್ರದೇಶದಲ್ಲಿಯೂ ಇರಬಹುದಲ್ಲವೆ. ಅವುಗಳನ್ನು ಅಧ್ಯಾಪಕರ ಸಹಾಯದಿಂದ ಕಂಡುಹಿಡಿದು ಪಟ್ಟಿ ಮಾಡಿರಿ.

- ರಸ್ತೆ ನಿರ್ಮಾಣ
- ..................................................
- ..................................................
- ..................................................

## ಗ್ರಾಮ ಸಭೆ/ವಾರ್ಡ್ ಸಭೆಗಳನ್ನು ಸಮೀಪದಿಂದ ತಿಳಿಯೋಣ



ನಿವಿನ್‌ನ ಪೋಸ್ಟ್‌ನಿಂದ ಕೆಳಗೆ ಹೇಳಿರುವ ವಿಷಯಗಳನ್ನು ಕಂಡುಹಿಡಿಯಿರಿ.

ಪೋಸ್ಟ್‌ನಲ್ಲಿ ಯಾವೆಲ್ಲ ವಿಷಯಗಳ ಬಗ್ಗೆ ಹೇಳಲಾಗಿದೆ?

ಗ್ರಾಮಸಭೆಯಲ್ಲಿ ಚರ್ಚೆ ಮಾಡುವ ವಿಚಾರಗಳು ಯಾವುವು?

ಗ್ರಾಮಸಭೆಯ ಅಧ್ಯಕ್ಷತೆ ವಹಿಸುವವರು ಯಾರು?

ಗ್ರಾಮಸಭೆಗೆ ಸಮಾನವಾಗಿ ನಗರಗಳಲ್ಲಿ ಇರುವ ವ್ಯವಸ್ಥೆ ಯಾವುದು?

ಗ್ರಾಮಸಭೆಯ ಸಂಚಾಲಕರು ಯಾರು?

## ಕದಿರ್‌ಮಲೆ ಗ್ರಾಮಪಂಚಾಯತ್

### ಗ್ರಾಮಸಭೆ ನೋಟಿಸು

ಕದಿರ್‌ಮಲೆ ಗ್ರಾಮಪಂಚಾಯತ್‌ನ 14ನೇ ವಾರ್ಡ್(ಮೇಲಟ್ಟೂರ್) ಸಭೆಯು ಈ ಕೆಳಕಂಡ ವಿಷಯಗಳ ಕುರಿತು ನಿರ್ಣಯಗಳನ್ನು ಕೈಗೊಳ್ಳಲು ದಿನಾಂಕ 29-07-2023 ರಂದು ಶನಿವಾರ ಮಧ್ಯಾಹ್ನ 2:30 ಗಂಟೆಗೆ ಕದಿರ್‌ಮಲೆ ಕುಟುಂಬ ಆರೋಗ್ಯ ಕೇಂದ್ರದಲ್ಲಿ ನಡೆಯಲಿದೆ. ಮೇಲಟ್ಟೂರ್ ವಾರ್ಡಿನ ಎಲ್ಲಾ ಮತದಾರರು ಈ ಸಭೆಗೆ ಹಾಜರಾಗಬೇಕಾಗಿ ವಿನಂತಿ.

05.07.2023
ಕದಿರ್‌ಮಲೆ

ಸಂಚಾಲಕ
ವಾರ್ಡ್ ಮೆಂಬರ್

**ಕಾರ್ಯಸೂಚಿ**

1. ನಾಡಿನ ಸಾಮಾನ್ಯ ಅಭಿವೃದ್ಧಿಯ ಕುರಿತು ಚರ್ಚೆಗಳು
2. ಪ್ರತಿಭೆಯನ್ನು ಗೌರವಿಸುವುದು
3. ವೈಯಕ್ತಿಕ ಪ್ರಯೋಜನಗಳಿಗಾಗಿ ಫಲಾನುಭವಿಗಳ ಆಯ್ಕೆ
4. 'ಮುಂದೆ ಸಾಗೋಣ' ಮಹಿಳಾ ಸಬಲೀಕರಣ ಕಾರ್ಯಕ್ರಮ

NB: ಹರಿತಕರ್ಮ ಸೇನೆಗೆ ರೂ.50 ಬಳಕೆದಾರರ ಶುಲ್ಕವನ್ನು ಪಾವತಿಸದೆ ಸಾವಯವವಲ್ಲದ ತ್ಯಾಜ್ಯವನ್ನು ಸುಡುವುದು, ನಿಕ್ಷೇಪಿಸುವುದು ಅಥವಾ ಹೂಳುವುದು ಕದಿರ್‌ಮಲೆ ಗ್ರಾಮ ಪಂಚಾಯತ್ ಪ್ಲಾಸ್ಟಿಕ್ ಮ್ಯಾನೇಜ್ಮೆಂಟ್ ಬೈಲಾ 2021-ರ ಪ್ರಕಾರ ಶಿಕ್ಷಾರ್ಹವಾಗಿದೆ.



*ಚಿತ್ರ 8.2*

ಮೇಲೆ ಕೊಟ್ಟಿರುವ ನೋಟಿಸ್ ಮತ್ತು ಚಿತ್ರವನ್ನು ಗಮನಿಸಿರುವಿರಲ್ಲವೇ? ಇವು ಗ್ರಾಮಸಭೆ ಸೇರಲು ಇರುವ ನೋಟಿಸ್ ಮತ್ತು ಗ್ರಾಮಸಭೆಯ ಚಿತ್ರಗಳಾಗಿವೆ. ಗ್ರಾಮಸಭೆಯಲ್ಲಿ ಏನೆಲ್ಲಾ ಕಾರ್ಯಕ್ರಮಗಳು ನಡೆಯುತ್ತವೆ ಎಂದು ನೋಟಿಸ್‌ನಿಂದ ಕಂಡುಹಿಡಿದು ಪಟ್ಟಿ ಮಾಡಿರಿ.

- ಪ್ರಾದೇಶಿಕ ಅಭಿವೃದ್ಧಿ ಚಟುವಟಿಕೆಗಳು - ಚರ್ಚೆ ಮತ್ತು ಯೋಜನೆ
- 
- 

**ಗ್ರಾಮಸಭೆಯ ಚಟುವಟಿಕೆಗಳ ಕುರಿತು ನೀವು ಅರ್ಥಮಾಡಿಕೊಂಡ ವಿಷಯಗಳನ್ನು ಒಟ್ಟುಗೂಡಿಸಿ ಒಂದು ಟಿಪ್ಪಣಿ ತಯಾರಿಸಿರಿ.**

## ತರಗತಿ ಸಭೆ ಸೇರೋಣ

ನಿಮ್ಮ ಶಾಲೆಯು ಒಂದು ಗ್ರಾಮಪಂಚಾಯತ್ ಎಂದೂ ತರಗತಿಯು ಒಂದು ವಾರ್ಡ್ ಆಗಿದೆ ಎಂದೂ ಭಾವಿಸಿ ನಾವೊಂದು ಮಾದರಿ 'ತರಗತಿ ಸಭೆ' ಸೇರೋಣವೇ? ತರಗತಿಯ ಲೀಡರ್ ವಾರ್ಡ್ ಪ್ರತಿನಿಧಿ ಆಗಿರಲಿ.

ಮೊದಲಾಗಿ ನಾವು 'ತರಗತಿ ಸಭೆ'ಗೆ ಸದಸ್ಯರನ್ನು ಆಹ್ವಾನಿಸುವ ನೋಟಿಸ್ ತಯಾರು ಮಾಡೋಣ. ಯಾವೆಲ್ಲ ಮಾಹಿತಿಗಳು ನೋಟಿಸ್‌ನಲ್ಲಿ ಇರಬೇಕು? ತರಗತಿ ಸಭೆಯಲ್ಲಿ ಚರ್ಚಿಸಲು ಉದ್ದೇಶಿಸಲಾದ ಅಭಿವೃದ್ಧಿ ಚಟುವಟಿಕೆಗಳು ಯಾವುವು?

- ತರಗತಿ ಕೋಣೆಗಳು ಶಿಶು ಸೌಹಾರ್ದವಾಗಲು ಮಾಡಬೇಕಾದ ಬದಲಾವಣೆಗಳು
- ಶಾಲೆಯ ಶುಚಿತ್ವದ ಕುರಿತಾದ ಚಟುವಟಿಕೆಗಳು
- 
- 
- 

**ಅಧ್ಯಾಪಕರ ಸಹಾಯದೊಂದಿಗೆ ನೋಟಿಸ್ ತಯಾರಿಸಿ ತರಗತಿ ಸಭೆಯನ್ನು ಆಯೋಜಿಸಿರಿ.**

## ಗ್ರಾಮಗಳು ಆಧಾರವಾಗಿರುವಾಗ



ಚಿತ್ರ 8.3

### ಗಾಂಧೀಜಿಯ ಕನಸು

"ನನ್ನ ಕಲ್ಪನೆಯಲ್ಲಿ ಗ್ರಾಮ ಸ್ವರಾಜ್ಯವು ಒಂದು ಪರಿಪೂರ್ಣ ಗಣರಾಜ್ಯವಾಗಿದೆ. ಅಲ್ಲಿ ಮೂಲಭೂತ ಅಗತ್ಯಗಳಿಗಾಗಿ ನೆರೆಹೊರೆಯವರ ಮೇಲೆ ಅವಲಂಬಿತವಾಗುವ ಅಗತ್ಯವಿಲ್ಲ ಮತ್ತು ಅವಲಂಬನೆಯು ಅನಿವಾರ್ಯವಾದಾಗ ಮಾತ್ರ ಪರಸ್ಪರ ಸಹಕರಿಸುವುದು ಒಂದು ಪೂರ್ಣ ಗಣರಾಜ್ಯವಾಗಿದೆ. ಆದುದರಿಂದ ಪ್ರತಿಯೊಂದು ಗ್ರಾಮದ ಪ್ರಧಾನ ಆಸಕ್ತಿಯು ಆಹಾರ ಬೆಳೆ ಮತ್ತು ವಸ್ತ್ರಕ್ಕೆ ಅವಶ್ಯವಾಗಿರುವ ಹತ್ತಿಯ ಬೆಲೆಯನ್ನು ಹೆಚ್ಚಿಸುವುದು ಆಗಿರಬೇಕು. ಜಾನುವಾರುಗಳಿಗೆ ಪ್ರತ್ಯೇಕವಾದ ಸ್ಥಳ, ಪ್ರಾಯ ಪೂರ್ತಿ ಆದವರಿಗೆ ಮತ್ತು ಮಕ್ಕಳಿಗೆ ವಿನೋದ ಮತ್ತು ಮನೋರಂಜನೆಯ ಕೇಂದ್ರಗಳು ಬೇಕು. ಹೆಚ್ಚು ಸ್ಥಳಾವಕಾಶ ಇದ್ದರೆ.............. ಹಣ ಸಂಪಾದನೆ ಮಾಡುವ ರೀತಿಯಲ್ಲಿರುವ ಬೆಳೆಗಳನ್ನು ಬೆಳೆಸಲು ಅದನ್ನು ಉಪಯೋಗಿಸಬಹುದು."

(ಹರಿಜನ್ 26-7-1942, ಗಾಂಧಿ ಸಾಹಿತ್ಯ ಸಂಗ್ರಹ)

ಗ್ರಾಮಗಳ ಅಭಿವೃದ್ಧಿಯ ಕುರಿತು ಗಾಂಧೀಜಿಯ ದೃಷ್ಟಿಕೋನಗಳು ಏನಾಗಿತ್ತು ಎಂದು ಕಂಡುಹಿಡಿಯಿರಿ.

- ಗ್ರಾಮದ ಪ್ರಧಾನ ಅವಶ್ಯಕತೆಗಳಲ್ಲಿ ಸ್ವಾವಲಂಬನೆಯನ್ನು ಗಳಿಸುವುದು.
- 
- 
- 
- 

ಭಾರತದ ಹೃದಯವು ಗ್ರಾಮಗಳಲ್ಲಿ ವಾಸವಾಗಿದೆಯೆಂದೂ ಗ್ರಾಮಗಳ ಅಭಿವೃದ್ಧಿಗಳಿಂದ ಮಾತ್ರ ದೇಶದ ಅಭಿವೃದ್ಧಿಯು ಸಾಧ್ಯ ಎಂಬುದು ಗಾಂಧೀಜಿಯವರ ನಂಬಿಕೆಯಾಗಿತ್ತು. ಪ್ರಜಾಪ್ರಭುತ್ವ ಆಡಳಿತದ ಮೂಲಭೂತ ಘಟಕವು ಗ್ರಾಮಗಳಾಗಿರುವ ಕಾರಣ ಪಂಚಾಯತುಗಳ ಅಧಿಕಾರವು ಎಷ್ಟರವರೆಗೆ ಹೆಚ್ಚುತ್ತದೋ ಅಷ್ಟರ ಮಟ್ಟಿಗೆ ಅದು ಜನಕ್ಷೇಮಕರವಾಗಿರುತ್ತದೆ. ಸ್ವಯಂ ಆಡಳಿತ ಸರಕಾರ ಎಂಬ ಅರ್ಥದಲ್ಲಿ ಗಾಂಧೀಜಿಯವರು ಗ್ರಾಮ ಸ್ವರಾಜ್ಯವನ್ನು ವಿವರಿಸಿದ್ದಾರೆ. ಅಧಿಕಾರ ವಿಕೇಂದ್ರೀಕರಣವೆಂದರೆ ಗಾಂಧೀಜಿ ಕನಸು ಕಂಡ ಗ್ರಾಮ ಸ್ವರಾಜ್ಯ ಜಾರಿಗೊಳಿಸಲು ಇರುವ ಮಾರ್ಗವಾಗಿದೆ. 'ಗ್ರಾಮ ಸ್ವರಾಜ್' ಎಂಬ ಸಂಕಲ್ಪ ಪೂರ್ಣವಾಗಬೇಕಿದ್ದರೆ ಜನರಲ್ಲಿ ಅಧಿಕಾರವು ವಿಕೇಂದ್ರೀಕರಿಸಲ್ಪಡಬೇಕು.

## ಅಧಿಕಾರ ವಿಕೇಂದ್ರೀಕರಿಸಲ್ಪಟ್ಟಾಗ

ಗ್ರಾಮ ಪಂಚಾಯತಿನ ಹಸ್ತಕ್ಷೇಪ: ಸೇತುವೆ ಕಾಮಗಾರಿ ವೇಗದಲ್ಲಿ ಪೂರ್ತಿಯಾಯಿತು

ಅರ್ಹತೆ ಇರುವವರನ್ನು ಕಂಡು ಹಿಡಿಯಲು ಗ್ರಾಮ ಸಭೆಯಲ್ಲಿ ಪ್ರತ್ಯೇಕ ಸಮಿತಿ: ಕನಸಿನ ಭವನ ಯೋಜನೆ ಸಫಲವಾಯಿತು

ವಾರ್ಡ್ ಅಭಿವೃದ್ಧಿ ಸಮಿತಿ ಕ್ರಿಯಾತ್ಮಕವಾಯಿತು: ಎಲ್ಲರಿಗೂ ಕುಡಿಯುವ ನೀರು ಸಾಧ್ಯವಾಯಿತು

ಕೃಷಿ ಒಕ್ಕೂಟ ಎಚ್ಚೆತ್ತುಗೊಂಡಿತು: ಕೊಯ್ಲು ಯಂತ್ರಗಳು ಹೊಲಗಳಿಗೆ

ಜನರ ಸಹಭಾಗಿತ್ವದೊಂದಿಗೆ: 'ಬೀದಿ ಬದಿಗಳಲ್ಲಿ ನೆರಳು ವೃಕ್ಷಗಳು'

ಜನ ಸಹಭಾಗಿತ್ವದೊಂದಿಗೆ ಗ್ರಾಮದ ರಸ್ತೆಗಳು ಸಜ್ಜಾಯಿತು, ಸಂಚಾರಕ್ಕೆ ಯೋಗ್ಯವಾಯಿತು

ಮೇಲೆ ಕೊಟ್ಟಿರುವ ಕೊಲಾಷ್‌ಗಳಿಂದ ಜನರ ಸಹಭಾಗಿತ್ವದೊಂದಿಗೆ ಸಫಲವಾದ ಪ್ರಾದೇಶಿಕ ಅಭಿವೃದ್ಧಿ ಯೋಜನೆಗಳು ಯಾವುವೆಲ್ಲ ಎಂದು ತಿಳಿದುಕೊಂಡಿರಲ್ಲವೆ ?

ಅಧಿಕಾರವೂ ಕೆಲವರಲ್ಲಿ ಮಾತ್ರ ಕೇಂದ್ರೀಕರಿಸುವುದಲ್ಲ, ಬದಲಾಗಿ ಎಲ್ಲಾ ಜನರಲ್ಲೂ ವಿಕೇಂದ್ರೀಕರಿಸಲ್ಪಟ್ಟಾಗ ಮಾತ್ರವೇ ಪ್ರಜಾಪ್ರಭುತ್ವವು ಅರ್ಥಪೂರ್ಣವಾಗುವುದು. ಇಂತಹ ಒಂದು ರಾಜಕೀಯ ವ್ಯವಸ್ಥೆಯಲ್ಲಿ ಅಥವಾ ಆಡಳಿತ ವ್ಯವಸ್ಥೆಯಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಮತ್ತು ಜಾರಿಗೊಳಿಸುವಾಗ ಜನರಿಗೆ ಕಾನೂನು ಬದ್ಧವಾಗಿ ಅಧಿಕಾರ ಹಸ್ತಾಂತರಿಸುವುದೇ ಅಧಿಕಾರ ವಿಕೇಂದ್ರೀಕರಣ.

### ಅಧಿಕಾರ ಕೇಂದ್ರೀಕರಣ

ಆಡಳಿತ ಕಾರ್ಯಗಳಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಮತ್ತು ಜಾರಿಗೊಳಿಸುವ ಅಧಿಕಾರವು ಕೆಲವರಲ್ಲಿ ಮಾತ್ರ ನಿಕ್ಷಿಪ್ತವಾಗಿರುವುದನ್ನು ಅಧಿಕಾರ ಕೇಂದ್ರೀಕರಣ ಎನ್ನಬಹುದು. ಇಲ್ಲಿ ಜನಸಾಮಾನ್ಯರಿಗೆ ಆಡಳಿತ ವಿಷಯದಲ್ಲಿ ಸಹಭಾಗಿತ್ವದ ಅವಕಾಶಗಳು ತುಲನಾತ್ಮಕವಾಗಿ ಕಡಿಮೆಯಾಗಿರುತ್ತವೆ.

### ಅಧಿಕಾರ ವಿಕೇಂದ್ರೀಕರಣ: ವಿಶೇಷತೆಗಳು




**ಮೇಲೆ ಕೊಟ್ಟಿರುವ ಆಶಯ ಚಿತ್ರವನ್ನು ಗಮನಿಸಿದಿರಲ್ಲವೆ. ವಿಕೇಂದ್ರೀಕರಣದ ವಿಶೇಷತೆಗಳನ್ನು ಚರ್ಚಿಸಿ ವಿವರಣೆಯನ್ನು ತಯಾರಿಸಿ.**

### ಅಧಿಕಾರ ವಿಕೇಂದ್ರೀಕರಣ ಕಾಲಗಳ ಮೂಲಕ...

ಪಂಚಾಯತುಗಳು ಪುರಾತನ ಕಾಲದಿಂದಲೇ ನಮ್ಮ ದೇಶದಲ್ಲಿ ನೆಲೆ ನಿಂತಿದ್ದ ಗ್ರಾಮೀಣ ಆಡಳಿತ ವ್ಯವಸ್ಥೆಯಾಗಿದ್ದವು. ಗ್ರಾಮ ಜೀವನದ ಪ್ರಧಾನ ಕೇಂದ್ರವು ಪಂಚಾಯತ್ ಆಗಿತ್ತು. ಪಂಚ(ಐದು), ಆಯತ್ (ಸಭೆ ಅಥವಾ ಸಮ್ಮೇಳನ) ಎಂಬೀ ಸಂಸ್ಕೃತ ಪದಗಳು ಸೇರಿ ಪಂಚಾಯತ್ ಎಂಬ ಶಬ್ದವು ಹುಟ್ಟಿಕೊಂಡಿದೆ. ಬ್ರಿಟಿಷ್ ಆಡಳಿತದೊಂದಿಗೆ ಭಾರತದಲ್ಲಿ ಪಂಚಾಯತ್ ಆಡಳಿತ ವ್ಯವಸ್ಥೆಯು ದುರ್ಬಲಗೊಳ್ಳಲು ಆರಂಭವಾಯಿತು. ಆದರೆ 1882-ರಲ್ಲಿ 'ರಿಪ್ಪನ್ ಪ್ರಭು' ಬ್ರಿಟಿಷ್ ಆಡಳಿತದ ಭಾರತದಲ್ಲಿ ಜಾರಿಗೆ ತಂದ ಪರಿಷ್ಕಾರಗಳಿಂದಾಗಿ ಸ್ಥಳೀಯ ಆಡಳಿತ ಸಂಸ್ಥೆಗಳಿಗೆ ನವಜೀವನ ದೊರೆಯಿತು. 1935-ರಲ್ಲಿ ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್ ಜಾರಿಗೆ ಬರುವುದರೊಂದಿಗೆ ಪ್ರಾದೇಶಿಕ ಆಡಳಿತ ಸಂಸ್ಥೆಗಳಿಗೆ ಹೆಚ್ಚು ಅಧಿಕಾರಗಳು ದೊರಕಿತು ಹಾಗೂ ಅವುಗಳು ಪುನಃ ಸಂಘಟನೆಗೊಳಪಟ್ಟವು.

### ಅಧಿಕಾರ ವಿಕೇಂದ್ರೀಕರಣ : ಸಂವಿಧಾನದಲ್ಲಿ

ಭಾರತದ ಸಂವಿಧಾನದಲ್ಲಿ ನಿರ್ದೇಶಕ ತತ್ವಗಳ ಭಾಗವಾಗಿ ಪರಿಚ್ಛೇದ 40-ರಲ್ಲಿ ಪಂಚಾಯತ್‌ಗಳ ರೂಪೀಕರಣದ ಕುರಿತು ಪ್ರತಿಪಾದಿಸಲಾಗಿದೆ. ಆದರೂ ಸುಶಕ್ತವಾದ ಪ್ರಾದೇಶಿಕ ಆಡಳಿತ ವ್ಯವಸ್ಥೆಯ ಅಭಾವವು ಭಾರತದ ಗ್ರಾಮೀಣ ಅಭಿವೃದ್ಧಿಯ ಚಟುವಟಿಕೆಗಳನ್ನು ಪ್ರತಿಕೂಲವಾಗಿ ಭಾಧಿಸಿವೆ. ಇದನ್ನು ಪರಿಹರಿಸಲು ಮತ್ತು ಪ್ರಾದೇಶಿಕ ಆಡಳಿತ ವ್ಯವಸ್ಥೆಯನ್ನು ಬಲಪಡಿಸಲು ಅನೇಕ ಸಮಿತಿಗಳು ರಚನೆಗೊಂಡವು. ಅವುಗಳಲ್ಲಿ ಬಲವಂತರಾಯ್ ಮೆಹ್ತಾ ಮತ್ತು ಅಶೋಕ ಮೆಹ್ತಾರ ನೇತೃತ್ವದಲ್ಲಿ ಇದ್ದ ಸಮಿತಿಗಳು ಪ್ರಧಾನವಾದವುಗಳಾಗಿವೆ.

| ಬಲವಂತರಾಯ್ ಮೆಹ್ತಾ ಸಮಿತಿ ಶಿಫಾರಸುಗಳು (1957) | ಅಶೋಕ್ ಮೆಹ್ತಾ ಸಮಿತಿ, ಶಿಫಾರಸುಗಳು (1978) |
|---|---|
| • ತ್ರಿಸ್ತರ ಪಂಚಾಯತ್ ವ್ಯವಸ್ಥೆ - ಗ್ರಾಮ ಪಂಚಾಯತ್, ಪಂಚಾಯತ್ ಸಮಿತಿ, ಜಿಲ್ಲಾ ಪರಿಷತ್<br>• ಯೋಜನೆ, ಅಭಿವೃದ್ಧಿ ಚಟುವಟಿಕೆಗಳ ಅಧಿಕಾರವು ಪಂಚಾಯತ್ ಸಮಿತಿಗಳಿಗೆ, ಮೇಲ್ನೋಟ ಮತ್ತು ಸಂಘಟನೆಯು ಜಿಲ್ಲಾ ಪರಿಷತ್ತಿಗೆ<br>• ಗ್ರಾಮ ಪಂಚಾಯತಿಗಳಿಗೆ ನೇರ ಚುನಾವಣೆ<br>• ಜಿಲ್ಲಾ ಪರಿಷತ್, ಪಂಚಾಯತ್ ಸಮಿತಿಗಳಿಗೆ ಪರೋಕ್ಷ ಚುನಾವಣೆ | • ದ್ವಿಸ್ತರ ಪಂಚಾಯತ್ ವ್ಯವಸ್ಥೆ- ಮಂಡಲ ಪಂಚಾಯತ್ ಮತ್ತು ಜಿಲ್ಲಾ ಪರಿಷತ್<br>• ಜಿಲ್ಲಾ ಮಟ್ಟದ ಯೋಜನೆಯ ಜವಾಬ್ದಾರಿ ಜಿಲ್ಲಾ ಪರಿಷತ್ತುಗಳಿಗೆ, ಗ್ರಾಮಗಳ ಜವಾಬ್ದಾರಿ ಮಂಡಲ ಪಂಚಾಯತಿಗಳಿಗೆ<br>• ಪಂಚಾಯತ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಅನುಮತಿ<br>• ಪರಿಶಿಷ್ಟ ಜಾತಿ - ಪರಿಶಿಷ್ಟ ವರ್ಗ ಮೀಸಲಾತಿ |



**ಮೇಲೆ ಕೊಟ್ಟಿರುವ ಎರಡು ಸಮಿತಿಗಳ ಹೆಚ್ಚಿನ ಮಾಹಿತಿಗಳನ್ನು ಸೇರಿಸಿ ಪ್ಯಾನಲ್ ಚರ್ಚೆಯನ್ನು ಆಯೋಜಿಸಿರಿ.**



**ಆರಂಭ ರಾಜಸ್ಥಾನದಲ್ಲಿ**

ಬಲವಂತರಾಯ್ ಮೆಹ್ತಾ ಸಮಿತಿಯ ಶಿಫಾರಸಿನ ಪ್ರಕಾರ ಭಾರತದಲ್ಲಿ ಮೊತ್ತ ಮೊದಲಿಗೆ ರಾಜಸ್ಥಾನದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯು ಜಾರಿಗೆ ಬಂತು. 1959 ಅಕ್ಟೋಬರ್ 2-ರಂದು ರಾಜಸ್ಥಾನದ ನಾಗೌರ್ ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಜವಹರಲಾಲ್ ನೆಹರು ಯೋಜನೆಯನ್ನು ಉದ್ಘಾಟನೆ ಮಾಡಿದರು. ಅದೇ ವರ್ಷ ಆಂಧ್ರಪ್ರದೇಶ ಮತ್ತು ತಮಿಳುನಾಡು ಮುಂದೆ ಪಶ್ಚಿಮ ಬಂಗಾಳದಲ್ಲಿಯೂ ಪಂಚಾಯತ್ ರಾಜ್ ವ್ಯವಸ್ಥೆಯು ಜಾರಿಗೆ ಬಂತು.



*ಚಿತ್ರ 8.4*

## ಸಂವಿಧಾನ ತಿದ್ದುಪಡಿ

ಅಧಿಕಾರ ವಿಕೇಂದ್ರೀಕರಣಕ್ಕೆ ಸಂಬಂಧಿಸಿದ ವಿವಿಧ ಸಮಿತಿಗಳ ಶಿಫಾರಸುಗಳನ್ನು ರಾಷ್ಟ್ರದಾದ್ಯಂತ ಜಾರಿಗೊಳಿಸಲು ಆದ ವಿಳಂಬವು ಸ್ಥಳೀಯಾಡಳಿತ ಸಂಸ್ಥೆಗಳ ಸಬಲೀಕರಣ ಮತ್ತು ಏಕೀಕೃತ ವಿಧಾನಕ್ಕೆ ಅಡ್ಡಿಯಾಯಿತು.ಆದಕಾರಣ ಸ್ಥಳೀಯಾಡಳಿತ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸಿಂಧುತ್ವವನ್ನು ನೀಡಲು ತೀರ್ಮಾನಿಸಲಾಯಿತು. 1992-ರ 73,74 ಸಂವಿಧಾನ ತಿದ್ದುಪಡಿಯ ಪ್ರಕಾರ ಸ್ಥಳೀಯಾಡಳಿತ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರಗಳು ದೊರಕಿದವು. 73-ರ ಸಂವಿಧಾನ ತಿದ್ದುಪಡಿಯ ಪ್ರಕಾರ ಪಂಚಾಯತೀ ರಾಜ್ ಕಾನೂನು ಮತ್ತು 74-ನೆಯ ತಿದ್ದುಪಡಿಯ ಪ್ರಕಾರ ನಗರಪಾಲಿಕೆ ಕಾನೂನು ಜಾರಿಗೆ ಬಂತು.

| 73-ನೇ ಸಂವಿಧಾನ ತಿದ್ದುಪಡಿ<br>ಪಂಚಾಯತೀ ರಾಜ್ ವ್ಯವಸ್ಥೆ | 74-ನೇ ಸಂವಿಧಾನ ತಿದ್ದುಪಡಿ<br>ನಗರಪಾಲಿಕೆ ವ್ಯವಸ್ಥೆ |
|---|---|
| ಗ್ರಾಮಸಭೆಗಳ ರೂಪೀಕರಣ | ವಾರ್ಡ್ ಸಭೆಗಳ ರೂಪೀಕರಣ |
| ಆಡಳಿತ ಕಾಲಾವಧಿ 5 ವರ್ಷ | ಆಡಳಿತ ಕಾಲಾವಧಿ 5 ವರ್ಷ |
| ಪರಿಶಿಷ್ಟ ಜಾತಿ- ಪರಿಶಿಷ್ಟ ವರ್ಗ ಮೀಸಲಾತಿ | ಪರಿಶಿಷ್ಟ ಜಾತಿ - ಪರಿಶಿಷ್ಟ ವರ್ಗ ಮೀಸಲಾತಿ |
| ಮಹಿಳಾ ಮೀಸಲಾತಿ | ಮಹಿಳಾ ಮೀಸಲಾತಿ |
| ಚುನಾವಣೆಯ ಜವಾಬ್ದಾರಿ ರಾಜ್ಯ ಚುನಾವಣಾ ಆಯೋಗಕ್ಕೆ | ಚುನಾವಣೆಯ ಜವಾಬ್ದಾರಿ ರಾಜ್ಯ ಚುನಾವಣಾ ಆಯೋಗಕ್ಕೆ |
| ಐದು ವರ್ಷಕ್ಕೊಮ್ಮೆ ಹಣಕಾಸು ಆಯೋಗ | ಐದು ವರ್ಷಕ್ಕೊಂದು ಹಣಕಾಸು ಆಯೋಗ |
| ತ್ರಿಸ್ತರ ಪಂಚಾಯತ್ ವ್ಯವಸ್ಥೆ -<br>ಗ್ರಾಮ ಪಂಚಾಯತ್, ಬ್ಲೋಕ್ ಪಂಚಾಯತ್,<br>ಜಿಲ್ಲಾ ಪಂಚಾಯತ್ | ಎರಡು ರೀತಿಯ ನಗರ ಸ್ಥಳೀಯಾಡಳಿತ ವ್ಯವಸ್ಥೆ,<br>ನಗರ ಪಂಚಾಯತ್, ಮುನ್ಸಿಪಲ್ ಕೌನ್ಸಿಲ್,<br>(ಕೇರಳದಲ್ಲಿ ಮುನ್ಸಿಪಾಲಿಟಿ, ಕಾರ್ಪೋರೇಷನ್) |

**73,74 ಸಂವಿಧಾನ ತಿದ್ದುಪಡಿಗೆ ಸಂಬಂಧಿಸಿ ತರಗತಿಯಲ್ಲಿ ರಸಪ್ರಶ್ನೆಯನ್ನು ಏರ್ಪಡಿಸಿರಿ.**

- ಭಾರತದ ಗ್ರಾಮೀಣ ಅಧಿಕಾರ ವಿಕೇಂದ್ರೀಕರಣ ವ್ಯವಸ್ಥೆಯನ್ನು ಯಾವ ಹೆಸರಿನಿಂದ ಕರೆಯಲಾಗುತ್ತಿದೆ?
- ಪಂಚಾಯತೀ ರಾಜ್ ವ್ಯವಸ್ಥೆಯ ಮೂಲಭೂತ ಘಟಕ ಯಾವುದು?
- ..............................................................................................
- ..............................................................................................

**ಬಲವಂತರಾಯ್ ಮೆಹ್ತಾ ಮತ್ತು ಅಶೋಕ್ ಮೆಹ್ತಾ ಸಮಿತಿಗಳ ಯಾವೆಲ್ಲ ಸಲಹೆಗಳನ್ನು 73, 74 ಸಂವಿಧಾನ ತಿದ್ದುಪಡಿಯಲ್ಲಿ ಸೇರಿಸಲಾಗಿದೆ ಎಂದು ಕಂಡುಹಿಡಿದು ಪಟ್ಟಿ ಮಾಡಿರಿ.**

- ತ್ರಿಸ್ತರ ಪಂಚಾಯತ್ ವ್ಯವಸ್ಥೆ
-
-
-

## ಕೇರಳದ ಸ್ಥಳೀಯಾಡಳಿತ ಸಂಸ್ಥೆಗಳು - ರಚನೆ




ನಿಮ್ಮ ಸ್ಥಳೀಯಾಡಳಿತ ಸಂಸ್ಥೆಗೆ ಸಂಬಂಧಿಸಿದ ಮಾಹಿತಿಗಳನ್ನು ಸಂಗ್ರಹಿಸಿ ಬರೆಯಿರಿ.

| | |
|---|---|
| • ಗ್ರಾಮ ಪಂಚಾಯತ್ | |
| • ಗ್ರಾಮ ಪಂಚಾಯತ್ ವಾರ್ಡ್ ಮೆಂಬರ್ | |
| • ಗ್ರಾಮ ಪಂಚಾಯತ್ ಅಧ್ಯಕ್ಷರು | |
| • ಬ್ಲೋಕ್ ಪಂಚಾಯತ್ | |
| • ಬ್ಲೋಕ್ ಪಂಚಾಯತ್ ಅಧ್ಯಕ್ಷರು | |
| • ಜಿಲ್ಲಾ ಪಂಚಾಯತ್ | |
| • ಜಿಲ್ಲಾ ಪಂಚಾಯತ್ ಅಧ್ಯಕ್ಷರು | |
| • ಮುನ್ಸಿಪಾಲಿಟಿ | |
| • ಮುನ್ಸಿಪಲ್ ಕೌನ್ಸಿಲರ್ | |

| | |
|---|---|
| • ಮುನ್ಸಿಪಲ್ ಚೆಯರ್ ಪರ್ಸನ್ | |
| • ಕಾರ್ಪೋರೇಶನ್ | |
| • ಕಾರ್ಪೋರೇಶನ್ ಕೌನ್ಸಿಲರ್ | |
| • ಮೇಯರ್ | |

### ಜನಕೀಯ ಯೋಜನೆ - ಕೇರಳದಲ್ಲಿ

73, 74 ಸಂವಿಧಾನ ತಿದ್ದುಪಡಿಯ ಭಾಗವಾಗಿ 1996-ರಲ್ಲಿ ಕೇರಳದಲ್ಲಿ ಜಾರಿಗೊಳಿಸಲಾದ ಅಧಿಕಾರ ವಿಕೇಂದ್ರೀಕರಣ ಪ್ರಕ್ರಿಯೆಯನ್ನು 'ಜನಕೀಯ ಯೋಜನೆ' ಎಂದು ಕರೆಯುತ್ತಾರೆ. ಸ್ಥಳೀಯ ಆಡಳಿತ ವ್ಯವಸ್ಥೆಗೆ ಹೆಚ್ಚು ಅಧಿಕಾರಗಳನ್ನು ಮತ್ತು ಜವಾಬ್ದಾರಿಗಳನ್ನು ನೀಡಿ ಅವುಗಳನ್ನು ಜಾರಿಗೊಳಿಸಲು ಅಗತ್ಯವಾದ ನೌಕರರು, ಸಂಸ್ಥೆಗಳು, ಅನುದಾನಗಳು ಎಂಬಿವುಗಳನ್ನು ಲಭಿಸುವಂತೆ ಮಾಡಲು ಜನಕೀಯ ಯೋಜನೆಯು ದಾರಿ ಮಾಡಿಕೊಟ್ಟಿತು. ಈ ಸಂವಿಧಾನ ತಿದ್ದುಪಡಿಯ ಭಾಗವಾಗಿ ಸ್ಥಳೀಯಾಡಳಿತ ಸಂಸ್ಥೆಗಳಲ್ಲಿ ಸ್ತ್ರೀಯರಿಗೆ 33% ಮೀಸಲಾತಿ ಏರ್ಪಡಿಸಲಾಗಿತ್ತು. ಮುಂದೆ 2005-ರ ಪಂಚಾಯತ್ ರಾಜ್ ಆಕ್ಟ್ ತಿದ್ದುಪಡಿ ಪ್ರಕಾರ ಸ್ಥಳೀಯಾಡಳಿತ ಸಂಸ್ಥೆಗಳಲ್ಲಿ ಸ್ತ್ರೀಯರ ಪ್ರಾತಿನಿಧ್ಯವನ್ನು 50%ಕ್ಕೆ ಹೆಚ್ಚಿಸಲಾಯಿತು. ಸ್ಥಳೀಯಾಡಳಿತ ಸಂಸ್ಥೆಗಳ ಯೋಜನಾ ಪಾಲಿನಲ್ಲಿ 10% ಸ್ತ್ರೀಯರಿಗೆ ಮಾತ್ರವಾಗಿರುವ ಯೋಜನೆಗಳಿಗಾಗಿ ತೆಗೆದಿರಿಸಲಾಗುತ್ತದೆ. ಹಾಗೆ ಫಲಪ್ರದವಾದ ಅಧಿಕಾರ ವಿಕೇಂದ್ರೀಕರಣ ಪ್ರಕ್ರಿಯೆಯ ಮೂಲಕ ಕೇರಳವು ದೇಶಕ್ಕೆ ಮಾದರಿಯಾಗಿದೆ....

### ಜವಾಬ್ದಾರಿಗಳು ಹಲವು ವಿಧ

ಸ್ಥಳೀಯಾಡಳಿತ ಸಂಸ್ಥೆಯ ಮುಂದೆ ಸ್ಥಾಪಿಸಲಾಗಿರುವ ಬೋರ್ಡ್ ನೋಡಿರಿ. ಯಾವೆಲ್ಲಾ ಜವಾಬ್ದಾರಿಗಳು ಮತ್ತು ಸೇವೆಗಳು ಪಂಚಾಯತುಗಳಿಂದ ಲಭಿಸುತ್ತವೆಯೆಂದು ತಿಳಿದುಕೊಳ್ಳಿರಿ.

- ಜನನ-ಮರಣಗಳನ್ನು ದಾಖಲಿಸುವುದು
- ಅಂಕಿ ಅಂಶಗಳ ಲೆಕ್ಕಗಳನ್ನು ಶೇಖರಿಸಿಡುವುದು
- ಪ್ರಾಥಮಿಕ ಶಾಲೆಗಳ ಮೇಲ್ನೋಟ ಮತ್ತು ಜವಾಬ್ದಾರಿ
- ಮಾತೃ-ಶಿಶು ಕ್ಷೇಮ ಅಭಿವೃದ್ಧಿ
- ಕಟ್ಟಡ ನಿರ್ಮಾಣಕ್ಕೆ ಅನುಮತಿ ನೀಡುವುದು
- ಪರಂಪರಾಗತವಾದ ಜಲಮೂಲಗಳನ್ನು ಸಂರಕ್ಷಿಸುವುದು
- ಮಾಲಿನ್ಯ ನಿರ್ಮೂಲನೆ
- ಸಾಕು ನಾಯಿಗಳಿಗೆ ಲೈಸನ್ಸ್

ನಿಮ್ಮ ಕುಟುಂಬಕ್ಕೆ ಸ್ಥಳೀಯಾಡಳಿತ ಸಂಸ್ಥೆಯಿಂದ ಲಭಿಸಿದ ಸೇವೆಗಳು ಯಾವುವು? ಚರ್ಚಿಸಿರಿ.

**ಸ್ಥಳೀಯಾಡಳಿತ ಸಂಸ್ಥೆಗಳ ಜವಾಬ್ದಾರಿಗಳ ಕುರಿತು ತಿಳಿಯಲು ನಿಮ್ಮ ಜನಪ್ರತಿನಿಧಿಯೊಂದಿಗೆ ಒಂದು ಸಂದರ್ಶನವನ್ನು ನಡೆಸಲು ಅಗತ್ಯವಿರುವ ಪ್ರಶ್ನಾವಳಿಗಳನ್ನು ತಯಾರು ಮಾಡಿರಿ.**

## ಆದಾಯ ವಿವಿಧ ಮೂಲಗಳಿಂದ



*ಚಿತ್ರ 8.5*

ಮಿಲಿ : ಅಜ್ಜಿ ಇವತ್ತು ನಾವು ಪಂಚಾಯತಿನ ಜವಾಬ್ದಾರಿಗಳ ಬಗ್ಗೆ ಕಲಿತೆವು.

ಅಜ್ಜಿ : ಆಹಾ! ಯಾವೆಲ್ಲಾ ವಿಷಯಗಳ ಬಗ್ಗೆ ಕಲಿತಿರಿ?



*ಚಿತ್ರ 8.6*

ಮಿಲಿ : ಸಾಂಕ್ರಾಮಿಕ ರೋಗಗಳನ್ನು ತಡೆಯುವುದು, ಜಲ ಮೂಲಗಳನ್ನು ಸಂರಕ್ಷಿಸುವುದು, ಜನನ - ಮರಣಗಳ ದಾಖಲಾತಿ ಹೀಗೆ ಹಲವಾರು. ಅಜ್ಜಿ, ನೀವು ಮೊದಲು ಪಂಚಾಯತ್ ಅಧ್ಯಕ್ಷೆಯಾಗಿದ್ದೀರಲ್ಲವೆ? ಇವೆಲ್ಲಾ ಮಾಡಲು ಪಂಚಾಯತಿಗೆ ಆದಾಯವು ಎಲ್ಲಿಂದ ಲಭಿಸುವುದು ಎಂದು ಹೇಳಬಹುದೇ?



*ಚಿತ್ರ 8.7*

ಅಜ್ಜಿ : ಜಾಣೆ, ಒಳ್ಳೆಯ ಪ್ರಶ್ನೆ. ಪಂಚಾಯತಿಗೆ ವಿವಿಧ ರೀತಿಯ ಆದಾಯ ಮಾರ್ಗಗಳಿವೆ. ಉದಾಹರಣೆಗೆ, ಕೇಂದ್ರ, ರಾಜ್ಯ ಸರಕಾರದಿಂದ ಲಭಿಸುವ ನಿಧಿಗಳು ಅನುದಾನಗಳೂ ಇವೆ. ಅವಲ್ಲದೆ ಕಟ್ಟಡ ತೆರಿಗೆ, ಉದ್ಯೋಗ ತೆರಿಗೆ, ಮನೋರಂಜನಾ ತೆರಿಗೆ ಹೀಗೆ ಹಲವಾರು ತೆರಿಗೆಗಳಿಂದ ಪಂಚಾಯತುಗಳಿಗೆ ಆದಾಯ ಲಭಿಸುತ್ತದೆ.

ಮಿಲಿ : ಅಜ್ಜಿ... ಕಳೆದ ದಿವಸ ತಂದೆ ಕಟ್ಟಡ ಪರವಾನಿಗೆ ತೆಗೆಯಲು ಫೀಸು ಕಟ್ಟಿದ್ದಾರಲ್ಲ. ಅದು ಕೂಡ ಆದಾಯ ಮಾರ್ಗದಲ್ಲಿ ಸೇರುವುದಿಲ್ಲವೇ?

ಅಜ್ಜಿ : ಹೌದು.... ಅದು ಸೇರುತ್ತದೆ. ಪರವಾನಿಗೆ, ನೋಂದಣಿ ಮೊದಲಾದವುಗಳಿಂದ ಸಿಗುವ ಫೀಸು, ಬಸ್ ಸ್ಟ್ಯಾಂಡ್, ಪಂಚಾಯತಿನ ಅಧೀನದಲ್ಲಿರುವ ಮಾರುಕಟ್ಟೆಗಳು, ಮೈದಾನ ಇತ್ಯಾದಿಗಳನ್ನು ಉಪಯೋಗಿಸುವವರಿಂದ ಲಭಿಸುವ ಫೀಸು ಹಾಗೂ ಪಂಚಾಯತ್ ಹೇರುವ ದಂಡಗಳು ಆದಾಯ ಮಾರ್ಗದಲ್ಲಿ ಸೇರಿವೆ.

ಮಿಲಿ : ಆಹಾ... ಹಾಗಾದರೆ ಅಷ್ಟೊಂದು ಆದಾಯ ಮಾರ್ಗಗಳಿವೆಯಲ್ಲವೆ.



*ಚಿತ್ರ 8.8*

ಅಜ್ಜಿ : ಹೌದು. ಇದೆ. ಆದರೆ ಒಂದೊಂದು ಪಂಚಾಯತ್ ಒಳಗೊಂಡಿರುವ ಪ್ರದೇಶದ ರೀತಿಗೆ ಅನುಸರಿಸಿ ಆದಾಯದಲ್ಲಿ ವ್ಯತ್ಯಾಸವಾಗಬಹುದು ಎಂಬುದನ್ನು ಮರೆಯಬೇಡ. ಪ್ರಾದೇಶಿಕ ಅಭಿವೃದ್ಧಿಯು ಸಾಧ್ಯವಾಗಬೇಕಾದರೆ ಪಂಚಾಯತಿನಲ್ಲಿ ಧಾರಾಳ ಆದಾಯ ಬೇಕಲ್ಲವೇ? ಇದು ಮಾತ್ರವಲ್ಲ, ಸರಕಾರದ ಅನುಮತಿಯೊಂದಿಗೆ ಪಡೆಯುವ ವಿವಿಧ ಸಾಲ ಹಾಗೂ ಫಲಾನುಭವಿಗಳಿಂದ ಪಡೆಯುವ ಪಾಲು ಹಾಗೂ ನಿಬಂಧನೆಗೊಳಪಟ್ಟು ಸ್ವೀಕರಿಸಲಾಗುವ ಕೊಡುಗೆ ಅಥವಾ ದೇಣಿಗೆ ಕೂಡ ಆದಾಯದಲ್ಲಿ ಒಳಗೊಂಡಿದೆ. ಅರ್ಥವಾಯಿತೆ...?



**ಮೇಲೆ ಕೊಟ್ಟಿರುವ ಸಂಭಾಷಣೆಯಿಂದ ಸ್ಥಳೀಯಾಡಳಿತ ಸಂಸ್ಥೆಗಳ ವಿವಿಧ ಆದಾಯ ಮೂಲಗಳು ಯಾವುದೆಂದು ತಿಳಿದು ಪಟ್ಟಿ ಪೂರ್ತಿಗೊಳಿಸಿರಿ.**

- ವಿವಿಧ ರೀತಿಯ ತೆರಿಗೆಗಳು
- 
- 
- 

## ಬಿಕ್ಕಟ್ಟು ಮತ್ತು ಸವಾಲುಗಳು

ಅಧಿಕಾರ ವಿಕೇಂದ್ರೀಕರಣದ ಭಾಗವಾಗಿ ಕೇರಳವು ಜನಕೀಯ ಯೋಜನೆಯ ಮೂಲಕ ಅನೇಕ ಸಾಧನೆಗಳನ್ನು ಮಾಡಿದೆಯಾದರೂ, ಹಲವಾರು ಸವಾಲುಗಳನ್ನೂ ಎದುರಿಸುತ್ತಿದೆ. 'ಸ್ಥಳೀಯಾಡಳಿತ ಸಂಸ್ಥೆಗಳು ಎದುರಿಸುವ ಸವಾಲುಗಳು' ಎಂಬ ವಿಷಯದಲ್ಲಿ ಮಿಲನ್ ತಯಾರು ಮಾಡಿದ ಸೆಮಿನಾರ್ ಪ್ರಬಂಧದ ಪ್ರಧಾನ ಭಾಗಗಳನ್ನು ಕೆಳಗೆ ನೀಡಲಾಗಿದೆ.

### ಸ್ಥಳೀಯಾಡಳಿತ ಸಂಸ್ಥೆಗಳು ಎದುರಿಸುತ್ತಿರುವ ಸವಾಲುಗಳು



ಅಧಿಕಾರ ವಿಕೇಂದ್ರೀಕರಣವಾಗಿ ಕಾಲು ಶತಮಾನ ದಾಟಿದರೂ ಸಾಧನೆಗಳನ್ನು ಮಾತ್ರ ಎತ್ತಿ ತೋರಿಸದೆ ಕೊರತೆಗಳನ್ನು ಕೂಡ ತಿಳಿದುಕೊಂಡು ಕಾರ್ಯ ಪ್ರವೃತ್ತರಾಗಬೇಕಾದುದು ಆವಶ್ಯಕವಾಗಿದೆ. ಸ್ಥಳೀಯಾಡಳಿತ ಸಂಸ್ಥೆಗಳು ಎದುರಿಸುತ್ತಿರುವ ಪ್ರಧಾನ ಸವಾಲುಗಳು ಮತ್ತು ಸಮಸ್ಯೆಗಳನ್ನು ಕೆಳಗೆ ನೀಡಲಾಗಿದೆ.

- ಯೋಜನಾ ಪಾಲು ಕಾಲಕ್ಕೆ ಸರಿಯಾಗಿ ಸಿಗದಿರುವ ಸ್ಥಿತಿ.
- ವಿಕೇಂದ್ರೀಕರಣವು ಪೂರ್ಣವಾಗಿ ಜಾರಿಗೊಳಿಸದ ಸ್ಥಿತಿ.
- ಗ್ರಾಮಸಭೆಗಳಲ್ಲಿ ಜನ ಸಹಭಾಗಿತ್ವದ ಕೊರತೆ.
- ಗ್ರಾಮೀಣ ವಲಯದ ಪಂಚಾಯತ್ ಗಳಲ್ಲಿ ಸ್ವಂತ ಆದಾಯದ ಕೊರತೆ.
- ಮೂಲಭೂತ ಸೌಕರ್ಯಗಳ ಕೊರತೆಗಳು

**ನಿಮ್ಮ ಸ್ಥಳೀಯಾಡಳಿತ ಸಂಸ್ಥೆಯ ಕುರಿತು ಒಂದು ಲಘುಲೇಖನವನ್ನು ತಯಾರಿಸಿ ತರಗತಿಯಲ್ಲಿ ಮಂಡಿಸಿರಿ.**

**'ನಾನು ಪಂಚಾಯತ್ ಅಧ್ಯಕ್ಷ/ಮುನ್ಸಿಪಲ್ ಚೆಯರ್ ಪರ್ಸನ್/ಕೋರ್ಪರೇಶನ್ ಮೇಯರ್ ಆದರೆ' ನಿಮ್ಮ ಆಶಯಗಳನ್ನು ತರಗತಿಯಲ್ಲಿ ಮಂಡಿಸಿರಿ.**

ಜನರ ಸಹಭಾಗಿತ್ವ ಇದ್ದಾಗ ಮಾತ್ರ ಪ್ರಜಾಪ್ರಭುತ್ವವು ಅರ್ಥಪೂರ್ಣವಾಗುತ್ತದೆ. ಅಧಿಕಾರ ವಿಕೇಂದ್ರೀಕರಣವು ಇದನ್ನು ಖಾತರಿಪಡಿಸುತ್ತದೆ. ಇದು ಸಮಾಜದ ಎಲ್ಲಾ ವಿಭಾಗಗಳ ಜನರೂ ಆಡಳಿತದಲ್ಲಿ ಪಾಲುದಾರರಾಗುವ ಪ್ರಕ್ರಿಯೆಯೂ ಆಗಿದೆ. ಆದ್ದರಿಂದ ಪ್ರಜಾಸತ್ತಾತ್ಮಕ ಅಧಿಕಾರವು ಸದೃಢವಾಗಲು ಸವಾಲುಗಳನ್ನು ಪರಿಹರಿಸಿಕೊಂಡು ಮುಂದೆ ಸಾಗಬೇಕಾದ ಅನಿವಾರ್ಯತೆ ಇದೆ.

## ಮುಂದುವರಿದ ಚಟುವಟಿಕೆಗಳು

- ಸ್ಥಳೀಯಾಡಳಿತ ಸಂಸ್ಥೆಗಳ ಚಟುವಟಿಕೆಗಳ ಕುರಿತು ಜನಪ್ರತಿನಿಧಿಗಳೊಂದಿಗೆ ಸಂದರ್ಶನವೊಂದನ್ನು ಏರ್ಪಡಿಸಿರಿ.
- ಸ್ಥಳೀಯಾಡಳಿತ ಸಂಸ್ಥೆಗಳ ಚಟುವಟಿಕೆಗಳನ್ನು ನೇರವಾಗಿ ಮನವರಿಕೆ ಮಾಡಿಕೊಳ್ಳಲು ಪಂಚಾಯತ್/ ಮುನ್ಸಿಪಾಲಿಟಿ/ಕಾರ್ಪೋರೇಶನ್ ಆಫೀಸಿಗೆ ಶೈಕ್ಷಣಿಕ ಪ್ರವಾಸವನ್ನು ಏರ್ಪಡಿಸಿರಿ. ಪ್ರವಾಸದ ಡಿಜಿಟಲ್ ದಾಖಲೆಯನ್ನು ತಯಾರಿಸಿರಿ.
- ನಿಮ್ಮ ಪ್ರದೇಶದ ಗ್ರಾಮಸಭೆ/ವಾರ್ಡ್ ಸಭೆಯನ್ನು ನಿರೀಕ್ಷಿಸಿ ಮಾಹಿತಿಗಳನ್ನು ಸಂಗ್ರಹಿಸಿ ವರದಿ ತಯಾರಿಸಿ.
- '73,74 ಸಂವಿಧಾನ ತಿದ್ದುಪಡಿಯ ಮಹಿಳಾ ಮೀಸಲಾತಿ' ಎಂಬ ವಿಷಯದ ಆಧಾರದಲ್ಲಿ ಸಂವಾದವನ್ನು ಏರ್ಪಡಿಸಿರಿ.
- ತರಗತಿ ಸಭೆ ಏರ್ಪಡಿಸುವಾಗ ಮಂಡಿಸಲಾದ ಅಭಿವೃದ್ಧಿಯ ಅಂಶಗಳನ್ನು ಸೇರಿಸಿಕೊಂಡು ಒಂದು 'ತರಗತಿ ಅಭಿವೃದ್ಧಿ ದಾಖಲೆ'ಯನ್ನು ತಯಾರಿಸಿರಿ. ಮೊದಲು ಶಾಲಾ ಪಾರ್ಲಿಮೆಂಟ್‌ನಲ್ಲಿ ಮಂಡಿಸಿ ಮುಂದೆ ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯರನ್ನು ಆಮಂತ್ರಿಸಿ ಅವರ ಸಾನಿಧ್ಯದಲ್ಲಿ ಶಾಲಾ ಅಸೆಂಬ್ಲಿಯಲ್ಲಿ ಬಿಡುಗಡೆ ಮಾಡಿರಿ.




# ಭೂಮಿಯನ್ನು ತಿಳಿಯಲು ಭೂಪಟಗಳು ಮತ್ತು ಆಧುನಿಕ ತಂತ್ರಜ್ಞಾನಗಳು




ಚಿತ್ರ 9.1

ಒಂದು ಮಗು ತನ್ನ ತಂದೆಯೊಂದಿಗೆ ನಡೆಸಿದ ಪ್ರಯಾಣದ ಕುರಿತಾದ ಸಂಭಾಷಣೆಯನ್ನು ಓದಿದಿರಲ್ಲವೆ. ಅವರ ಪ್ರಯಾಣದಲ್ಲಿ ಭೂಪಟಗಳು ಎಷ್ಟರ ಮಟ್ಟಿಗೆ ಸಹಾಯಕವಾಗಿವೆ ಎಂಬುದನ್ನು ನೋಡಿದಿರಲ್ಲವೆ. ವಾಹನದಲ್ಲಿ ಮತ್ತು ಮೊಬೈಲ್ ಫೋನ್‌ಗಳಲ್ಲಿ ಡಿಜಿಟಲ್ ಭೂಪಟಗಳನ್ನು ನೀವು ನೋಡಿರಬಹುದು. ಪ್ರಯಾಣಗಳಲ್ಲಿ ಇಂತಹ ಭೂಪಟಗಳ ಬಳಕೆಯನ್ನು ನೀವು ಗಮನಿಸಿಲ್ಲವೆ. ಶಾಲೆಯ ಸಮಾಜಶಾಸ್ತ್ರ ಪ್ರಯೋಗಾಲಯದಲ್ಲಿ ಪ್ರದರ್ಶಿಸಿದ ವಿವಿಧ ತರದ ಭೂಪಟಗಳು ನಿಮಗೆ ಪರಿಚಯವಿದೆ.

ಯಾವೆಲ್ಲ ಸಂದರ್ಭಗಳಲ್ಲಿ ಭೂಪಟಗಳನ್ನು ನಾವು ಬಳಸುತ್ತೇವೆ? ಬರೆಯಿರಿ.

- ಒಂದು ಸ್ಥಳದ ಸ್ಥಾನವನ್ನು ತಿಳಿಯಲು
- ಉದ್ದೇಶಿಸಿದ ಸ್ಥಳಗಳಿಗಿರುವ ದಾರಿಗಳನ್ನು ವೈಜ್ಞಾನಿಕವಾಗಿ ಕಂಡುಹಿಡಿಯಲು
- ಭೂ ಪ್ರಕೃತಿಯನ್ನು ತಿಳಿಯಲು
- 



**ಭೂಪಟ ಮತ್ತು ಭೂಗೋಳದ ಚಿತ್ರಗಳನ್ನು ಕೆಳಗೆ ನೀಡಲಾಗಿದೆ. ಅವುಗಳನ್ನು ನಿರೀಕ್ಷಿಸಿ ಸೂಚನೆಗಳ ಆಧಾರದಲ್ಲಿ ಎರಡರ ನಡುವಿನ ವ್ಯತ್ಯಾಸವನ್ನು ಕಂಡುಹಿಡಿಯಿರಿ. ಸಮಾಜವಿಜ್ಞಾನ ಪ್ರಯೋಗಾಲಯದಲ್ಲಿರುವ ಗ್ಲೋಬ್ ಮತ್ತು ಭೂಪಟಗಳನ್ನು ಇದಕ್ಕಾಗಿ ಉಪಯೋಗಿಸುವಿರಲ್ಲವೆ.**






*ಚಿತ್ರಗಳು 9.2*

ಸೂಚಕಗಳು:

- ಆಕೃತಿ
- ಅಕ್ಷಾಂಶ - ರೇಖಾಂಶ ರೇಖೆಗಳು
- ಉಪಯೋಗ

**ಭೂಗೋಳ ಮತ್ತು ಭೂಪಟಗಳ ಕೆಲವು ಪ್ರಮುಖ ವೈಶಿಷ್ಟ್ಯಗಳನ್ನು ಕೆಳಗೆ ನೀಡಲಾಗಿದೆ. ಅವುಗಳನ್ನುಭೂಗೋಳಗಳ ವಿಶೇಷತೆಗಳು ಮತ್ತು ಭೂಪಟಗಳ ವಿಶೇಷತೆಗಳಾಗಿ ವರ್ಗೀಕರಿಸಿ ಪಟ್ಟಿ ಮಾಡಿರಿ.**

- ಭೂಮಿಯ ನಿಜವಾದ ಮಾದರಿ.
- ಭೂಮಿಯ ಎರಡು ಆಯಾಮದ ಚಿತ್ರೀಕರಣ.
- ಭೂಮಿಯ ಗೋಲಾಕಾರದ ಚಿತ್ರೀಕರಣ.
- ಭೂಮಿಯನ್ನು ಭಾಗಶಃ ಅಥವಾ ಸಂಪೂರ್ಣವಾಗಿ ಒಂದು ವಿಸ್ತಾರವಾದ ತಲದಲ್ಲಿ ಚಿತ್ರೀಕರಿಸುವುದು.
- ಭೂಮಿಯನ್ನು ಸಂಪೂರ್ಣವಾಗಿ ಚಿತ್ರೀಕರಿಸುವುದರಿಂದ ಭೂಮಿಯ ಸಮಗ್ರ ದೃಶ್ಯ ಪ್ರಜ್ಞೆಯನ್ನು ನೀಡುತ್ತದೆ.
- ರೇಖಾಂಶ ರೇಖೆ ಮತ್ತು ಅಕ್ಷಾಂಶ ರೇಖೆಗಳನ್ನು ನೇರ ರೇಖೆಗಳಾಗಿ ಚಿತ್ರಿಸುತ್ತದೆ.
- ರೇಖಾಂಶ ರೇಖೆಗಳನ್ನು ಅರ್ಧವೃತ್ತಗಳಾಗಿಯೂ ಅಕ್ಷಾಂಶ ರೇಖೆಗಳನ್ನು ಕೇಂದ್ರೀಕೃತ ವೃತ್ತಗಳಾಗಿ ಚಿತ್ರಿಸುವುದು.
- ಒಂದು ನಿರ್ದಿಷ್ಟ ಪ್ರದೇಶದ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಲು ಮತ್ತು ಪ್ರಯಾಣಕ್ಕಾಗಿ ಮಾರ್ಗಗಳನ್ನು ಯೋಜಿಸಲು ಉಪಯುಕ್ತವಾಗಿದೆ.
- 

ಈಗ ಹೇಳಿ, ಭೂಪಟಗಳು ಎಂದರೇನು? ಭೂಮಿಯನ್ನು ಪೂರ್ಣವಾಗಿಯೂ ಭಾಗಿಕವಾಗಿಯೂ ಒಂದು ಸಮತಟ್ಟಾದ ಮೇಲ್ಮೈಯಲ್ಲಿ ಚಿತ್ರಿಸುವ ಮೂಲಕ ಭೂಪಟಗಳನ್ನು ತಯಾರಿಸಲಾಗುತ್ತದೆ. ಭೂಮಿಯನ್ನು ಪೂರ್ಣವಾಗಿಯೂ ಭಾಗಿಕವಾಗಿಯೂ ಚಿತ್ರೀಕರಿಸುವ ಇಂತಹ ಸಮತಟ್ಟಾದ ಮೇಲ್ಮೈಗಳು ಭೂಪಟಗಳಾಗಿವೆ.

## ಅಗತ್ಯಗಳು ವಿಭಿನ್ನ - ಭೂಪಟಗಳು ವಿಭಿನ್ನ

ಯಾವೆಲ್ಲಾ ಅಗತ್ಯಗಳಿಗಾಗಿ ನಾವು ಭೂಪಟಗಳನ್ನು ಉಪಯೋಗಿಸುತ್ತೇವೆಂದು ನೀವು ಕಂಡುಕೊಂಡಿರಲ್ಲವೆ. ಒಂದೇ ಭೂಪಟವನ್ನು ಹಲವು ಅಗತ್ಯಗಳಿಗಾಗಿ ಬಳಸಬಹುದೇ. ನಮ್ಮ ಅಗತ್ಯಗಳು ವಿಭಿನ್ನವಾಗಿವೆ ಮತ್ತು ಅದಕ್ಕೆ ಅನುಗುಣವಾಗಿ ಭೂಪಟಗಳು ವಿಭಿನ್ನವಾಗಿವೆ. ಭೂಪಟಗಳನ್ನು ಪ್ರಧಾನವಾಗಿ ಕೆಳಗೆ ನೀಡಲಾದ ಎರಡು ಮುಖ್ಯ ಅಂಶಗಳ ಆಧಾರದಲ್ಲಿ ವರ್ಗೀಕರಿಸಬಹುದು.

- ಭೂಪಟಗಳು ಪೂರೈಸುವ ಕಾರ್ಯಗಳು
- ಭೂಪಟಗಳು ಸಿದ್ಧಪಡಿಸಿದ ಅಳತೆ ಅಥವಾ ಮಾನ

## ಭೂಪಟಗಳ ಇತಿಹಾಸ

ಭೂಪಟ ತಯಾರಿಯ ಚರಿತ್ರೆಯು ಮಾನವ ಕುಲದ ಇತಿಹಾಸದಷ್ಟು ಹಳೆಯದು. ಪ್ರಾಚೀನ ಭೂಪಟಗಳನ್ನು ಕಲ್ಲು ಮತ್ತು ಮರದ ಮೇಲೆ ಕೆತ್ತಲಾಗಿದೆ; ಅವುಗಳನ್ನು ಮಣ್ಣಿನಲ್ಲಿಯೂ ಪ್ರಾಣಿಗಳ ಚರ್ಮದಲ್ಲಿಯೂ ಮತ್ತು ಬಟ್ಟೆಯಲ್ಲಿಯೂ ತಯಾರಿಸಲಾಗಿವೆ. ನಮಗೆ ತಿಳಿದಿರುವ ಅತ್ಯಂತ ಹಳೆಯ ಭೂಪಟವನ್ನು ಸುಮಾರು 2500 ಬಿ.ಸಿ.ಇ ಯಲ್ಲಿ ತಯಾರಿಸಲಾಗಿದೆ ಎಂದು ಊಹಿಸಲಾಗಿದೆ. ಇದನ್ನು ಮೆಸೊಪೊಟೋಮಿಯಾದ ಜೇಡಿ ಮಣ್ಣಿನ ಫಲಕದ ಮೇಲೆ ಚಿತ್ರಿಸಲಾಗಿದೆ. ಎರಡನೇ ಶತಮಾನದಲ್ಲಿ ಜೀವಿಸಿದ್ದ ಗ್ರೀಕ್ ಭೂ ವಿಜ್ಞಾನಿ ಟಾಲೆಮಿ ಭೂಮಿಯು ದುಂಡಾಗಿದೆ ಎಂದು ನಂಬಿದ್ದನು. ಟಾಲೆಮಿ ಅದರಂತೆ ಭೂಪಟ ಮಾಡಲು ಪ್ರಯತ್ನಿಸಿದ್ದನು. ಬಿ.ಸಿ.ಇ 1400-ರ ಕೊನೆಯಲ್ಲಿ ಒಂದು ಅಟ್ಲಾಸಿನಲ್ಲಿ ಮುದ್ರಿಸಿ ಬರುವವರೆಗೆ ಟಾಲೆಮಿಯ ಭೂಪಟದ ಕುರಿತು ಹೊರ ಜಗತ್ತಿಗೆ ತಿಳಿದಿರಲಿಲ್ಲ. ನಂತರ ಅದು ಕೊಲಂಬಸ್, ಕಾಬಟ್ಟ್, ಮೆಗಲನ್, ಡ್ರೇಕ್, ಮತ್ತು ವೆಸ್ಪೂಚಿ ಮೊದಲಾದ ನಾವಿಕರಿಗೆ ಭೌಗೋಳಿಕ ಮಾಹಿತಿಯ ಮೂಲವಾಯಿತು. ಇಂದಿಗೂ ಟಾಲೆಮಿಯು ನಿರ್ಮಿಸಿದ ಗೋಳಾಕಾರದ ಭೂಪಟಕ್ಕೆ ಆಧುನಿಕ ಭೂಪಟಗಳೊಂದಿಗೆ ಸಾಮ್ಯವಿದೆ. ಗ್ರೀಕ್ ಮತ್ತು ಅರಬ್ ಭೂಗೋಳಶಾಸ್ತ್ರಜ್ಞರು ಆಧುನಿಕ ಭೂಪಟ ನಿರ್ಮಾಣಕ್ಕಾಗಿ ಅಡಿಪಾಯ ಹಾಕಿದರು. ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಭೂಪಟಗಳನ್ನು ನಿರ್ಮಿಸುವ ಪ್ರಯತ್ನಗಳು ನಡೆದಿವೆ ಎಂದು ನಂಬಲಾಗಿದೆ.




*ಚಿತ್ರ 9.3*
*ಟಾಲೆಮಿಯ ಜಾಗತಿಕ ಭೂಪಟ*

**ನಿಮ್ಮ ಸಮಾಜವಿಜ್ಞಾನ ಪ್ರಯೋಗಾಲಯದಲ್ಲಿರುವ ಭೂಪಟಗಳ ಶೀರ್ಷಿಕೆಗಳನ್ನು ಪರಿಶೀಲಿಸಿ ಅವುಗಳು ಯಾವುವು ಎಂದು ಪಟ್ಟಿ ಮಾಡಿರಿ.**

- ರಾಜಕೀಯ ಭೂಪಟ
- ಭೌಗೋಳಿಕ ಭೂಪಟ
- ಸಾರಿಗೆ ಭೂಪಟ
- ಮಣ್ಣಿನ ಭೂಪಟ
- 

ಒಂದೊಂದು ಭೂಪಟಗಳಿಗೂ ವಿಭಿನ್ನ ಶೀರ್ಷಿಕೆಗಳಿವೆ ಎಂದು ತಿಳಿಯಿತಲ್ಲವೆ? ಒಂದೊಂದು ಭೂಪಟಗಳು ಅದು ಪೂರೈಸುವ ಕಾರ್ಯವನ್ನು ಆಧರಿಸಿ ಅವುಗಳಿಗೆ ಶೀರ್ಷಿಕೆ ನೀಡಲಾಗಿದೆ. ಕೇರಳದ ರಾಜಕೀಯ ಭೂಪಟವನ್ನು ಪರಿಶೀಲಿಸಿ, ಅದರಿಂದ ನಮಗೆ ಕೇರಳದ ಜಿಲ್ಲೆಗಳ ಮಾಹಿತಿ ತಿಳಿಯಬಹುದಲ್ಲವೇ? ಈ ರೀತಿ ಭೂಖಂಡ, ದೇಶ ಅಥವಾ ರಾಜ್ಯದ ರಾಜಕೀಯ ಭೂಪಟಗಳನ್ನು ನಿರೀಕ್ಷಿಸಿ ಅದು ಒದಗಿಸುವ ಮಾಹಿತಿಯನ್ನು ಪಟ್ಟಿ ಮಾಡಿರಿ.

ರಾಜಕೀಯ ಭೂಪಟಗಳ ಉದ್ದೇಶಗಳು ಏನೆಂದು ನಿಮಗೆ ಈಗ ಅರ್ಥವಾಯಿತಲ್ಲವೇ. ಮಣ್ಣು ಭೂಪಟವು ಒಂದು ಪ್ರದೇಶದ ಮಣ್ಣಿನ ವಿಧಗಳನ್ನು ತೋರಿಸುತ್ತದೆ. ಒಂದು ಪ್ರದೇಶದ ವಿವಿಧ ರೀತಿಯ ಮಣ್ಣಿನ ಬಗ್ಗೆ ಮಾಹಿತಿಯನ್ನು ಒದಗಿಸುವುದು ಮಣ್ಣು ಭೂಪಟದ ಉದ್ದೇಶವಾಗಿದೆ.

ಹಾಗಾದರೆ ಭೂ ಪ್ರಕೃತಿ ಭೂಪಟದ ಉದ್ದೇಶವೇನಾಗಿರಬಹುದು?

ಭೂಪಟಗಳ ಕಾರ್ಯವು ಅದರ ವಿಷಯಕ್ಕೆ ಸಂಬಂಧಿಸಿದೆ ಎಂದು ಅರ್ಥವಾಯಿತಲ್ಲವೇ

ಭೂಪಟಗಳನ್ನು ಅವುಗಳು ನಿರ್ವಹಿಸುವ ಕಾರ್ಯದ ಆಧಾರದಲ್ಲಿ ಎರಡಾಗಿ ವಿಂಗಡಿಸಬಹುದು

ಅವು ಯಾವುವೆಂದು ನೋಡಿರಿ.

| | |
|---|---|
| **ಭೌತಿಕ ಭೂಪಟಗಳು** | ಭೂ ಪ್ರಕೃತಿ, ಮಣ್ಣು, ನದಿಗಳು, ಹವಾಗುಣ, ನೈಸರ್ಗಿಕ ಸಸ್ಯಜಾಲಗಳು ಮೊದಲಾದ ಪ್ರಕೃತಿದತ್ತ ವಿಶೇಷತೆಗಳನ್ನು ಚಿತ್ರಿಸುವ ಭೂಪಟಗಳು. |
| **ಸಾಂಸ್ಕೃತಿಕ ಭೂಪಟಗಳು** | ಮಾನವ ನಿರ್ಮಿತ ವಿಶೇಷತೆಗಳನ್ನು ಚಿತ್ರಿಸುವ ಭೂಪಟಗಳು. ಉದಾಹರಣೆಗೆ- ದೇಶಗಳು, ರಾಜ್ಯಗಳು, ಜಿಲ್ಲೆಗಳು ಮೊದಲಾದ ರಾಜಕೀಯ ವಿಭಾಗಗಳು, ರಸ್ತೆಗಳು, ರೈಲ್ವೆಹಳಿಗಳು, ಬಂದರುಗಳು, ಜನಸಂಖ್ಯಾವಿವರಣೆ ಮೊದಲಾದವುಗಳು. |

**ಕೆಳಗೆ ನೀಡಲಾದ ಭೂಪಟಗಳನ್ನು ಭೌತಿಕ ಭೂಪಟಗಳು ಮತ್ತು ಸಾಂಸ್ಕೃತಿಕ ಭೂಪಟಗಳೆಂದು ವರ್ಗೀಕರಿಸಿ ಪಟ್ಟಿ ತಯಾರಿಸಿರಿ.**

**ಭೂಪ್ರಕೃತಿ ಭೂಪಟ, ಮಣ್ಣು ಭೂಪಟ, ಹವಾಗುಣ ಭೂಪಟ, ನೈಸರ್ಗಿಕ ಸಸ್ಯಜಾಲ ಭೂಪಟ, ನದಿ ವ್ಯವಸ್ಥೆಯ ಭೂಪಟ, ರಾಜಕೀಯ ಭೂಪಟ, ಜನಸಂಖ್ಯೆ ಭೂಪಟ, ಆರ್ಥಿಕ ಭೂಪಟ, ಸಾರಿಗೆ ಭೂಪಟ.**

**ವಿವಿಧ ಭೂ ಮೇಲ್ಮೈ ವಿಶೇಷತೆಗಳು ಮತ್ತು ಅವುಗಳನ್ನು ಚಿತ್ರಿಸಲಾದ ಭೂಪಟಗಳ ಹೆಸರುಗಳನ್ನು ಎ, ಬಿ ಎಂಬೀ ಕಾಲಂಗಳಲ್ಲಿ ನೀಡಲಾಗಿದೆ. ಅವುಗಳನ್ನು ಹೊಂದಿಸಿ ಬರೆಯಿರಿ.**

| ಎ | ಬಿ |
|---|---|
| • ಮಳೆಯ ವಿತರಣೆ | • ಕೃಷಿ ಭೂಪಟ |
| • ಅರಣ್ಯ ವ್ಯಾಪ್ತಿ | • ಸಾರಿಗೆ ಭೂಪಟ |
| • ಭತ್ತದ ಗದ್ದೆಗಳ ವಿಸ್ತರಣೆ | • ಹವಾಗುಣ ಭೂಪಟ |
| • ರಸ್ತೆಜಾಲ | • ನೈಸರ್ಗಿಕ ಸಸ್ಯಜಾಲ ಭೂಪಟ |

ವಿವಿಧ ರೀತಿಯ ಭೂಪಟಗಳ ಬಗ್ಗೆ ನಿಮಗೆ ಪರಿಚಯವಾಯಿತಲ್ಲವೇ? ಅವು ಪ್ರತಿಯೊಂದು ವಿಭಿನ್ನ ಭೌಗೋಳಿಕ ವಿಶೇಷತೆಗಳನ್ನು ಪ್ರತ್ಯೇಕವಾಗಿ ಚಿತ್ರಿಸಿರುವವುಗಳಾಗಿವೆ. ಭೂಮಿಯ ಮೇಲಿನ ವಿಭಿನ್ನವಾದ

ವಿಶೇಷತೆಗಳನ್ನು ಚಿತ್ರಿಸಲು ಪ್ರತ್ಯೇಕ ಭೂಪಟಗಳನ್ನು ಯಾಕಾಗಿ ಉಪಯೋಗಿಸುತ್ತಾರೆಂದು ನಿಮಗೆ ತಿಳಿದಿದೆಯೇ? ಕೆಳಗೆ ನೀಡಲಾದ ಭೂಪಟಗಳನ್ನು ನೋಡಿರಿ.







*ಚಿತ್ರಗಳು 9.4*

ಮೊದಲ ಭೂಪಟವು ಭಾರತದಲ್ಲಿನ ಮಣ್ಣಿನ ವಿತರಣೆಯನ್ನು ತೋರಿಸುತ್ತದೆ ಹಾಗೂ ಎರಡನೆ ಭೂಪಟವು ಭಾರತದಲ್ಲಿನ ನೈಸರ್ಗಿಕ ಸಸ್ಯವರ್ಗದ ವಿತರಣೆಯನ್ನು ತೋರಿಸುತ್ತದೆ. ಈ ಎರಡು ಭೂಪಟಗಳಲ್ಲಿರುವ ಮಾಹಿತಿಯನ್ನು ಒಂದೇ ಭೂಪಟದಲ್ಲಿ ಚಿತ್ರಿಸಲಾಗುತ್ತದೆ ಎಂದು ಊಹಿಸಿರಿ. ಆಗ ಏನು ಸಂಭವಿಸುತ್ತದೆ? ಎರಡು ಭೂಪಟಗಳ ಮಾಹಿತಿಗಳು ಪರಸ್ಪರ ಮಿಶ್ರವಾಗಿ ನಮಗೆ ಹೆಚ್ಚು ಗೊಂದಲವನ್ನು ಉಂಟುಮಾಡುವುದು ಮತ್ತು ಮಾಹಿತಿ ಸಂಗ್ರಹವು ಹೆಚ್ಚು ಸಂಕೀರ್ಣವಾಗುವುದು. ಆದುದರಿಂದ ಪ್ರತಿಯೊಂದು ಪ್ರಮುಖ ಭೂ ಮೇಲ್ಮೈ ವಿಶೇಷತೆಗಳನ್ನು ಪ್ರತ್ಯೇಕ ಭೂಪಟಗಳಲ್ಲಿ ಚಿತ್ರಿಸಲಾಗುತ್ತದೆ. ಈ ರೀತಿಯ ನಿರ್ದಿಷ್ಟ ವಿಷಯವನ್ನು ಮಾತ್ರ ಒಳಗೊಂಡಿರುವ ಭೂಪಟಗಳನ್ನು ವಿಷಯಾಧಾರಿತ ಭೂಪಟಗಳು ಎಂದು ಕರೆಯುತ್ತೇವೆ.

**ಅಟ್ಲಾಸ್ ಉಪಯೋಗಿಸಿ ಈ ರೀತಿಯ ಭೂಪಟಗಳನ್ನು ಗುರುತಿಸಿ ಅವುಗಳ ವಿಶೇಷತೆಗಳನ್ನು ತಿಳಿದುಕೊಳ್ಳಿರಿ.**

ಭೂಪಟಗಳನ್ನು ಸಿದ್ಧಪಡಿಸಿದ ಮಾನದ ಆಧಾರದಲ್ಲಿ ಹೇಗೆ ವರ್ಗೀಕರಿಸಬಹುದು ಎಂದು ನೋಡೋಣ. ಎಲ್ಲಾ ಭೂಪಟಗಳನ್ನು ಒಂದು ನಿರ್ದಿಷ್ಟ ಅಳತೆ ಅಥವಾ ಮಾನದ ಆಧಾರದಲ್ಲಿ ತಯಾರಿಸಲಾಗಿದೆ. ಭೂಪಟಗಳನ್ನು ತಯಾರಿಸಲಿರುವ ಮಾನ ಯಾವುದು? ನಿಮ್ಮ ತರಗತಿಯ ರೂಪುರೇಖೆಯನ್ನು ನೋಟ್ ಪುಸ್ತಕದಲ್ಲಿ ಚಿತ್ರಿಸಿರಿ. ಪ್ರತಿಯೊಬ್ಬರು ಚಿತ್ರಿಸಿದ ರೂಪುರೇಖೆಗಳು ಒಂದೇ ರೀತಿ ಆಗಿವೆಯೇ? ಅಲ್ಲವೆಂದು ತಿಳಿಯಿತಲ್ಲವೇ? ಇದು ಯಾಕೆ ಹೀಗಾಯಿತು? ಯಾಕೆಂದರೆ ನೀವು ಒಂದು ಸಾಮಾನ್ಯ ಅಳತೆ ಅಥವಾ ಮಾನವನ್ನು ಆಧಾರವಾಗಿರಿಸಿ ರೂಪುರೇಖೆಯನ್ನು ತಯಾರಿಸಿದ್ದಲ್ಲ.

ನಿಖರವಾದ ಅಳತೆಯಲ್ಲಿ ತರಗತಿಯ ನಿಜವಾದ ವಿಸ್ತೀರ್ಣದಲ್ಲಿ ಒಂದು ರೂಪುರೇಖೆ ತಯಾರಿಸಲು ಸಾಧ್ಯವೇ? ಖಂಡಿತ ಇಲ್ಲ. ಯಾಕೆಂದರೆ ತರಗತಿಯ ನಿಖರವಾದ ವಿಸ್ತೀರ್ಣದಲ್ಲಿ ರೂಪುರೇಖೆಯನ್ನು ಚಿತ್ರಿಸಲು ಆ ಪ್ರದೇಶದ ವಿಸ್ತೀರ್ಣದಲ್ಲಿರುವ ಒಂದು ಕಾಗದ ಅಥವಾ ನೋಟ್‌ಪುಸ್ತಕ ಅಗತ್ಯವಿದೆ. ಹಾಗಾದರೆ ಒಂದು ಪ್ರದೇಶದ ವಿಚಾರದಲ್ಲೋ? ಒಂದು ಪ್ರದೇಶದ ಭೂಪಟವನ್ನು ನಿಖರವಾದ ಅಳತೆಯಲ್ಲಿಯೂ ಯಥಾರ್ಥ ವಿಸ್ತೀರ್ಣದಲ್ಲಿಯೂ ತಯಾರಿಸಲು ಆ ಪ್ರದೇಶದಷ್ಟೇ ವಿಸ್ತಾರವಿರುವ ಒಂದು ಮೇಲ್ಮೈ ಅಥವಾ ಕಾಗದ ಅಗತ್ಯವಿದೆ. ಇದು ಸಾಧ್ಯವಾಗುವ ಕಾರ್ಯವೇ? ಹಾಗಾದರೆ ನಿಖರವಾದ ಅಳತೆಗಳೊಂದಿಗೆ ಒಂದು ಭೂಪಟ ಅಥವಾ ರೂಪುರೇಖೆಯನ್ನು ನಾವು ಹೇಗೆ ತಯಾರಿಸಬಹುದು? ಇದಕ್ಕಾಗಿ ನಾವು 'ಮಾನ'ವನ್ನು ಉಪಯೋಗಿಸುತ್ತೇವೆ.



ಚಿತ್ರ 9.5

**ತರಗತಿಯ ರೂಪುರೇಖೆಯನ್ನು ಒಂದು ಮಾನದ ಆಧಾರದಲ್ಲಿ ಸಿದ್ಧಪಡಿಸೋಣ.**

ನಿಮ್ಮ ತರಗತಿಯ ಅಗಲ 5 ಮೀಟರ್ ಮತ್ತು ಉದ್ದ 10 ಮೀಟರ್ ಎಂದು ಊಹಿಸಿರಿ. ತರಗತಿಯ ಒಂದು ಮೀಟರನ್ನು ನಾವು ಒಂದು ಸೆಂಟಿಮೀಟರ್ ಎಂದು ಪರಿಗಣಿಸಿ ನೋಟುಪುಸ್ತಕದಲ್ಲಿ ಚಿತ್ರಿಸುತ್ತೇವೆಂದು ಭಾವಿಸಿರಿ. ಹಾಗಾದರೆ ತರಗತಿಯ ರೂಪುರೇಖೆಯನ್ನು ನೋಟ್‌ಪುಸ್ತಕದಲ್ಲಿ ಚಿತ್ರಿಸುವಾಗ 5 ಸೆಂಟಿಮೀಟರ್ ಅಗಲ ಮತ್ತು 10 ಸೆಂಟಿಮೀಟರ್ ಉದ್ದವಿರುವ ಒಂದು ಚೌಕವನ್ನು ಬರೆಯಲು ಸಾಧ್ಯವಾಗುವುದಿಲ್ಲವೆ. ಅದೇ ರೀತಿ ಬೆಂಚು ಮತ್ತು ಮೇಜಿನ ಉದ್ದ ಮತ್ತು ಅಗಲವನ್ನು ಅಳತೆ ಮಾಡಿ ತರಗತಿ ರೂಮಿನ ಒಂದು ಮೀಟರ್, ರೂಪುರೇಖೆಯ ಒಂದು ಸೆಂಟಿಮೀಟರ್ ಎಂಬ ಅಳತೆಯಲ್ಲಿ ನೋಟ್‌ಪುಸ್ತಕದಲ್ಲಿ ಚಿತ್ರಿಸಿರಿ. ಉತ್ತರ ದಿಕ್ಕನ್ನು ಕಂಡುಹಿಡಿದು ಸಂಕೇತಗಳೊಂದಿಗೆ ರೂಪುರೇಖೆಯನ್ನು ಚಿತ್ರಿಸುವುದಾದರೆ ಎಲ್ಲಾ ಗೆಳೆಯರು ಚಿತ್ರಿಸುವ ರೂಪುರೇಖೆಗಳು ಒಂದೇ ರೀತಿಯಾಗಿರಬಹುದು. ಬಳಿಕ ರೂಪುರೇಖೆಯ ಹತ್ತಿರ ರೂಪುರೇಖೆಯ ಒಂದು ಸೆಂಟಿಮೀಟರ್ ತರಗತಿ ರೂಮಿನ ಒಂದು ಮೀಟರ್ ಸೂಚಿಸುತ್ತದೆ ಎಂದು ಕೆಳಗೆ ಬರೆಯಿರಿ(1 ಸೆಂಟಿಮೀಟರ್ = 1 ಮೀಟರ್). ಇದು ರೂಪುರೇಖೆಯ ಮಾನವಾಗಿದೆ. ತರಗತಿ ಕೋಣೆಯ ಅಗಲ ಮತ್ತು ರೂಪುರೇಖೆಯ ಅಗಲಗಳೊಳಗಿನ ಪರಸ್ಪರ ಅನುಪಾತವು ನಾವು ಚಿತ್ರಿಸಿದ ರೂಪುರೇಖೆಯ ಮಾನವಾಗಿದೆ.

ಈ ರೀತಿಯಲ್ಲಿ ಮಾನವನ್ನು ಆಧರಿಸಿ ಭೂಪಟಗಳನ್ನು ತಯಾರಿಸಲಾಗುತ್ತದೆ. ಭೂಮಿಯ ನಿಜವಾದ ಅಗಲ ಮತ್ತು ಭೂಪಟದ ಅಗಲಗಳೊಳಗಿನ ಪರಸ್ಪರ ಅನುಪಾತವು ಒಂದು ಭೂಪಟದ ಮಾನವಾಗಿದೆ. ಉದಾಹರಣೆಗೆ ಒಂದು ಭೂಪಟದ ಮಾನವು 1 ಸೆಂಟಿಮೀಟರ್ = 1 ಕಿಲೋಮೀಟರ್ ಆಗಿದೆಯೆಂದು ಭಾವಿಸಿರಿ. ಇದರ ಅರ್ಥವೇನು?

ಭೂಪಟದ ಒಂದು ಸೆಂಟಿಮೀಟರ್ ದೂರವು ಭೂಮಿಯ ಒಂದು ಕಿಲೋಮೀಟರ್ ದೂರವನ್ನು ಸೂಚಿಸುತ್ತದೆ. ಈ ಮಾನದ ಆಧಾರದಲ್ಲಿರುವ ಒಂದು ಭೂಪಟದಲ್ಲಿ ರಸ್ತೆಯ ಉದ್ದ 10 ಸೆಂಟಿಮೀಟರ್ ಆಗಿದ್ದರೆ ಯಥಾರ್ಥ ಉದ್ದ 10 ಕಿಲೋಮೀಟರ್ ಆಗಿರುತ್ತದೆ.

ಹಾಗಾದರೆ 'ಎ' ಸ್ಥಳದಿಂದ 'ಬಿ' ಎಂಬ ಸ್ಥಳಕ್ಕೆ ಇರುವ ಭೂಪಟದ ರಸ್ತೆಯ ದೂರವು 23 ಸೆಂಟಿಮೀಟರ್ ಆಗಿದ್ದರೆ ನಿಜವಾದ ದೂರವು ಮೇಲೆ ಹೇಳಿದ ಮಾನದ ಪ್ರಕಾರ ಎಷ್ಟಾಗಿರಬಹುದು?

**ಸಮಾಜವಿಜ್ಞಾನ ಲ್ಯಾಬ್‌ನಿಂದ ಭೂಪಟಗಳನ್ನು ನಿರೀಕ್ಷಿಸಿ, ಅವುಗಳ ಮಾನಗಳನ್ನು ಗುರುತಿಸಿ ಬರೆಯಿರಿ.**

ಕೆಳಗೆ ನೀಡಿರುವ ಫ್ಲೋಚಾರ್ಟನ್ನು ನಿರೀಕ್ಷಿಸಿರಿ.

ಮಾನಗಳ ಆಧಾರದಲ್ಲಿ ಭೂಪಟಗಳನ್ನು ಹೇಗೆ ವರ್ಗೀಕರಿಸಲಾಗಿದೆ ಎಂದು ಕಂಡು ಹಿಡಿಯಿರಿ.

### ಮಾನದ ಆಧಾರದಲ್ಲಿ ಭೂಪಟಗಳ ವರ್ಗೀಕರಣ

**ಭೂಪಟಗಳು**

| ದೊಡ್ಡ ಮಾನದ ಭೂಪಟಗಳು | ಸಣ್ಣ ಮಾನದ ಭೂಪಟಗಳು |
|---|---|
| ಒಂದು ಸಣ್ಣ ಪ್ರದೇಶಕ್ಕೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಳನ್ನು ಚಿತ್ರೀಕರಿಸಲಾಗಿದೆ. | ಒಂದು ಪ್ರದೇಶಕ್ಕೆ ಸಂಬಂಧಿಸಿದ ನಿರ್ದಿಷ್ಟ ಮಾಹಿತಿಗಳನ್ನು ಮಾತ್ರ ಚಿತ್ರಿಸಲಾಗಿದೆ. |
| ಉದಾ: ಸ್ಥಳ ಸ್ವರೂಪ ಭೂಪಟ<br>ವಿಲ್ಲೇಜ್ ಭೂಪಟ | ಉದಾ: ಜಾಗತಿಕ ಭೂಪಟ,<br>ಭಾರತದ ಭೂಪಟ, ಕೇರಳದ ಭೂಪಟ |
| ಮಾನ ಉದಾ:<br>1 ಸೆಂಟಿಮೀಟರ್ = ½ ಕಿಲೋಮೀಟರ್<br>1 ಸೆಂಟಿಮೀಟರ್ = ¼ ಕಿಲೋಮೀಟರ್ | ಮಾನ ಉದಾ:<br>1 ಸೆಂಟಿಮೀಟರ್ = 25 ಕಿಲೋಮೀಟರ್<br>1 ಸೆಂಟಿಮೀಟರ್ = 10 ಕಿಲೋಮೀಟರ್ |

**ಚಾರ್ಟಿನಲ್ಲಿ ಉಪಯೋಗಿಸಲಾದ ವಿಶೇಷತೆಗಳನ್ನು ವಿಶದೀಕರಿಸಿ ದೊಡ್ಡ ಮಾನದ ಭೂಪಟ ಮತ್ತು ಸಣ್ಣ ಮಾನದ ಭೂಪಟಗಳೊಳಗಿನ ಪರಸ್ಪರ ವ್ಯತ್ಯಾಸ ಕಂಡುಹಿಡಿದು ಒಂದು ಟಿಪ್ಪಣಿ ತಯಾರಿಸಿರಿ.**

**ಮಾಹಿತಿ ತಂತ್ರಜ್ಞಾನದ ಸಹಾಯದಿಂದ ಪಂಚಾಯತ್ ಅಥವಾ ಮುನ್ಸಿಪಾಲಿಟಿಯ ಭೂಪಟಗಳು, ಸ್ಥಳ ಸ್ವರೂಪ ಭೂಪಟಗಳನ್ನು ಡೌನ್ಲೋಡ್ ಮಾಡಿರಿ. ಸಮಾಜವಿಜ್ಞಾನ ಲ್ಯಾಬಿನ ಭೂಪಟಗಳನ್ನು, ಅಟ್ಲಾಸಿನ ಭೂಪಟಗಳು ಮತ್ತು ನೀವು ಡೌನ್ಲೋಡ್ ಮಾಡಿದ ಭೂಪಟಗಳನ್ನು ಪರಸ್ಪರ ಹೋಲಿಸಿ ಮಾನದ ಆಧಾರದಲ್ಲಿ ಅವುಗಳನ್ನು ವರ್ಗೀಕರಿಸಿ ಪಟ್ಟಿಮಾಡಿರಿ.**

ವಿವಿಧ ತರದ ಭೂಪಟಗಳು ಮತ್ತು ಅದರ ವರ್ಗೀಕರಣಗಳ ಕುರಿತು ನಾವು ಚರ್ಚೆ ನಡೆಸಿದೆವಲ್ಲವೆ. ಇನ್ನು ಭೂಪಟದಿಂದ ನಮಗೆ ಮಾಹಿತಿಗಳನ್ನು ಹೇಗೆ ಸಂಗ್ರಹಿಸಬಹುದೆಂದು ನೋಡುವ. ಭೂಪಟಗಳನ್ನು ಪರಿಶೋಧಿಸಿ ಮಾಹಿತಿಗಳನ್ನು ಕಂಡುಕೊಳ್ಳುವುದು ಅಥವಾ ಸಂಗ್ರಹಿಸುವ ರೀತಿಯನ್ನು ಭೂಪಟ ಓದುವಿಕೆ ಎಂದು ಕರೆಯುತ್ತಾರೆ. ಭೂಪಟ ಓದುವಿಕೆಗೆ ಸಹಾಯಕವಾದ ಘಟಕಗಳು ಯಾವುವೆಂದು ನಾವು ಪರಿಶೋಧಿಸುವ.




*ಚಿತ್ರ 9.6*

ಭೂಪಟ ಓದುವಿಕೆಗೆ ಅಗತ್ಯವಾದ ಘಟಕಗಳನ್ನು ಕೆಳಗೆ ನೀಡಲಾಗಿದೆ.

1 ಶೀರ್ಷಿಕೆ
2 ಮಾನ
3 ದಿಕ್ಕು
4 ಅಕ್ಷಾಂಶ ರೇಖೆ
5 ರೇಖಾಂಶ ರೇಖೆ
6 ಅಂಗೀಕೃತ ಬಣ್ಣಗಳು/ಚಿಹ್ನೆಗಳು
7 ಸೂಚಕ

ಕೇರಳದ ಭೂಪ್ರಕೃತಿ ಭೂಪಟವನ್ನು (ಚಿತ್ರ 9.6) ನಿರೀಕ್ಷಿಸಿ ಪ್ರತಿಯೊಂದು ಘಟಕಗಳನ್ನು ತಿಳಿಯಿರಿ. ಭೂಪಟದಿಂದ ಮಾಹಿತಿ ಸಂಗ್ರಹ ನಡೆಸುವುದಕ್ಕಾಗಿ ಪ್ರತಿಯೊಂದು ಘಟಕಗಳನ್ನು ಹೇಗೆ ಬಳಸಲಾಗಿದೆ ಎಂದು ಪರಿಶೋಧಿಸುವ.

## ಶೀರ್ಷಿಕೆ

ಒಂದು ಭೂಪಟದಲ್ಲಿ ಚಿತ್ರಿಸಲಾದ ಪ್ರಧಾನ ಭೂಮೇಲ್ಮೈಯ ಪ್ರತ್ಯೇಕತೆಯನ್ನು ಶೀರ್ಷಿಕೆಯು ಸೂಚಿಸುವುದು. ಕೊಡಲಾದ ಭೂಪಟದ ಶೀರ್ಷಿಕೆ ನೋಡಿರಿ. ಭೂಪಟದಲ್ಲಿ ಚಿತ್ರೀಕರಿಸಿದ್ದು ಕೇರಳದ ಭೂಪ್ರಕೃತಿ ವಿಶೇಷತೆಗಳಾಗಿವೆ ಎಂದು 'ಕೇರಳದ ಭೂಪ್ರಕೃತಿ' ಎಂಬ ಶೀರ್ಷಿಕೆಯು ಸೂಚಿಸುವುದು.

**ಸಮಾಜವಿಜ್ಞಾನ ಲ್ಯಾಬ್‌ನಲ್ಲಿರುವ ಭೂಪಟಗಳನ್ನು ನಿರೀಕ್ಷಿಸಿ ಅವುಗಳ ವಿಷಯ ಮತ್ತು ಶೀರ್ಷಿಕೆಗಳೊಳಗಿನ ಪರಸ್ಪರ ಸಂಬಂಧವನ್ನು ತಿಳಿಯಿರಿ.**

## ಮಾನ

ಮಾನವನ್ನು ಆಧಾರವಾಗಿರಿಸಿ ಭೂಪಟಗಳನ್ನು ತಯಾರಿಸುವುದೆಂದು ನಮಗೆ ತಿಳಿದಿದೆ. ಭೂಮಿಯ ಮೇಲ್ಮೈಯ ಎರಡು ಸ್ಥಳಗಳ ಮಧ್ಯೆ ಇರುವ ಅಂತರ ಮತ್ತು ಭೂಪಟದ ಅದೇ ಎರಡು ಸ್ಥಳಗಳ ಮಧ್ಯೆ ಇರುವ ಅಂತರದ ಅನುಪಾತವು ಮಾನವಾಗಿದೆ. ಒಂದು ನದಿ, ರಸ್ತೆ ಅಥವಾ ರೈಲು ಮಾರ್ಗದ ಉದ್ದ ಒಂದು ಪ್ರದೇಶದ ವಿಸ್ತೀರ್ಣ, ಒಂದು ಭೂ ಮೇಲ್ಮೈಯ ವಿಶೇಷತೆಯ ವ್ಯಾಪ್ತಿ ಇತ್ಯಾದಿಗಳನ್ನು ಒಂದು ಭೂಪಟವನ್ನು ಉಪಯೋಗಿಸಿ ನಿಖರವಾಗಿ ಲೆಕ್ಕ ಹಾಕುವುದು ಮಾನದ ಆಧಾರದಲ್ಲಾಗಿದೆ.

ಭೂಪಟದ ಮಾನ ಆಧಾರವಾಗಿ ರಸ್ತೆಯ ನಿಖರವಾದ ಉದ್ದ ಕಂಡುಹಿಡಿದದ್ದು ನೆನಪಿದೆಯಲ್ಲವೇ. ಹಾಗೆಯೇ ಸಮಾಜವಿಜ್ಞಾನ ಲ್ಯಾಬಿನಲ್ಲಿರುವ ಭೂಪಟದ ಮಾನ ಆಧಾರವಾಗಿರಿಸಿ ಪ್ರದೇಶದ ಪರಸ್ಪರ ಅಂತರ, ರಸ್ತೆ, ನದಿ, ರೈಲು ಮಾರ್ಗದ ನಿಖರವಾದ ಉದ್ದವನ್ನು ಕಂಡುಹಿಡಿದು ಬರೆಯಿರಿ. ಚಿತ್ರದಲ್ಲಿ ಕಾಣುವ ಹಾಗೆ ರಸ್ತೆ ಹಾಗೂ, ನದಿಯ ಉದ್ದವನ್ನು ಕಂಡು ಹಿಡಿಯಲು ಒಂದು ನೂಲನ್ನು ಉಪಯೋಗಿಸಿರಿ.




*ಚಿತ್ರಗಳು 9.7*
*ನೂಲನ್ನು ಉಪಯೋಗಿಸಿ ರಸ್ತೆ ಅಥವಾ ನದಿಯ ಉದ್ದವನ್ನು ಕಂಡುಹಿಡಿಯುವುದು.*

ನೂಲನ್ನು ಉಪಯೋಗಿಸಿ ರಸ್ತೆ ಅಥವಾ ನದಿಯ ಉದ್ದವನ್ನು ಕಂಡುಹಿಡಿಯಿರಿ. ಬಳಿಕ ಒಂದು ಸ್ಕೇಲ್‌ನ ಸಹಾಯದೊಂದಿಗೆ ಉದ್ದವನ್ನು ಅಳತೆ ಮಾಡಿರಿ. ಭೂಪಟದ ಮಾನ ಆಧಾರವಾಗಿ ನಿಜವಾದ ಉದ್ದವನ್ನು ಕಂಡುಹಿಡಿಯಿರಿ.

ಇಲ್ಲಿ 7 ಸೆಂಟಿಮೀಟರ್ ಲಭಿಸಿದರೆ ಭೂಪಟದ ಒಂದು ಸೆಂಟಿಮೀಟರ್ ಭೂಮೇಲ್ಮೈಯಲ್ಲಿ ಒಂದು ಕಿಲೋಮೀಟರ್ (1 ಸೆಂಟಿಮೀಟರ್ = 1 ಕಿಲೋಮೀಟರ್) ಎಂಬ ಮಾನ ಅನುಸರಿಸಿ ನಿಜವಾದ ಉದ್ದ ಎಷ್ಟಾಗಿರಬಹುದು?

ಭೂಪಟದ ಮಾನವನ್ನು ದಾಖಲಿಸಲು ಸಾಮಾನ್ಯವಾಗಿ ಮೂರು ರೀತಿಗಳನ್ನು ಬಳಸಲಾಗುತ್ತದೆ.

## ಹೇಳಿಕಾ ವಿಧಾನ (Statement of Scale)

ಹೇಳಿಕಾ ವಿಧಾನದಲ್ಲಿ ಮಾನವನ್ನು ಬರೆಯುವುದು ಯಾಕಾಗಿರಬಹುದು ಎಂದು ನೋಡಿರಿ. ಉದಾಹರಣೆಗೆ ಭೂಪಟದ 1 ಸೆಂಟಿ ಮೀಟರ್ ದೂರವು ಭೂಮೇಲ್ಮೈಯಲ್ಲಿ 1 ಕಿಲೋಮೀಟರನ್ನು ಸೂಚಿಸುತ್ತದೆ. ಅಥವಾ 1 ಸೆಂಟಿಮೀಟರ್ = 1 ಕಿಲೋ ಮೀಟರ್ ಎಂದು ಎಲ್ಲರಿಗೂ ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಇಲ್ಲಿ ಮಾನವನ್ನು ಸೂಚಿಸಲಾಗುತ್ತದೆ. ಭೂಪಟಗಳನ್ನು ನಿರೀಕ್ಷಿಸಿ ಹೇಳಿಕಾ ವಿಧಾನದಲ್ಲಿ ಸೂಚಿಸಲಾದ ಮಾನಗಳನ್ನು ಕಂಡುಹಿಡಿದು ಬರೆಯಿರಿ.

## ಭಿನ್ನರಾಶಿ ವಿಧಾನ (Representative Fraction or RF)

RF = 1:100000 - ಎಂಬ ರೀತಿಯಲ್ಲಿ ಮಾನಗಳನ್ನು ಗುರುತಿಸಿರುವುದನ್ನು ನೀವು ಗಮನಿಸಿರುವಿರಲ್ಲವೇ? ಇದು ಭಿನ್ನರಾಶಿ ವಿಧಾನವಾಗಿದೆ. ಭೂಪಟದ 1 ಯೂನಿಟ್ ದೂರವು ಭೂಮೇಲ್ಮೈಯ 100000 ಯೂನಿಟ್‌ಗೆ ಸಮಾನವಾಗಿದೆ ಎಂದು ಇದರಿಂದ ತಿಳಿಯಬಹುದು. ಈ ರೀತಿಯಲ್ಲಿ ಅನುಪಾತದ(:) ಮುಂದೆ ಕೊಟ್ಟಿರುವ ಯೂನಿಟ್ ಭೂಪಟದ ದೂರವು ಅನುಪಾತದ ನಂತರ(:) ಕೊಟ್ಟಿರುವ ಯೂನಿಟ್‌ಗಳು ಭೂಮೇಲ್ಮೈಯ ದೂರವನ್ನು ಸೂಚಿಸುತ್ತವೆ. ಇಲ್ಲಿ ಭೂಮೇಲ್ಮೈಯಲ್ಲಿಯೂ ಭೂಪಟದಲ್ಲಿಯೂ ಇರುವ ದೂರವನ್ನು ಒಂದೇ ಏಕಕದಲ್ಲಿ ಸೂಚಿಸಲಾಗಿದೆ. ಉದಾಹರಣೆಯಾಗಿ ಇಲ್ಲಿ ದೂರವನ್ನು ಸೂಚಿಸುವುದಕ್ಕಾಗಿ ಸೆಂಟಿಮೀಟರ್ ಎಂಬ ಏಕಕವನ್ನು ಉಪಯೋಗಿಸಲಾಗಿದೆ ಎಂದು ಭಾವಿಸಿರಿ. ಹಾಗಾದರೆ ಈ ಭಿನ್ನರಾಶಿ ವಿಧಾನದಲ್ಲಿರುವ ಮಾನ ಎಂದರೆ ಭೂಪಟದ ಒಂದು ಯೂನಿಟ್ ದೂರವು ಒಂದು ಸೆಂಟಿಮೀಟರ್ ಎಂಬುದು ಭೂಮೇಲ್ಮೈಯ ಒಂದು ಲಕ್ಷ ಸೆಂಟಿಮೀಟರ್ ದೂರವನ್ನು ಸೂಚಿಸುತ್ತದೆ. 1 ಲಕ್ಷ ಸೆಂಟಿಮೀಟರ್ 1 ಕಿಲೋಮೀಟರ್ ಆಗಿದೆಯಲ್ಲವೇ? ಹಾಗಾದರೆ ಭೂಪಟದ ಒಂದು ಸೆಂಟಿಮೀಟರ್ ಭೂಮೇಲ್ಮೈಯ ಒಂದು ಲಕ್ಷ ಸೆಂಟಿಮೀಟರ್ ಅಥವಾ ಒಂದು ಕಿಲೋಮೀಟರ್ ಎಂದು ಅರ್ಥವಾಗುವುದು.

**RF:1:200000 ಎಂಬ ಭಿನ್ನರಾಶಿ ವಿಧಾನದಲ್ಲಿರುವ ಮಾನದಿಂದ ಏನನ್ನು ಅರ್ಥ ಮಾಡಬಹುದು ಎಂದು ಬರೆದು ನೋಡಿರಿ.**

**ಭೂಪಟಗಳನ್ನು ನಿರೀಕ್ಷಿಸಿ ಭಿನ್ನರಾಶಿ (RF) ವಿಧಾನದಲ್ಲಿ ಸೂಚಿಸಲಾದ ಮಾನವನ್ನು ಕಂಡುಹಿಡಿದು ಬರೆಯಿರಿ.**

## ರೇಖಾ ವಿಧಾನ (Linear Scale)




ರೇಖಾ ವಿಧಾನವು ಚಿತ್ರದಲ್ಲಿ ನೀಡಿರುವಂತೆ ಮಾನವನ್ನು ಬರೆದು ದಾಖಲಿಸುವ ರೀತಿಯಾಗಿದೆ. ಭೂಪಟಗಳನ್ನು ನಿರೀಕ್ಷಿಸಿ ರೇಖಾ ವಿಧಾನದಲ್ಲಿರುವ ಮಾನವನ್ನು ಪರಿಚಯಿಸಿಕೊಳ್ಳಿರಿ.

## ದಿಕ್ಕುಗಳು



ಚಿತ್ರ 9.8

ದಿಕ್ಕುಗಳ ಕುರಿತಾದ ತಿಳುವಳಿಕೆಯು ನಿಮಗೆ ಹಿಂದಿನ ತರಗತಿಗಳಿಂದ ಲಭಿಸಿದೆಯಲ್ಲವೆ. ಭೂಪಟದ ಮೇಲ್ಭಾಗದಲ್ಲಿ 'N' ಎಂದು ಗುರುತಿಸಿರುವುದನ್ನು ಗಮನಿಸಿದಿರಲ್ಲವೆ. ಇದು ಭೂಪಟದಲ್ಲಿ ಚಿತ್ರಿಸಿದ ಪ್ರದೇಶದ ಉತ್ತರ ದಿಕ್ಕನ್ನು ಸೂಚಿಸುತ್ತದೆ. ಭೂಪಟದ ಸಹಾಯದಿಂದ ನಾವು ಒಂದು ಪ್ರಯಾಣ ಮಾಡುತ್ತೇವೆ ಎಂದು ಭಾವಿಸಿಕೊಳ್ಳಿ. ಹಾಗಿದ್ದಲ್ಲಿ ಒಂದು ದಿಕ್ಸೂಚಿ ಬಳಸಿ ಉತ್ತರ ದಿಕ್ಕನ್ನು ಕಂಡುಹಿಡಿದು ಭೂಪಟದಲ್ಲಿ ಗುರುತಿಸಿರುವ ಉತ್ತರ ದಿಕ್ಕನ್ನು ದಿಕ್ಸೂಚಿಗನುಸಾರವಾಗಿ ಕ್ರಮೀಕರಿಸಿದರೆ ಮಾತ್ರ ದಿಕ್ಕು ತಪ್ಪದೆ ನಮಗೆ ಸಂಚರಿಸಲು ಸಾಧ್ಯವಿದೆ. (ಚಿತ್ರ 9.8) ಗಮನಿಸಿರಿ.

**ತರಗತಿಯಲ್ಲಿ ಒಂದು ದಿಕ್ಸೂಚಿಯನ್ನು ಬಳಸಿಕೊಂಡು ಉತ್ತರ ದಿಕ್ಕನ್ನು ಕಂಡುಹಿಡಿದ ಅನಂತರ ಭೂಪಟಕ್ಕೆ ಅನುಗುಣವಾಗಿ ಕ್ರಮೀಕರಿಸಿ ನೋಡಿರಿ.**

ಭೂಪಟದಲ್ಲಿ ಚಿತ್ರಿಸಲಾದ ಭೂಮೇಲ್ಮೈ ವಿಶೇಷತೆಗಳ ಸ್ಥಾನ, ಅದರ ವಿಶೇಷತೆ, ನದಿಯ ಹರಿವಿನ ದಿಕ್ಕು ಎಂಬಿವುಗಳನ್ನು ಕಂಡುಹಿಡಿದು ಮಾಹಿತಿಯನ್ನು ಸಂಗ್ರಹಿಸುವುದು ಭೂಪಟ ಓದುವಿಕೆಯ ಭಾಗವಾಗಿದೆ.

ಕೆಳಗೆ ನೀಡಲಾದ ರೂಪುರೇಖೆಯನ್ನು ಪರಿಶೋಧಿಸಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.




ಚಿತ್ರ 9.9

| ಭೂ ಮಾಹಿತಿ | ದಿಕ್ಕು |
|---|---|
| ಶಾಲಾ ಮೈದಾನದ ಯಾವ ದಿಕ್ಕಿನಲ್ಲಿ ಶಾಲಾ ಕಟ್ಟಡವಿದೆ? | |
| ಶಾಲಾ ಕಟ್ಟಡದ ಯಾವ ದಿಕ್ಕಿನಲ್ಲಿ ಕುಡಿಯುವ ನೀರಿನ ಟ್ಯಾಂಕ್ ಇದೆ? | |
| ಶಾಲಾ ಕಟ್ಟಡದಿಂದ ಯಾವ ದಿಕ್ಕಿಗೆ ಸಂಚರಿಸಿದರೆ ಶೌಚಾಲಯಕ್ಕೆ ತಲುಪಬಹುದು? | |
| ಕುಡಿಯುವ ನೀರಿನ ಟಾಂಕಿಯ ಯಾವ ದಿಕ್ಕಿನಲ್ಲಿ ಬಾವಿಯಿದೆ? | |

ನಾವೊಂದು ಆಟ ಆಡೋಣವೇ?

**ದಿಕ್ಕು ಕಂಡುಹಿಡಿಯಿರಿ**



*ಚಿತ್ರ 9.10*

ಮಕ್ಕಳು ವಿವಿಧ ಗುಂಪುಗಳಾಗಿರಿ. ಪ್ರತಿಯೊಂದು ಗುಂಪಿನಲ್ಲೂ ರೂಪುರೇಖೆ ಆಧಾರದಲ್ಲಿ ಪಟ್ಟಿಯಲ್ಲಿ ನೀಡಿರುವಂತೆ ಪ್ರಶ್ನೆಗಳನ್ನೂ ಅವುಗಳ ಉತ್ತರಗಳನ್ನೂ ತಯಾರಿಸಿರಿ. ಪ್ರತಿ ಗುಂಪೂ ಅವರಿಗೆ ಲಭಿಸುವ ಅವಕಾಶಕ್ಕನುಸಾರವಾಗಿ ಗುರುತಿಸಿದ ಪ್ರಶ್ನೆಗಳನ್ನು ಕೇಳುವುದು. ಸರಿಯಾದ ಉತ್ತರವನ್ನು ಮೊದಲು ಹೇಳುವ ಗುಂಪಿಗೆ ಒಂದು ಅಂಕವನ್ನು ನೀಡಿರಿ. ರೂಪುರೇಖೆಯ ಬದಲು ಭೂಪಟಗಳನ್ನು ಉಪಯೋಗಿಸಿ ಆಟವನ್ನು ಮುಂದುವರಿಸಬಹುದು. ಉದಾಹರಣೆಗಾಗಿ ಭೂಮೇಲ್ಮೈಯ ವಿಶೇಷತೆಗಳ ದಿಕ್ಕು ಆಧಾರವಾಗಿರುವ ಸ್ಥಾನ, ನಗರಗಳೊಳಗಿನ ದೂರ, ನದಿಯು ಹರಿಯುವ ದಿಕ್ಕು ಇತ್ಯಾದಿಗಳಿಗೆ ಸಂಬಂಧಿಸಿದ ಪ್ರಶ್ನೆಗಳು ಮತ್ತು ಉತ್ತರಗಳನ್ನು ತಯಾರಿಸಿ ಆಟದಲ್ಲಿ ಉಪಯೋಗಿಸಿರಿ.

## ಅಂಗೀಕೃತ ಬಣ್ಣ/ಚಿಹ್ನೆಗಳು

ಭೂಪಟಗಳಲ್ಲಿ ಮಾನವ ನಿರ್ಮಿತ ಮತ್ತು ನೈಸರ್ಗಿಕವಾದ ವಿವಿಧ ಭೂಮೇಲ್ಮೈ ವಿಶೇಷತೆಗಳನ್ನು ಚಿತ್ರಿಸಲಾಗುತ್ತದೆಯೆಂದು ನಮಗೆ ತಿಳಿದಿದೆ. ಪ್ರತಿಯೊಂದು ಭೂಮೇಲ್ಮೈ ವಿಶೇಷತೆಗಳನ್ನು ವಿಭಿನ್ನ ಬಣ್ಣ ಮತ್ತು ಚಿಹ್ನೆಗಳ ಮೂಲಕ ಚಿತ್ರಿಸಲಾಗುತ್ತದೆ. ಜಾಗತಿಕವಾಗಿ ಅಂಗೀಕರಿಸಲ್ಪಟ್ಟ ಬಣ್ಣಗಳು ಮತ್ತು ಚಿಹ್ನೆಗಳನ್ನು ಇದಕ್ಕಾಗಿ ಉಪಯೋಗಿಸಲಾಗುತ್ತದೆ.

ಭೂಪಟಗಳಲ್ಲಿ ಭೌಗೋಳಿಕ ಮಾಹಿತಿಯನ್ನು ಚಿತ್ರಿಸಲು ಜಾಗತಿಕವಾಗಿ ಅಂಗೀಕರಿಸಲ್ಪಟ್ಟ ಬಣ್ಣ ಮತ್ತು ಚಿಹ್ನೆಗಳನ್ನು ಯಾಕೆ ಬಳಸಲಾಗುತ್ತದೆ ಎಂದು ನಿಮಗೆ ತಿಳಿದಿದೆಯೇ? ಯಾವುದೇ ದೇಶಗಳಲ್ಲಿರುವವರಿಗೂ ಗೊಂದಲಗಳಿಲ್ಲದೆ ಯಾವುದೇ ದೇಶದಲ್ಲಿ ನಿರ್ಮಿಸಿದ ಭೂಪಟವನ್ನು ಓದುವುದಕ್ಕಾಗಿ ಇಂತಹ ಅಂಗೀಕೃತ ಬಣ್ಣಗಳನ್ನು ಮತ್ತು ಚಿಹ್ನೆಗಳನ್ನು ಉಪಯೋಗಿಸಲಾಗುತ್ತದೆ.

ಮಾನವ ನಿರ್ಮಿತ ಮತ್ತು ಪ್ರಕೃತಿದತ್ತವಾದ ಭೂಮಾಹಿತಿಗಳನ್ನು ಒಟ್ಟಿಗೆ ಚಿತ್ರಿಸುವ ಭೂಪಟಗಳಲ್ಲಿ ಸಾಮಾನ್ಯವಾಗಿ ಇಂತಹ ಬಣ್ಣಗಳು ಮತ್ತು ಚಿಹ್ನೆಗಳನ್ನು ಉಪಯೋಗಿಸಲಾಗುತ್ತದೆ.

ಜಾಗತಿಕವಾಗಿ ಅಂಗೀಕರಿಸಿದ ಬಣ್ಣಗಳು/ಚಿಹ್ನೆಗಳನ್ನು ಪಟ್ಟಿಯಲ್ಲಿ ನೀಡಲಾಗಿದೆ. ಪಟ್ಟಿಯನ್ನು ಪರಿಶೀಲಿಸಿ ಪ್ರತಿಯೊಂದು ಚಿಹ್ನೆಗಳು ಯಾವ ಭೂ ಮಾಹಿತಿಗಳನ್ನು ಸೂಚಿಸುತ್ತದೆ ಎಂದು ಕಂಡು ಹಿಡಿಯಿರಿ.

| ಬಣ್ಣಗಳು/ಚಿಹ್ನೆಗಳು | ವಿಶೇಷತೆಗಳು |
|---|---|
| ಹಸಿರು | ನೈಸರ್ಗಿಕ ಸಸ್ಯಜಾಲಗಳು |
| ಹಳದಿ | ಕೃಷಿ ಸ್ಥಳಗಳು |
| ಕೆಂಪು | ವಸತಿ ಮತ್ತು ರಸ್ತೆಗಳು |
| ಕಪ್ಪು | ರೈಲುಹಳಿ, ಅಕ್ಷಾಂಶ ರೇಖೆಗಳು,<br>ರೇಖಾಂಶ ರೇಖೆಗಳು, ದೂರವಾಣಿ ಲೈನ್ |
| ನೀಲಿ | ಜಲಾಶಯಗಳು |
| ಕಂದು | ಶಿಲಾವೃತ ಪ್ರದೇಶಗಳು, ಮರಳು ದಿಣ್ಣೆಗಳು, ಬೆಟ್ಟಗಳು |
|  | ಡಾಮರು ಹಾಕಿದ ರಸ್ತೆ |
|  | ರೈಲು ಹಳಿ |
|  | ತೋಡು |
|  | ನದಿ |
|  | ಇಗರ್ಜಿ |
|  | ದೇವಸ್ಥಾನ |
|  | ಮಸೀದಿ |
|  | ವಾಸಸ್ಥಳಗಳು |
| PO | ಅಂಚೆ ಕಛೇರಿ |
|  | ಬಾವಿ |
| PS | ಪೋಲೀಸ್ ಸ್ಟೇಷನ್ |
|  | ಕೋಟೆ |
|  | ಸೇತುವೆ |
|  | ಕೊಳ |
|  | ಕೊಳವೆ ಬಾವಿ |
|  | ಸ್ಮಶಾನ |

ವಿವಿಧ ಬಣ್ಣಗಳು ಮತ್ತು ಚಿಹ್ನೆಗಳನ್ನು ಬಳಸಿಕೊಂಡು ಭೂ ಮಾಹಿತಿಗಳನ್ನು ಚಿತ್ರೀಕರಿಸಿದ ಒಂದು ರೂಪುರೇಖೆಯನ್ನು ಕೆಳಗೆ ನೀಡಲಾಗಿದೆ. ರೂಪುರೇಖೆಯನ್ನು ನೋಡಿ ಪ್ರತಿಯೊಂದು ಭೂ ಮಾಹಿತಿಗಳನ್ನು ಮತ್ತು ಅವುಗಳನ್ನು ಚಿತ್ರಿಸಲು ಬಳಸುವ ಬಣ್ಣಗಳು ಮತ್ತು ಚಿಹ್ನೆಗಳನ್ನು ನಿರೀಕ್ಷಿಸಿ ರೂಪರೇಖೆಯೊಂದಿಗೆ ಕೊಡಲಾದ ಪಟ್ಟಿಯಲ್ಲಿ ಬರೆಯಿರಿ.




*ಚಿತ್ರ 9.11*

| ಬಣ್ಣಗಳು ಮತ್ತು ಚಿಹ್ನೆಗಳು | ವಿಶೇಷತೆಗಳು |
|---|---|
|  | |
| | ರೈಲು ಹಳಿ |
|  | |
| | ಸೇತುವೆ |
| | ಕೋಟೆ |
|  | |
| | ಸ್ಮಶಾನ |
| | ಕೊಳ |

## ಸೂಚಕ

ಮೇಲೆ ನೀಡಲಾದ ರೂಪುರೇಖೆಯ ಒಂದು ಸೂಚಕವನ್ನು ತಯಾರಿಸಿದ್ದು ಹೇಗೆಂದು ತಿಳಿದಿರಲ್ಲವೆ? ಸೂಚಕವು ಭೂಪಟದ ಓದಿಗೆ ಅನಿವಾರ್ಯವಾದ ಘಟಕವಾಗಿದೆ. ಭೂಪಟಗಳ ಬಣ್ಣಗಳು, ಚಿಹ್ನೆಗಳು, ಸಂಕೇತಗಳು ಮೊದಲಾದವುಗಳು ಪ್ರತಿಯೊಂದೂ ಏನನ್ನು ಸೂಚಿಸುತ್ತದೆ ಎಂಬುದು ಸೂಚಕವಾಗಿದೆ.

## ಅಕ್ಷಾಂಶ ರೇಖೆಗಳು ಮತ್ತು ರೇಖಾಂಶ ರೇಖೆಗಳು

ಭೂಮಿಯ ಪ್ರತಿಯೊಂದು ಪ್ರದೇಶದ ಭೂಮೇಲ್ಮೈಗಳ ವಿಶೇಷತೆಗಳ ಸ್ಥಾನವನ್ನು ನಿಖರವಾಗಿ ತಿಳಿಯಲು ಮತ್ತು ಮಾಹಿತಿಯನ್ನು ಸಂಗ್ರಹಿಸಲು ಅಕ್ಷಾಂಶ ಮತ್ತು ರೇಖಾಂಶ ರೇಖೆಗಳು ಅತ್ಯಗತ್ಯವಾಗಿವೆ. ಕೆಳಗಿನ ತರಗತಿಗಳಲ್ಲಿ ಅಕ್ಷಾಂಶ ಮತ್ತು ರೇಖಾಂಶ ರೇಖೆಗಳ ವಿಶೇಷತೆಗಳ ಕುರಿತು ಚರ್ಚಿಸಿದ್ದು ನಿಮಗೆ ನೆನಪಿದೆಯಲ್ಲವೆ?

**ಭಾರತದ ಭೂಪಟವನ್ನು ನೋಡಿ ಭಾರತದ ಸ್ಥಾನವು ಯಾವೆಲ್ಲಾ ಅಕ್ಷಾಂಶ ಮತ್ತು ರೇಖಾಂಶಗಳ ನಡುವೆ ಇದೆ ಎಂದು ಕಂಡುಹಿಡಿದು ಬರೆಯಿರಿ.**

ಭೂಪಟಗಳಿಂದ ಭೂಮಿಯ ಮೇಲ್ಮೈ ವಿಶೇಷತೆಗಳ ಕುರಿತಾದ ಮಾಹಿತಿಗಳನ್ನು ತಿಳಿಯುವುದು ಹೇಗೆ ಎಂಬ ತಿಳುವಳಿಕೆಯು ನಿಮಗೆ ಲಭಿಸಿದೆಯಲ್ಲವೆ. ಅವುಗಳನ್ನು ಸಂಗ್ರಹಿಸಲು, ಉಳಿಸಿಕೊಳ್ಳಲು, ವಿಶ್ಲೇಷಿಸಲು ಮತ್ತು ಬಳಸಿಕೊಳ್ಳಲು ಇಂದು ಅನೇಕ ಆಧುನಿಕ ತಾಂತ್ರಿಕತೆಗಳು ಲಭ್ಯವಿವೆ. ವಿಜ್ಞಾನ ಮತ್ತು ತಂತ್ರಜ್ಞಾನದ ಪ್ರಗತಿಯು ಭೂಮೇಲ್ಮೈ ವಿಶೇಷತೆಗಳ ಮಾಹಿತಿ ಸಂಗ್ರಹ, ವಿಶ್ಲೇಷಣೆ, ಮಂಡನೆ, ಚಿತ್ರಣ, ಭೂಪಟ ನಿರ್ಮಾಣ ಮೊದಲಾದವುಗಳ ಅಭೂತಪೂರ್ವ ಬದಲಾವಣೆಗಳಿಗೆ ಕಾರಣವಾಗಿದೆ. ಇಂತಹ ಆಧುನಿಕ ತಾಂತ್ರಿಕತೆಗಳು ಯಾವುವೆಂದು ಚರ್ಚೆ ಮಾಡೋಣ.

ಕಥೆಗಳಲ್ಲಿ ಕೇಳಿದ ಒಂದು ಮಾಂತ್ರಿಕ ಕನ್ನಡಿಯನ್ನು ನೀವು ಪಡೆದುಕೊಂಡಿದ್ದೀರಿ ಎಂದು ಭಾವಿಸಿ. ಆ ಮಾಯಾ ಕನ್ನಡಿಯಲ್ಲಿ ನೀವು ನೋಡ ಬಯಸುವ ದೂರದಲ್ಲಿರುವ ಒಂದು ಐತಿಹಾಸಿಕ ಕಟ್ಟಡವು ಗೋಚರಿಸುತ್ತದೆ. ಆ ಕನ್ನಡಿಯು ಆ ಐತಿಹಾಸಿಕ ರಚನೆ ಇರುವ ಸ್ಥಳ, ನಿಮ್ಮ ಸ್ಥಳ, ಅಲ್ಲಿಗೆ ಹೋಗುವ ದಾರಿ ಇತ್ಯಾದಿಗಳನ್ನು ತೋರಿಸುತ್ತದೆ. ಅದ್ಭುತವೆನಿಸುತ್ತದೆಯೇ. ಹಿಂದೆ ಮಾಂತ್ರಿಕ ಎಂದೆನಿಸಿಕೊಂಡಿದ್ದ ಇವೆಲ್ಲವೂ ಇಂದು ತಂತ್ರಜ್ಞಾನದ ಸಹಾಯದಿಂದಾಗಿ ಕ್ಷುಲ್ಲಕವೆನಿಸಿದೆ. ಒಂದು ಸ್ಮಾರ್ಟ್‌ಫೋನಿನ ಸಹಾಯದಿಂದ ಇಂದು ನಮಗೆ ಇದೆಲ್ಲವೂ ಸಾಧ್ಯವಿದೆ.

ಒಂದು ಮಗು ತಯಾರಿಸಿದ ಪ್ರವಾಸ ಕಥನದ ಕೆಲವು ಸಾಲುಗಳನ್ನು ಕೆಳಗೆ ನೀಡಲಾಗಿದೆ.

**"ದೂರದಲ್ಲಿ ಎತ್ತರವಾಗಿ ಸಾಲು ಸಾಲಾಗಿ ನಿಂತಿರುವ ಬೆಟ್ಟಗಳು.... ಬೆಳ್ಳಿನೂಲಿನಂತೆ ಕೆಳಗೆ ಧುಮ್ಮಿಕ್ಕುವ ತೊರೆಗಳು... ಬೆಟ್ಟಗಳ ನಡುವೆ ಚೋಲವನಗಳು, ಎದ್ದು ನಿಂತಿರುವ ಕಪ್ಪು ಶಿಲಾ ಸಮೂಹಗಳು... ಎಷ್ಟು ನೋಡಿದರೂ ಆಸೆ ಮುಗಿಯದಂತಹ ಮನೋಹರವಾದ ನೋಟ!"**

ಕ್ಯಾಮರವನ್ನು  ಉಪಯೋಗಿಸಿ ಆ ಪ್ರದೇಶದ ಚಿತ್ರಗಳನ್ನು ತೆಗೆದು ಅವುಗಳನ್ನು ನಿರೀಕ್ಷಿಸಿ ಇರುವ ಮಾಹಿತಿಯನ್ನು ಸೇರಿಸಿ ಪ್ರವಾಸ ಕಥನವನ್ನು ಸಿದ್ಧಪಡಿಸಲಾಗಿದೆ.

ಇದು ದೂರ ಸಂವೇದನೆ  ವಿಧಾನವಾಗಿದೆ.

## ದೂರ ಸಂವೇದನೆ ಎಂದರೇನು? (Remote Sensing)

ಒಂದು ವಸ್ತು, ಪ್ರದೇಶ ಅಥವಾ ವಿದ್ಯಮಾನದ ಕುರಿತಾದ ಮಾಹಿತಿಗಳನ್ನು ದೂರದ ಸ್ಥಳದಿಂದ ಸ್ಪರ್ಶಬಂಧವಿಲ್ಲದೆ ಉಪಕರಣಗಳ ಸಹಾಯದಿಂದ ಶೇಖರಿಸುವ ರೀತಿಯು ದೂರ ಸಂವೇದನೆ ಆಗಿದೆ.

ದೂರ ಸಂವೇದನೆಯು ಕ್ಯಾಮರಾ ಉಪಯೋಗಿಸಿ ಚಿತ್ರಗಳನ್ನು ಸೆರೆಹಿಡಿದು ಸಂಗ್ರಹಿಸುವ ರೀತಿ ಮಾತ್ರವಾಗಿದೆಯೇ?

ಬಲೂನ್‌ಗಳು, ವಿಮಾನಗಳು, ಕೃತಕ ಉಪಗ್ರಹಗಳು ಮೊದಲಾದವುಗಳಲ್ಲೂ ಕ್ಯಾಮರಾಗಳು, ಸ್ಕ್ಯಾನರುಗಳು (ಮಾಹಿತಿ ಸಂಗ್ರಹಕ್ಕಾಗಿ ಬಳಸುವ ಉಪಕರಣ) ಮೊದಲಾದವುಗಳನ್ನು ಅಳವಡಿಸಿ ಭೂ ಮಾಹಿತಿಗಳನ್ನು ಸಂಗ್ರಹಿಸಬಹುದು.

ಈ ರೀತಿಯಾಗಿ ಮಾಹಿತಿಗಳನ್ನು ಸಂಗ್ರಹಿಸುವ ಉಪಕರಣಗಳು ಅಥವಾ ಸಂವೇದಕಗಳನ್ನು (Sensors) ಜೋಡಿಸಿರುವ ಮೇಲ್ಮೈಗಳನ್ನು ಫ್ಲಾಟ್‌ಫೋರ್ಮುಗಳೆಂದು ಕರೆಯುತ್ತಾರೆ.

**ದೂರ ಸಂವೇದನೆಗಿರುವ ಫ್ಲಾಟ್‌ಫೋರ್ಮುಗಳು ಯಾವುವೆಂದು ಕಂಡುಹಿಡಿದು ಪಟ್ಟಿ ಮಾಡಿರಿ.**

- ಬಲೂನ್
- 

ಭೂ ಮಾಹಿತಿಗಳನ್ನು ಸಂಗ್ರಹಿಸಲು ನಾವು ಅವಲಂಭಿಸುವ ಪ್ಲಾಟ್‌ಫಾರ್ಮುಗಳ ಆಧಾರದ ಮೇಲೆ ದೂರ ಸಂವೇದನೆಯನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು.

**ಕೆಳಗೆ ನೀಡಲಾದ ಚಿತ್ರ ಮತ್ತು ಪಟ್ಟಿಯನ್ನು ವಿಶ್ಲೇಷಿಸಿ ದೂರ ಸಂವೇದನೆಯ ಮೂರು ವಿಧಾನಗಳು ಮತ್ತು ಅವುಗಳ ವಿಶೇಷತೆಗಳನ್ನು ಗುರುತಿಸಿ ಟಿಪ್ಪಣಿ ಬರೆಯಿರಿ.**

| ಭೂತಲ ಛಾಯಾಗ್ರಹಣ<br>Terrestrial Remote Sensing | ಆಕಾಶೀಯ ದೂರ ಸಂವೇದನೆ<br>Aerial Remote Sensing | ಉಪಗ್ರಹ ದೂರ ಸಂವೇದನೆ<br>Satellite Remote Sensing |
|---|---|---|
| <br>*ಚಿತ್ರ 9.12* | <br>*ಚಿತ್ರ 9.13* | <br>*ಚಿತ್ರ 9.14* |
| ಭೂಮಿಯ ಮೇಲ್ಮೈಯಿಂದ ಭೂಮೇಲ್ಮೈಯ ವಿಶೇಷತೆಗಳನ್ನು ಕ್ಯಾಮರಾ ಉಪಯೋಗಿಸಿ ತೆಗೆಯುವ ವಿಧಾನವು ಭೂತಲ ಛಾಯಾಗ್ರಹಣವಾಗಿದೆ. | ವಿಮಾನದಲ್ಲಿ ಸ್ಥಿರವಾಗಿರುವ ಕ್ಯಾಮರಾದ ಸಹಾಯದಿಂದ ಆಕಾಶದಿಂದ ಮತ್ತು ಭೂ ಮೇಲ್ಮೈಯಲ್ಲಿರುವ ವಿಶೇಷತೆಗಳ ಚಿತ್ರಗಳನ್ನು ಸೆರೆ ಹಿಡಿಯುವ ರೀತಿಯು ಆಕಾಶೀಯ ದೂರ ಸಂವೇದನೆ. | ಕೃತಕ ಉಪಗ್ರಹಗಳಲ್ಲಿ ಅಳವಡಿಸಿರುವ ಸಂವೇದಕಗಳ ಮೂಲಕ ಭೂಮಿಯ ಮೇಲ್ಮೈ ಮಾಹಿತಿಗಳನ್ನು ಸಂಗ್ರಹಿಸುವ ಪ್ರಕ್ರಿಯೆಯು ಉಪಗ್ರಹ ದೂರ ಸಂವೇದನೆಯಾಗಿದೆ. |

ವಿವಿಧ ರೀತಿಯ ದೂರ ಸಂವೇದನೆಯ ಪ್ರಕ್ರಿಯೆಗಳನ್ನು ನೀವು ಪರಿಚಯಿಸಿಕೊಂಡಿರಲ್ಲವೆ. ಇನ್ನು ಅವುಗಳ ಸಾಧ್ಯತೆಗಳೇನೆಂದು ನೋಡುವ.

ಆಧುನಿಕ ಜಗತ್ತಿನಲ್ಲಿ ದೂರ ಸಂವೇದನೆಗೆ ಅನಂತ ಸಾಧ್ಯತೆಗಳಿವೆ. ಅವುಗಳಲ್ಲಿ ಕೆಲವನ್ನು ಕೆಳಗೆ ನೀಡಲಾಗಿದೆ.

- ಹವಾಗುಣ ಅಧ್ಯಯನಕ್ಕಾಗಿ
- ಕೃಷಿ ಕ್ಷೇತ್ರದ ಅಧ್ಯಯನಕ್ಕಾಗಿ
- ಪ್ರಾಕೃತಿಕ ಸಂಪನ್ಮೂಲಗಳ ಲಭ್ಯತೆಯನ್ನು ತಿಳಿಯಲು
- ಬರಗಾಲ, ಪ್ರಳಯದಂತಹ ಪ್ರಕೃತಿ ದುರಂತಗಳು ಉಂಟಾದ ಪ್ರದೇಶಗಳ ಮಾಹಿತಿಗಳನ್ನು ಸಂಗ್ರಹಿಸಲು
- 

**ಮಾಹಿತಿ ತಂತ್ರಜ್ಞಾನದ ಸಹಾಯದಿಂದ ದೂರ ಸಂವೇದನೆಯ ಹೆಚ್ಚಿನ ಸಾಧ್ಯತೆಗಳನ್ನು ಅನ್ವೇಷಿಸಿ ಬರೆಯಿರಿ.**

## ಭೂ ಮಾಹಿತಿ ವ್ಯವಸ್ಥೆ (GIS)

ಭೂಪಟದ ವಿಶ್ಲೇಷಣೆ, ದೂರ ಸಂವೇದನೆ ಮೊದಲಾದ ವಿಧಾನಗಳ ಮೂಲಕ ಭೂಮಿಯ ಕುರಿತಾದ ಮಾಹಿತಿಗಳನ್ನು ಅಥವಾ ಭೂಮಾಹಿತಿಗಳನ್ನು ಸಂಗ್ರಹಿಸಲು ಸಾಧ್ಯವಿದೆ ಎಂದು ನೀವು ತಿಳಿದುಕೊಂಡಿರಲ್ಲವೇ? ಈ ವಿಧಾನಗಳ ಮೂಲಕ ಸಂಗ್ರಹಿಸಿದ ಮಾಹಿತಿಗಳನ್ನು ವಿಶ್ಲೇಷಿಸಿ ನಿಗಮನವನ್ನು ರೂಪಿಸಲು, ಭೂಪಟಗಳು, ಗ್ರಾಫ್‌ಗಳು, ಪಟ್ಟಿಗಳು ಮುಂತಾದ ಉತ್ಪನ್ನಗಳನ್ನು ತಯಾರಿಸಲು ಸಾಧ್ಯವಿದೆ. ಭೂ ಮಾಹಿತಿಗಳನ್ನು ವಿಶ್ಲೇಷಿಸಿ ಇಂತಹ ಉತ್ಪನ್ನಗಳನ್ನು ನಿರ್ಮಿಸಲು ಸೋಫ್ಟ್‌ವೇರ್ ಆಧಾರಿತ ಕಂಪ್ಯೂಟರ್ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತದೆ. ಈ ತಂತ್ರಜ್ಞಾನವನ್ನು ಭೂ ಮಾಹಿತಿ ವ್ಯವಸ್ಥೆ ಅಥವಾ ಜಿ.ಐ.ಎಸ್. (Geographic Information System) ಎಂದು ಕರೆಯಲಾಗುತ್ತದೆ.

ಭೂ ಮಾಹಿತಿ ವ್ಯವಸ್ಥೆ ಕಾರ್ಯ ನಿರ್ವಹಿಸುವ ವಿವರಣೆಗಳನ್ನು ಕೆಳಗೆ ನೀಡಲಾಗಿದೆ. ಅದನ್ನು ಗಮನಿಸಿರಿ.




*ಚಿತ್ರ 9.15*

## ಭೂ ಮಾಹಿತಿ ವ್ಯವಸ್ಥೆಯಿಂದ ಇರುವ ಪ್ರಯೋಜನಗಳು

ಭೂ ಮಾಹಿತಿ ವ್ಯವಸ್ಥೆಯನ್ನು ಉಪಯೋಗಿಸುವ ಕೆಲವು ವಲಯಗಳು ಕೆಳಗೆ ಕೊಟ್ಟಿರುವ ಆಶಯಚಿತ್ರದಲ್ಲಿವೆ. ಆಶಯಚಿತ್ರವನ್ನು ನಿರೀಕ್ಷಣೆ ಮಾಡಿ ಅವುಗಳು ಯಾವುವೆಂದು ಗುರುತಿಸಿರಿ. ಮಾಹಿತಿ ತಂತ್ರಜ್ಞಾನದ ಸಹಾಯದಿಂದ ಇತರ ವಲಯಗಳನ್ನು ಕಂಡುಹಿಡಿದು ಬರೆಯಿರಿ.




## ಗ್ಲೋಬಲ್ ಪೊಸಿಶನಿಂಗ್ ಸಿಸ್ಟಮ್ (ಜಿ.ಪಿ.ಎಸ್)

ಒಂದು ವಿಮಾನವು ಆಕಾಶದಲ್ಲಿ ಚಲಿಸುವಾಗ ಅದರ ಸ್ಥಾನ, ಅದು ಹಾರುವ ಎತ್ತರ, ದಿಕ್ಕು ಮತ್ತು ಅದರ ಗುರಿ ತಲುಪಲು ತೆಗೆದುಕೊಳ್ಳುವ ಸಮಯ ಇತ್ಯಾದಿಗಳನ್ನು ನಿಖರವಾಗಿ ತಿಳಿಸುವ ಒಂದು ತಂತ್ರಜ್ಞಾನದ ಕುರಿತು ಆಲೋಚಿಸಿ ನೋಡಿರಿ. ಇದನ್ನು ಗ್ಲೋಬಲ್ ಪೊಸಿಶನಿಂಗ್ ಸಿಸ್ಟಮ್ ಎಂದು ಕರೆಯಲಾಗುತ್ತದೆ.

ಇದು ಭೂಮಿಯ ಮೇಲಿನ ಒಂದು ವಸ್ತುವಿನ ಅಕ್ಷಾಂಶ ಮತ್ತು ರೇಖಾಂಶ ಸ್ಥಾನ ಮತ್ತು ಅದರ ಎತ್ತರವನ್ನು ಅರ್ಥ ಮಾಡಿಕೊಳ್ಳಲು ಸಹಾಯಕವಾದ ಒಂದು ತಂತ್ರಜ್ಞಾನವಾಗಿದೆ. ಅದು ಒಂದು ಚಲಿಸುವ ವಸ್ತುವಾಗಿದ್ದರೋ? ಈ ತಂತ್ರಜ್ಞಾನದಿಂದ ಅದರ ಸ್ಥಾನ, ದಿಕ್ಕು, ಸಂಚಾರ ವೇಗ ಮತ್ತು ಸಮಯ ಎಂಬಿವುಗಳನ್ನು ನಿಖರವಾಗಿ



*ಚಿತ್ರ 9.16*

ನಿರ್ಧರಿಸಲು ಸಾಧ್ಯವಿದೆ. ವಿಮಾನ, ಹಡಗುಗಳು ಮೊದಲಾದ ಹೆಚ್ಚಿನ ವಾಹನಗಳಲ್ಲಿ ಇಂದು ಜಿ.ಪಿ.ಎಸ್. ವ್ಯವಸ್ಥೆಯನ್ನು ಉಪಯೋಗಿಸಲಾಗುತ್ತದೆ. ಕೃತಕ ಉಪಗ್ರಹಗಳ ಗುಂಪಿನ ಸಹಾಯದಿಂದ ಈ ವ್ಯವಸ್ಥೆಯು ಕಾರ್ಯ ನಿರ್ವಹಿಸುತ್ತದೆ.

ನಿಮ್ಮ ಶಾಲಾ ಬಸ್ಸಿನಲ್ಲಿ ಜಿ.ಪಿ.ಎಸ್. ಅಳವಡಿಸಲಾಗಿದೆಯೇ ಎಂದು ಪರಿಶೋಧಿಸುವಿರಲ್ಲವೆ.

**ನಿತ್ಯ ಜೀವನದಲ್ಲಿ ಯಾವೆಲ್ಲ ಅಗತ್ಯಗಳಿಗಾಗಿ ಇಂದು ಜಿ.ಪಿ.ಎಸ್. ಅನ್ನು ಉಪಯೋಗಿಸುತ್ತಾರೆಂದು ಮಾಹಿತಿ ತಂತ್ರಜ್ಞಾನದ ಸಹಾಯದಿಂದ ಕಂಡುಹಿಡಿದು ಪಟ್ಟಿ ಮಾಡಿರಿ.**

ದೂರ ಸಂವೇದನೆ, ಭೂ ಮಾಹಿತಿ ವ್ಯವಸ್ಥೆ, ಜಿ.ಪಿ. ಎಸ್. ಎಂಬೀ ನೂತನ ತಂತ್ರಜ್ಞಾನಗಳ ಸಾಧ್ಯತೆಗಳನ್ನು ರಾಷ್ಟ್ರ ನಿರ್ಮಾಣ ಮತ್ತು ದೇಶದ ಪ್ರಗತಿಗೆ ಬಳಸಿಕೊಳ್ಳುವಾಗ ಮಾನವ ಜೀವನವು ಹೆಚ್ಚು ಉತ್ತಮವಾಗುತ್ತದೆ ಮತ್ತು ಅರ್ಥಪೂರ್ಣವಾಗುತ್ತದೆ. ನಾವು ಗಳಿಸುತ್ತಿರುವ ವೈಜ್ಞಾನಿಕ ಪ್ರಗತಿ ಮತ್ತು ವೈಜ್ಞಾನಿಕ ಜ್ಞಾನವನ್ನು ದೇಶದ ಒಳಿತಿಗಾಗಿ ಬಳಸಿಕೊಳ್ಳೋಣ.

ಭಾರತದಲ್ಲಿ ಐ.ಎಸ್.ಆರ್.ಒ. ಅಭಿವೃದ್ಧಿಪಡಿಸಿದ ಭೂಪಟ ನಿರ್ಮಾಣ ವ್ಯವಸ್ಥೆಯು ಭುವನ್ ಆಗಿದೆ. ಜಿ.ಐ.ಎಸ್, ದೂರ ಸಂವೇದನೆ ಎಂಬಿವುಗಳ ಗರಿಷ್ಟ ಸಾಧ್ಯತೆಗಳನ್ನು ಉಪಯೋಗಿಸಿರುವ ಈ ವ್ಯವಸ್ಥೆಯ ವಿಶೇಷತೆಗಳನ್ನು ಮಾಹಿತಿ ತಂತ್ರಜ್ಞಾನದ ಸಹಾಯದೊಂದಿಗೆ ಅನ್ವೇಷಿಸಿ ತಿಳಿದುಕೊಳ್ಳಿರಿ.

## ಮುಂದುವರಿದ ಚಟುವಟಿಕೆಗಳು

- ನಿಮ್ಮ ಶಾಲೆಯ ರೂಪುರೇಖೆಯನ್ನು ರಚಿಸಿ ಬಣ್ಣ ಮತ್ತು ಚಿಹ್ನೆಗಳನ್ನು ಬಳಸಿಕೊಂಡು ಮಾಹಿತಿಗಳನ್ನು ಚಿತ್ರಿಸಿರಿ.
- ಮಾಹಿತಿ ತಂತ್ರಜ್ಞಾನದ ಸಹಾಯದಿಂದ ವಿವಿಧ ಭೌತಿಕ ಮತ್ತು ಸಾಂಸ್ಕೃತಿಕ ಭೂಪಟಗಳನ್ನು ಸಂಗ್ರಹಿಸಿ ಒಂದು ಡಿಜಿಟಲ್ ಆಲ್ಬಮ್ ತಯಾರಿಸಿರಿ.
- ದೂರ ಸಂವೇದನೆಯ ವಲಯದಲ್ಲಿ ISRO(ಇಸ್ರೋ) ಗಳಿಸಿದ ಸಾಧನೆಗಳ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಿ ಭಿತ್ತಿ ಪತ್ರಿಕೆಯನ್ನು ತಯಾರಿಸಿರಿ. ಇದನ್ನು ಸಮಾಜವಿಜ್ಞಾನ ನಿರೀಕ್ಷಣಾ ಪುಸ್ತಕದಲ್ಲಿ ಸೇರಿಸುವಿರಲ್ಲವೆ.



10

# ಬಜೆಟ್: ಅಭಿವೃದ್ಧಿಯ ಪ್ರತ್ಯಕ್ಷ ದಾಖಲೆ




*ಚಿತ್ರ 10.1*

ಈ ಕುಟುಂಬದ ಸಂಭಾಷಣೆಯನ್ನು ಗಮನಿಸಿದಿರಲ್ಲವೇ.

ಸಂಭಾಷಣೆಯಲ್ಲಿ ಉಲ್ಲೇಖಿಸಲಾದ ವೆಚ್ಚಗಳು ಯಾವುವು?

- ಸಾಲ ಮರುಪಾವತಿ
- 
- 
- 

ನಾವು ನಮ್ಮ ದೈನಂದಿನ ಜೀವನದಲ್ಲಿ ಯಾವೆಲ್ಲ ವೆಚ್ಚಗಳಿಗಾಗಿ ಹಣವನ್ನು ವಿನಿಯೋಗಿಸುತ್ತೇವೆ?

- ಆಹಾರ
- ಆರೋಗ್ಯ
- 
- 
- 
- 

## ಕುಟುಂಬ ವೆಚ್ಚ

ಒಂದು ಕುಟುಂಬವು ಆಹಾರದ ಬಳಕೆ (Food Consumption) ಮತ್ತು ಆಹಾರೇತರ ಬಳಕೆಗಾಗಿ (Non Food Consumption) ಒಂದು ನಿರ್ದಿಷ್ಟ ಅವಧಿಯಲ್ಲಿ ವೆಚ್ಚ ಮಾಡುವ ಒಟ್ಟು ಮೊತ್ತವು ಕುಟುಂಬ ವೆಚ್ಚವಾಗಿದೆ. ಕುಟುಂಬದ ಎಲ್ಲಾ ವೆಚ್ಚವನ್ನು ಮೊದಲೇ ನಿಶ್ಚಯಿಸಲು ಸಾಧ್ಯವಿಲ್ಲ. ಆದುದರಿಂದ ಕುಟುಂಬ ವೆಚ್ಚವನ್ನು ಹೀಗೆ ವರ್ಗೀಕರಿಸಬಹುದು.



ಚಿತ್ರ 10.2

**ಕುಟುಂಬ ವೆಚ್ಚ**

**ನಿರೀಕ್ಷಿತ ವೆಚ್ಚ**

ನಿರ್ದಿಷ್ಟ ಕಾಲಾವಧಿಯಲ್ಲಿ ಒಂದು ಕುಟುಂಬದಲ್ಲಿ ಉಂಟಾಗಬಹುದೆಂದು ನಿರೀಕ್ಷಿಸುವ ವೆಚ್ಚವು ನಿರೀಕ್ಷಿತ ವೆಚ್ಚವಾಗಿದೆ. ಪ್ರತಿ ತಿಂಗಳು, ಪ್ರತಿವರ್ಷ ಎಂಬೀ ರೀತಿಯಾಗಿ ಇದನ್ನು ಲೆಕ್ಕ ಮಾಡಬಹುದಾಗಿದೆ.

ಉದಾಹರಣೆ : ಆಹಾರ
ವಿದ್ಯುತ್ ಬಿಲ್ ಇತ್ಯಾದಿ.

**ಅನಿರೀಕ್ಷಿತ ವೆಚ್ಚ**

ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಒಂದು ಕುಟುಂಬಕ್ಕೆ ಮೊದಲೇ ನಿಶ್ಚಯಿಸಲು ಸಾಧ್ಯವಾಗದ್ದು ಹಾಗೂ ಅನಿರೀಕ್ಷಿತವಾಗಿ ಉಂಟಾಗುವ ವೆಚ್ಚಗಳು ಅನಿರೀಕ್ಷಿತ ವೆಚ್ಚಗಳಾಗಿವೆ.

ಉದಾಹರಣೆ: ಪ್ರಾಕೃತಿಕ ವಿಕೋಪಗಳು
ರೋಗಗಳು ಇತ್ಯಾದಿ.

**ನಿರೀಕ್ಷಿತ ವೆಚ್ಚ ಮತ್ತು ಅನಿರೀಕ್ಷಿತ ವೆಚ್ಚಗಳ ಕುರಿತಾದ ಹೆಚ್ಚಿನ ಉದಾಹರಣೆಗಳನ್ನು ಬರೆದು ಪಟ್ಟಿಯನ್ನು ಪೂರ್ತಿಗೊಳಿಸಿರಿ.**

| ನಿರೀಕ್ಷಿತ ವೆಚ್ಚ | ಅನಿರೀಕ್ಷಿತ ವೆಚ್ಚ |
|---|---|
| ● ವಿದ್ಯಾಭ್ಯಾಸ | ● ಅಪಘಾತ |
| | |
| | |

## ಕುಟುಂಬ ಆದಾಯ




*ಚಿತ್ರ 10.3*

ನಿಖಿಲನ ಕುಟುಂಬವು ತೊಡಗಿಸಿಕೊಂಡಿರುವ ವಿವಿಧ ಕಾರ್ಯಕ್ಷೇತ್ರಗಳನ್ನು ಚಿತ್ರದಲ್ಲಿ ಕೊಡಲಾಗಿದೆ. ಇದರಲ್ಲಿ ಕಸುಬುಗಳಲ್ಲಿ ತೊಡಗಿಸಿಕೊಂಡವರು ಹಾಗೂ ಅಲ್ಲದವರು ಇದ್ದಾರೆ. ಅವರು ಯಾರೆಲ್ಲ ಎಂದು ನೋಡುವ.

| ಕುಟುಂಬ ಸದಸ್ಯರು | ಚಟುವಟಿಕಾ ಕ್ಷೇತ್ರ/ ಆದಾಯದ ಮೂಲ | ಆದಾಯ ಇದೆ/ಇಲ್ಲ |
|---|---|---|
| ನಿಖಿಲ್ | ವಿದ್ಯಾರ್ಥಿ | |
| ತಂದೆ | ಹೊಲಿಗೆ | |
| ಅಮ್ಮ | ಸೇಲ್ಸ್ ವುಮನ್ | |
| ಅಜ್ಜ | ಕೃಷಿ | |
| ಅಜ್ಜಿ | ಪೆನ್ಶನ್ | |

ವಿವಿಧ ಮೂಲಗಳಿಂದ ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಒಂದು ಕುಟುಂಬಕ್ಕೆ ಲಭಿಸುವ ಒಟ್ಟು ಆದಾಯವು ಕುಟುಂಬ ಆದಾಯವಾಗಿದೆ. ಆದಾಯವನ್ನು ಉತ್ತಮ ರೀತಿಯಲ್ಲಿ ವಿನಿಯೋಗಿಸುವುದರ ಮೂಲಕ ಉಳಿತಾಯ ಮಾಡುವ ಅಭ್ಯಾಸವನ್ನು ಬೆಳೆಸಲೂ ಅನಿರೀಕ್ಷಿತ ವೆಚ್ಚಗಳನ್ನು ನಿಭಾಯಿಸಲು ಹಾಗೂ ಜೀವನಮಟ್ಟವನ್ನು ಹೆಚ್ಚಿಸಲು ಸಾಧ್ಯವಾಗುವುದು.



**ನಿಮ್ಮ ಕುಟುಂಬಕ್ಕೆ ಯಾವೆಲ್ಲ ಆದಾಯ ಮಾರ್ಗಗಳಿವೆ?**

## ಕುಟುಂಬ ಬಜೆಟ್

ಒಂದು ಕುಟುಂಬದ ನಿರ್ದಿಷ್ಟ ಕಾಲಾವಧಿಗಾಗಿರುವ ನಿರೀಕ್ಷಿತ ಆದಾಯ ಮತ್ತು ವೆಚ್ಚವನ್ನು ಸೇರಿಸಿ ತಯಾರಿಸುವ ಆರ್ಥಿಕ ದಾಖಲೆಯು ಕುಟುಂಬ ಬಜೆಟ್ ಆಗಿದೆ. ಪ್ರತಿ ತಿಂಗಳು ಅಥವಾ ಪ್ರತಿವರ್ಷಕ್ಕಾಗಿ ತಯಾರಿಸುವ ಕುಟುಂಬ ಬಜೆಟ್ ಕುಟುಂಬದ ಗಾತ್ರ, ಆದಾಯ ಹಾಗೂ ಅಗತ್ಯಗಳಿಗನುಸಾರವಾಗಿ ವಿಭಿನ್ನವಾಗಿರುವುದು. ಕುಟುಂಬದ ಎಲ್ಲಾ ಸದಸ್ಯರ ಅಭಿಪ್ರಾಯಗಳನ್ನು ಪರಿಗಣಿಸಿಕೊಂಡು ಕುಟುಂಬ ಬಜೆಟನ್ನು ತಯಾರಿಸಬೇಕು. ಸರಿಯಾದ ಮಧ್ಯಂತರದಲ್ಲಿ ಬಜೆಟ್‌ನ ಸೂಚನೆಗಳನ್ನು ಪಾಲಿಸಲಾಗುತ್ತದೆ ಎಂದು ಖಾತ್ರಿಪಡಿಸಿಕೊಳ್ಳುವ ಮೂಲಕ ಕುಟುಂಬದ ಆರ್ಥಿಕ ಭದ್ರತೆ ಹಾಗೂ ಕ್ಷೇಮವನ್ನು ಸಾಧಿಸಲು ಸಾಧ್ಯವಾಗುವುದು.

ಸಂಭಾಷಣೆಯನ್ನು ಗಮನಿಸಿರಿ.




*ಚಿತ್ರ 10.4*

ಅನಿರೀಕ್ಷಿತ ಬೆಲೆ ಹೆಚ್ಚಳವು ಕುಟುಂಬ ಬಜೆಟನ್ನು ಹೇಗೆ ಬಾಧಿಸುವುದು ಎಂದು ಮೇಲೆ ನೀಡಿರುವ ಸಂಭಾಷಣೆಯಿಂದ ತಿಳಿದುಕೊಂಡಿರಲ್ಲವೆ.

ಇದೇ ರೀತಿಯಾಗಿ ನಿಮ್ಮ ಕುಟುಂಬ ಬಜೆಟಿನ ಮೇಲೆ ಪ್ರಭಾವ ಬೀರುವ ಇತರ ಘಟಕಗಳನ್ನು ಕಂಡುಕೊಳ್ಳಿರಿ.

- ವಿದ್ಯುತ್ ದರ ಏರಿಕೆ.
-
-
-

ಆದಾಯವು, ವೆಚ್ಚಕ್ಕಿಂತ ಹೆಚ್ಚಾದರೆ ಅಥವಾ ಆದಾಯ ಹಾಗೂ ವೆಚ್ಚ ಸಮಾನವಾಗುವಾಗ ಕುಟುಂಬ ಬಜೆಟ್ ಸುಸ್ಥಿರವಾಗುವುದು.

## ಕುಟುಂಬ ವೆಚ್ಚವನ್ನು ಕಡಿಮೆ ಮಾಡುವುದು ಹೇಗೆ?

- ಪ್ರಾದೇಶಿಕವಾಗಿ ಲಭಿಸುವ ವಸ್ತುಗಳನ್ನು ಆಹಾರಕ್ಕಾಗಿ ಉಪಯೋಗಿಸಬಹುದು.
- ಆಹಾರ ವಸ್ತುಗಳನ್ನು ಸ್ವಂತವಾಗಿ ಕೃಷಿ ಮಾಡುವುದು.
- ಪಡಿತರ ಅಂಗಡಿ ಹಾಗೂ ನ್ಯಾಯಬೆಲೆ ಮಾರಾಟ ಕೇಂದ್ರಗಳಿಂದ ಗರಿಷ್ಠ ಪ್ರಯೋಜನವನ್ನು ಪಡೆದುಕೊಳ್ಳುವುದು.
-
-

ಒಂದು ಕುಟುಂಬದ ಒಂದು ತಿಂಗಳ ಬಜೆಟಿನ ಮಾದರಿಯನ್ನು ಕೆಳಗೆ ನೀಡಲಾಗಿದೆ.

| ಕ್ರ. ಸಂ | ಆದಾಯ | ಮೊತ್ತ | ಕ್ರ. ಸಂ | ವೆಚ್ಚ | ಮೊತ್ತ |
|---|---|---|---|---|---|
| 1 | ಕೂಲಿ | 9500 | 1 | ಅಕ್ಕಿ, ಸಂಬಾರ ಜೀನಸು | 5000 |
| 2 | ಸಂಬಳ | 10000 | 2 | ಹಾಲು, ತರಕಾರಿ | 1200 |
| 3 | ಪಿಂಚಣಿ | 3200 | 3 | ಮೀನು, ಮಾಂಸ | 2000 |
| 4 | ಕೃಷಿ | 2100 | 4 | ವಿದ್ಯುತ್ | 1100 |
| | | | 5 | ಬಟ್ಟೆಬರೆ | 1500 |
| | | | 6 | ಚಿಕಿತ್ಸೆ | 1000 |
| | | | 7 | ವಿದ್ಯಾಭ್ಯಾಸ | 1500 |
| | | | 8 | ವಿನೋದ | 500 |
| | | | 9 | ಪ್ರಯಾಣ | 2300 |
| | | | 10 | ಸಾಲ ಮರುಪಾವತಿ | 5000 |
| | | | 11 | ಫೋನ್, ಪತ್ರಿಕೆ, ಗ್ಯಾಸ್ | 1500 |
| | | | 12 | ಕೃಷಿ | 1000 |
| | | | 13 | ಇತರ ವೆಚ್ಚಗಳು | 2100 |
| | **ಒಟ್ಟು** | **24,800** | | ಒಟ್ಟು | **25,700** |
| | ಕಡಿಮೆ | 900 | | | |

- ಈ ಕುಟುಂಬ ಬಜೆಟಿನ ವಿಶೇಷತೆಗಳೇನು?
- ಈ ಕುಟುಂಬ ಬಜೆಟನ್ನು ಒಂದು ಮಿಗತೆ ಬಜೆಟಾಗಿ ಬದಲಾಯಿಸಲು ಯಾವೆಲ್ಲ ನಿರ್ದೇಶಗಳನ್ನು ನೀಡಲು ನಿಮಗೆ ಸಾಧ್ಯವಿದೆ?

ಕುಟುಂಬ ಬಜೆಟಿನಿಂದಿರುವ ಒಳಿತುಗಳು ಯಾವುವು? ಹೆಚ್ಚಿನವುಗಳನ್ನು ಕಂಡುಕೊಂಡು ಪಟ್ಟಿ ಪೂರ್ತಿಗೊಳಿಸಿರಿ

**ವಿವಿಧ ಆದಾಯ ಮೂಲಗಳನ್ನು ಕಂಡುಕೊಳ್ಳುವುದು.**

**ಆದಾಯಕ್ಕೆ ಅನುಗುಣವಾಗಿ ವೆಚ್ಚವನ್ನು ಕ್ರಮೀಕರಿಸುವುದು.**

**ಮಿತವ್ಯಯ ಅಭ್ಯಾಸ**

## ಸಾರ್ವಜನಿಕ ವೆಚ್ಚ




*ಚಿತ್ರಗಳು 10.5*

ಸರಕಾರವು ಜಾರಿಗೊಳಿಸುವ ವಿವಿಧ ಕ್ಷೇಮಾಭಿವೃದ್ದಿ ಕಾರ್ಯಕ್ರಮಗಳ ವಾರ್ತಾ ಶೀರ್ಷಿಕೆಗಳನ್ನು ಮೇಲೆ ನೀಡಲಾಗಿದೆ.

ಸರಕಾರಕ್ಕೆ ಈ ಚಟುವಟಿಕೆಗಳನ್ನು ನಿರ್ವಹಿಸಲು ತುಂಬಾ ಹಣದ ಅಗತ್ಯವಿದೆ. ಇವುಗಳಲ್ಲದೆ ಇತರ ಯಾವೆಲ್ಲಾ ಚಟುವಟಿಕೆಗಳಿಗಾಗಿ ಸರಕಾರವು ಹಣವನ್ನು ವ್ಯಯ ಮಾಡುತ್ತದೆ?

- ಸಂಬಳ
- ಬಡ್ಡಿ
- ರಕ್ಷಣಾ ವೆಚ್ಚ
- ಆಸ್ಪತ್ರೆ ನಿರ್ಮಾಣ ಚಟುವಟಿಕೆಗಳಿಗೆ
- ಸಾರ್ವಜನಿಕ ಹಿತ ಸಂರಕ್ಷಣಾ ಯೋಜನೆಗಳು
- 

**ಸರಕಾರದ ಹಣವನ್ನು ಉಪಯೋಗಿಸಿ ನಿಮ್ಮೂರಲ್ಲಿ ನಡೆದ ಕ್ಷೇಮಾಭಿವೃದ್ಧಿ ಚಟುವಟಿಕೆಗಳು ಯಾವುವೆಂದು ಚರ್ಚಿಸಿ ಟಿಪ್ಪಣಿ ತಯಾರಿಸಿರಿ.**

ಅಭಿವೃದ್ಧಿ ಅಥವಾ ಅಭಿವೃದ್ಧಿಯೇತರ ಚಟುವಟಿಕೆಗಳಿಗಾಗಿ ಸರಕಾರವು ವಿನಿಯೋಗಿಸುವ ಹಣವು ಸಾರ್ವಜನಿಕ ವೆಚ್ಚವಾಗಿದೆ. ಸರಕಾರದ ಚಟುವಟಿಕೆಗಳು ಹೆಚ್ಚಾಗುವುದಕ್ಕೆ ಅನುಸಾರವಾಗಿ ಸಾರ್ವಜನಿಕ ವೆಚ್ಚವು ಹೆಚ್ಚಾಗುವುದು. ಸಾರ್ವಜನಿಕ ವೆಚ್ಚವನ್ನು ಎರಡಾಗಿ ವರ್ಗೀಕರಿಸಬಹುದು.

**ಅಭಿವೃದ್ಧಿ ವೆಚ್ಚಗಳು** (Developmental Expenditure)

ದೇಶದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೆ ನೇರವಾಗಿ ಸಂಬಂಧಿಸಿದ ವೆಚ್ಚಗಳನ್ನು ಅಭಿವೃದ್ಧಿ ವೆಚ್ಚಗಳು ಎಂದು ಕರೆಯುತ್ತಾರೆ. ಇವುಗಳು ದೇಶದ ಉತ್ಪಾದನೆಯನ್ನು ಹಾಗೂ ಅರ್ಥ ವ್ಯವಸ್ಥೆಯನ್ನು ಉತ್ತೇಜಿಸಿ ಆರ್ಥಿಕ ಬೆಳವಣಿಗೆಗೆ ದೊಡ್ಡ ಕೊಡುಗೆಯನ್ನು ನೀಡುವುದರಿಂದಾಗಿ ಇವುಗಳನ್ನು ಅಭಿವೃದ್ಧಿ ವೆಚ್ಚಗಳೆಂದು ಕರೆಯುತ್ತಾರೆ. ರಸ್ತೆ, ಸೇತುವೆ, ಬಂದರು ಎಂಬಿವುಗಳನ್ನು ನಿರ್ಮಿಸುವುದು, ಹೊಸ ಉದ್ದಿಮೆಗಳು ಹಾಗೂ ವಿದ್ಯಾಭ್ಯಾಸ ಸಂಸ್ಥೆಗಳನ್ನು ಆರಂಭಿಸುವುದು ಮುಂತಾದ ಚಟುವಟಿಕೆಗಳಿಗಿರುವ ಸರಕಾರದ ವೆಚ್ಚವನ್ನು ಅಭಿವೃದ್ಧಿ ವೆಚ್ಚವಾಗಿ ಪರಿಗಣಿಸಲಾಗುವುದು.

**ಅಭಿವೃದ್ಧಿಯೇತರ ವೆಚ್ಚಗಳು** (Non-Developmental Expenditure)

ದೇಶದ ಹಿತ ಮತ್ತು ಜನಕ್ಷೇಮಕ್ಕಾಗಿ ಸರಕಾರವು ನಿರಂತರ ವಿನಿಯೋಗಿಸುವ ವೆಚ್ಚಗಳು ಅಭಿವೃದ್ಧಿಯೇತರ ವೆಚ್ಚಗಳಾಗಿವೆ. ರಕ್ಷಣೆ, ಬಡ್ಡಿ, ಪಿಂಚಣಿ, ಮಹಾಮಾರಿ, ಪ್ರಾಕೃತಿಕ ದುರಂತ ಮೊದಲಾದವುಗಳಿಗಾಗಿರುವ ವೆಚ್ಚವು ಇದರಲ್ಲಿ ಒಳಪಡುತ್ತವೆ.

**ಕೆಳಗೆ ನೀಡಿರುವ ವೆಚ್ಚಗಳನ್ನು ಅಭಿವೃದ್ಧಿ ವೆಚ್ಚಗಳು ಹಾಗೂ ಅಭಿವೃದ್ಧಿಯೇತರ ವೆಚ್ಚಗಳೆಂದು ವರ್ಗೀಕರಿಸಿ ಪಟ್ಟಿ ತಯಾರಿಸಿರಿ.**

- ಬಡ್ಡಿ
- ಚೈತನ್ಯದ ಉತ್ಪಾದನೆ
- ಮಹಾಮಾರಿ
- ಕ್ಷೇಮ ಪಿಂಚಣಿ
- ಸಾಲದ ಬಾಧ್ಯತೆ
- ಸಬ್ಸಿಡಿ
- ರಸ್ತೆ ನಿರ್ಮಾಣ
- ವಿದ್ಯಾಲಯ ನಿರ್ಮಾಣ
- ಯುದ್ಧ
- ರಕ್ಷಣೆ
- ಸಾರ್ವಜನಿಕ ಆಡಳಿತೆ
- ಕೈಗಾರಿಕಾ ಘಟಕಗಳು

| ಅಭಿವೃದ್ಧಿ ವೆಚ್ಚಗಳು | ಅಭಿವೃದ್ಧಿಯೇತರ ವೆಚ್ಚಗಳು |
|---|---|
| | |

**2018-19 ರಿಂದ 2022-23 ರ ವರೆಗಿನ ಐದು ವರ್ಷದ ಕೇಂದ್ರ ಸರಕಾರದ ಸಾರ್ವಜನಿಕ ವೆಚ್ಚಗಳನ್ನು ಕೆಳಗೆ ನೀಡಲಾಗಿದೆ.**




*ಚಿತ್ರ 10.6*

**ಸರಕಾರದ ಸಾರ್ವಜನಿಕ ವೆಚ್ಚಗಳ ಆಧಾರದಲ್ಲಿ ಗ್ರಾಫ್ ವಿಶ್ಲೇಷಿಸಿ ನಿಗಮನಗಳನ್ನು ಬರೆಯಿರಿ.**

## ಸಾರ್ವಜನಿಕ ಆದಾಯ

ಕ್ಷೇಮಾಭಿವೃದ್ಧಿ ಚಟುವಟಿಕೆಗಳನ್ನು ನಿರ್ವಹಿಸಲು ಸರಕಾರಕ್ಕೆ ಹೆಚ್ಚಿನ ಹಣದ ಅಗತ್ಯ ಉಂಟಾಗುತ್ತದೆ. ಈ ರೀತಿ ಅಗತ್ಯಗಳನ್ನು ನಿಭಾಯಿಸಲು ವಿವಿಧ ಮೂಲಗಳಿಂದ ಸರಕಾರವು ಸಂಗ್ರಹಿಸುವ ಹಣವು ಸಾರ್ವಜನಿಕ ಆದಾಯವಾಗಿದೆ. ಇದು ಸರಕಾರದ ಬಜೆಟಿನ ಒಂದು ಪ್ರಧಾನ ಘಟಕವಾಗಿದೆ. ಸರಕಾರದ ಆದಾಯ ಮೂಲಗಳು ಯಾವುವು ಎಂದು ಯೋಚಿಸಿ ನೋಡಿರಿ.

ಸರಕಾರವು ಪ್ರಧಾನವಾಗಿ ಎರಡು ಮೂಲಗಳಿಂದ ಆದಾಯವನ್ನು ಕಂಡುಕೊಳ್ಳುತ್ತದೆ. ಕೆಳಗೆ ನೀಡಿರುವ ಚಾರ್ಟನ್ನು ಗಮನಿಸಿರಿ.




*ಚಿತ್ರ 10.7*

ಸಾರ್ವಜನಿಕ ಆದಾಯ

- **ತೆರಿಗೆ ಆದಾಯ**
  - ತೆರಿಗೆಯ ಮೂಲಕ ಲಭಿಸುವ ಆದಾಯ
    - **ಪ್ರತ್ಯಕ್ಷ ತೆರಿಗೆ**
      ತೆರಿಗೆಯನ್ನು ಯಾರಿಗೆ ವಿಧಿಸಲಾಗುತ್ತದೆಯೋ ಆ ವ್ಯಕ್ತಿ ಪಾವತಿಸುವ ತೆರಿಗೆಯು ಪ್ರತ್ಯಕ್ಷ ತೆರಿಗೆಯಾಗಿದೆ. ಅಂದರೆ ತೆರಿಗೆ ನೀಡುವವರೇ ತೆರಿಗೆಯ ಭಾರವನ್ನು ವಹಿಸಿಕೊಳ್ಳುತ್ತಾರೆ ಎಂದರ್ಥ. ಆದಾಯ ತೆರಿಗೆ, ಕಟ್ಟಡ ತೆರಿಗೆ ಎಂಬಿವುಗಳು ಇದಕ್ಕೆ ಉದಾಹರಣೆಯಾಗಿದೆ.
    - **ಪರೋಕ್ಷ ತೆರಿಗೆ**
      ಒಬ್ಬರ ಮೇಲೆ ವಿಧಿಸಲ್ಪಟ್ಟ ತೆರಿಗೆಯನ್ನು ಭಾಗಿಕವಾಗಿಯೋ ಪೂರ್ಣವಾಗಿಯೋ ಇನ್ನೊಬ್ಬರು ನೀಡಬೇಕಾಗಿ ಬರುವುದು. ಮಾರಾಟ ತೆರಿಗೆ, ಮನೋರಂಜನಾ ತೆರಿಗೆ, ಇತ್ಯಾದಿಗಳು ಉದಾಹರಣೆಗಳಾಗಿವೆ.
- **ತೆರಿಗೇತರ ಆದಾಯ**
  - ತೆರಿಗೆಯ ಮೂಲಕವಲ್ಲದೆ ಇತರ ಮೂಲಗಳಿಂದ ಲಭಿಸುವ ಆದಾಯ ಉದಾ: ಫೀಸ್, ದಂಡನಾ ಶುಲ್ಕ, ಗ್ರಾಂಟ್, ಲಾಭ, ಬಡ್ಡಿ....

**ತೆರಿಗೆ**

ಕ್ಷೇಮ ಚಟುವಟಿಕೆಗಳು, ಅಭಿವೃದ್ಧಿ ಚಟುವಟಿಕೆಗಳು ಮೊದಲಾದ ಸಾರ್ವಜನಿಕ ಹಿತಾಸಕ್ತಿಗಾಗಿರುವ ವೆಚ್ಚಗಳನ್ನು ವಹಿಸಲು ಜನರು ಸರಕಾರಕ್ಕೆ ಕಡ್ಡಾಯವಾಗಿ ನೀಡಬೇಕಾದ ಹಣವಾಗಿದೆ ತೆರಿಗೆ. ತೆರಿಗೆ ನೀಡುವ ವ್ಯಕ್ತಿಯನ್ನು ತೆರಿಗೆದಾರನೆಂದು ಕರೆಯುತ್ತಾರೆ.

**ಪ್ರತ್ಯಕ್ಷ ತೆರಿಗೆ ಹಾಗೂ ಪರೋಕ್ಷ ತೆರಿಗೆಗಳಿಗೆ ಹೆಚ್ಚಿನ ಉದಾಹರಣೆಗಳನ್ನು ತಿಳಿದುಕೊಂಡು ಪಟ್ಟಿ ತಯಾರಿಸಿರಿ.**

## ಸರಕು ಮತ್ತು ಸೇವಾ ತೆರಿಗೆ (Goods and Services Tax-GST)

ದೇಶದಲ್ಲಿ ಒಂದೇ ತೆರಿಗೆ ಎಂಬ ತತ್ವವನ್ನು ಜಾರಿಗೊಳಿಸಲು ಸಂವಿಧಾನದ 101-ನೇ ತಿದ್ದುಪಡಿಯ ಪ್ರಕಾರ 2017 ಜುಲೈ 1 ರಂದು ಜಾರಿಗೆ ಬಂದ ಏಕೀಕೃತ ಪರೋಕ್ಷ ತೆರಿಗೆ ವ್ಯವಸ್ಥೆಯು ಸರಕು ಮತ್ತು ಸೇವಾ ತೆರಿಗೆಯಾಗಿದೆ(GST). ಒಂದು ಆರ್ಥಿಕ ವರ್ಷದಲ್ಲಿ ವ್ಯವಹಾರವು ಸರಕಾರ ನಿಗದಿಪಡಿಸಿದ ಹಣಕ್ಕಿಂತಲೂ ಅಧಿಕವಾದರೆ ವ್ಯಾಪಾರಿಗಳು ಕಡ್ಡಾಯವಾಗಿ ಜಿ.ಎಸ್.ಟಿ ನೋಂದಾವಣಿ ಮಾಡಬೇಕು. ಪ್ರಸ್ತುತ ಬಳಕೆದಾರ ಜಿ.ಎಸ್.ಟಿ ನೀಡಬೇಕಾಗಿರುವುದು 0%, 5%, 12%, 18%, 28% ಎಂಬೀ ದರಗಳಲ್ಲಾಗಿದೆ. ಈ ರೀತಿಯಾಗಿ ಬಳಕೆದಾರರಿಂದ ಸಂಗ್ರಹಿಸುವ ವಿವಿಧ ದರದಲ್ಲಿರುವ ತೆರಿಗೆಗಳನ್ನು ವ್ಯಾಪಾರಿಗಳು ಸರಕಾರಕ್ಕೆ ಪಾವತಿಸಬೇಕು. ಕಾಲಾನುಸಾರವಾಗಿ ಜಿಎಸ್‌ಟಿ ದರದಲ್ಲಿ ಬದಲಾವಣೆಗಳು ಬರಬಹುದು.







ವಾರ್ತಾ ಶೀರ್ಷಿಕೆಗಳನ್ನು ಗಮನಿಸಿದಿರಲ್ಲವೇ? ಕೇಂದ್ರ ಸರಕಾರ ಮತ್ತು ರಾಜ್ಯ ಸರಕಾರಗಳು ಬಜೆಟ್ ತಯಾರಿಸುತ್ತವೆ.

## ಬಜೆಟ್ (Budget)

ಒಂದು ಆರ್ಥಿಕ ವರ್ಷದಲ್ಲಿ ಸರಕಾರವು ನಿರೀಕ್ಷಿಸುವ ವೆಚ್ಚ ಮತ್ತು ಆದಾಯವನ್ನು ಸೇರಿಸಿಕೊಂಡು ತಯಾರಿಸುವ ಆರ್ಥಿಕ ದಾಖಲೆಯು ಬಜೆಟ್ ಆಗಿದೆ. ನಮ್ಮ ದೇಶದಲ್ಲಿ ಏಪ್ರಿಲ್ 1 ರಿಂದ ಮಾರ್ಚ್ 31 ರವರೆಗಿನ ಒಂದು ಆರ್ಥಿಕ ವರ್ಷಕ್ಕಾಗಿ ಬಜೆಟ್ ತಯಾರಿಸಲಾಗುತ್ತದೆ. ವಿತ್ತ ಸಚಿವರು ಬಜೆಟ್ ಮಂಡಿಸುತ್ತಾರೆ. ಭಾರತದ ಸಂವಿಧಾನದ ಆರ್ಟಿಕಲ್ 112-ಕ್ಕೆ ಅನುಸಾರವಾಗಿ ಕೇಂದ್ರ ಬಜೆಟ್ ದೇಶದ ವಾರ್ಷಿಕ ಆರ್ಥಿಕ ಆಡಿಟ್ ಆಗಿದೆ.




*ಚಿತ್ರ 10.8*

## ಬಜೆಟ್ ಹಲವು ವಿಧ

ಆಯವ್ಯಯದ ಆಧಾರದಲ್ಲಿ ಬಜೆಟನ್ನು ಮೂರು ವಿಧವಾಗಿ ವರ್ಗೀಕರಿಸಬಹುದು.

ಬಜೆಟ್

- ಮಿಗತೆ ಬಜೆಟ್ (Surplus Budget) → ಆದಾಯ ಹೆಚ್ಚು ವೆಚ್ಚ ಕಡಿಮೆ
- ಸಮತೋಲನ ಬಜೆಟ್ (Balanced Budget) → ಆದಾಯ ಮತ್ತು ವೆಚ್ಚ ಸಮಾನ
- ಕೊರತೆ ಬಜೆಟ್ (Deficit Budget) → ಆದಾಯ ಕಡಿಮೆ ವೆಚ್ಚ ಹೆಚ್ಚು





*ಚಿತ್ರಗಳು 10.9*

## ಬಜೆಟ್‌ನ ಹುಟ್ಟು

'ಬೋಗಟ್' ಎಂಬ ಫ್ರೆಂಚ್ ಪದದಿಂದಾಗಿ ಬಜೆಟ್ ಎಂಬ ಪದ ಹುಟ್ಟಿದೆ. ಸಣ್ಣ ಬ್ಯಾಗ್ ಅಥವಾ ಚೀಲ ಎನ್ನುವ ಅರ್ಥದಿಂದ ಸರಕಾರದ ಆರ್ಥಿಕ ದಾಖಲೆಗಳನ್ನೊಳಗೊಂಡ ಒಂದು ಚೀಲ ಎಂಬ ಅರ್ಥದಲ್ಲಿ ಬಜೆಟ್ ಎಂಬ ಪದ ರೂಪುಗೊಂಡಿದೆ. ಬಜೆಟಿನ ಪ್ರಥಮ ಮಂಡನೆ ನಡೆದದ್ದು 11-ನೇ ಶತಮಾನದಲ್ಲಿ ಆಗಿದೆ. ಸ್ವತಂತ್ರ ಭಾರತದ ಪ್ರಥಮ ಕೇಂದ್ರ ಬಜೆಟನ್ನು ಅಂದಿನ ಹಣಕಾಸು ಸಚಿವರಾಗಿದ್ದ ಆರ್. ಕೆ. ಷಣ್ಮುಗಂ ಚೆಟ್ಟಿಯವರು ಮಂಡಿಸಿದ್ದರು.

## ಸಾರ್ವಜನಿಕ ಸಾಲ (Public Debt)

ಕ್ಷೇಮಾಭಿವೃದ್ಧಿ ಚಟುವಟಿಕೆಗಳನ್ನು ಕಾರ್ಯಗತಗೊಳಿಸಲು ಮತ್ತು ಆಡಳಿತಾತ್ಮಕವಾದ ವಿವಿಧ ಅಗತ್ಯಗಳನ್ನು ಈಡೇರಿಸಲು ಆದಾಯವು ಸಾಕಾಗದೆ ಬರುವಾಗ ಸರಕಾರವು ಸಾಲ ಪಡೆಯಬೇಕಾಗಿ ಬರಬಹುದು. ಈ ರೀತಿಯಾಗಿ ಸರಕಾರ ಪಡೆಯುವ ಸಾಲವು ಸಾರ್ವಜನಿಕ ಸಾಲವಾಗಿದೆ. ದೇಶದೊಳಗಿಂದಲೂ ಹೊರಗಿನಿಂದಲೂ ಸಾಲವನ್ನು ಪಡೆಯುವುದಿದೆ. ಇವುಗಳನ್ನು ಯಥಾಕ್ರಮವಾಗಿ ಆಂತರಿಕ ಸಾಲ ಮತ್ತು ವಿದೇಶ ಸಾಲ ಎಂದು ಕರೆಯುತ್ತಾರೆ.

**ಆಂತರಿಕ ಸಾಲ** : ಆಂತರಿಕ ಸಾಲವು ದೇಶದೊಳಗಿರುವ ವ್ಯಕ್ತಿಗಳಿಂದಲೂ ಸಂಸ್ಥೆಗಳಿಂದಲೂ ಸರಕಾರ ಪಡೆಯುವ ಸಾಲವಾಗಿದೆ.



*ವ್ಯಕ್ತಿಗಳು*




*ಸರಕಾರಿ ಸಂಸ್ಥೆಗಳು*

*ಚಿತ್ರ 10.10*

**ವಿದೇಶಿ ಸಾಲ** : ವಿದೇಶಿ ಸರಕಾರದಿಂದಲೂ ಅಂತಾರಾಷ್ಟ್ರೀಯ ಸಂಸ್ಥೆಗಳಿಂದಲೂ ಪಡೆಯುವ ಸಾಲವು ವಿದೇಶಿ ಸಾಲವಾಗಿದೆ.





*ವಿದೇಶಿ ಸರಕಾರಗಳು*







*ಅಂತಾರಾಷ್ಟ್ರೀಯ ಸಂಸ್ಥೆಗಳು*

*ಚಿತ್ರ 10.11*

ಈ ರೀತಿಯ ಸಾಲಗಳ ಉತ್ಪಾದನಾ ದಕ್ಷತೆಯಿಂದ ಕೂಡಿದ ಉಪಯೋಗವು ಕ್ಷೇಮಾಭಿವೃದ್ಧಿ ಚಟುವಟಿಕೆಗಳನ್ನು ಜಾರಿಗೊಳಿಸುವುದಕ್ಕೂ ಆ ಮೂಲಕ ಆದಾಯ ವೃದ್ಧಿಗೂ ಸಾರ್ವಜನಿಕ ಸಾಲವನ್ನು ಕಡಿಮೆಗೊಳಿಸುವುದಕ್ಕೂ ಸಹಾಯಕವಾಗುವುದು.

## ಆರ್ಥಿಕ ನೀತಿ (Fiscal Policy)

ಆರ್ಥಿಕ ನೀತಿ ಎಂದರೆ ಸಾರ್ವಜನಿಕ ಆದಾಯ, ಸಾರ್ವಜನಿಕ ವೆಚ್ಚ ಮತ್ತು ಸಾರ್ವಜನಿಕ ಸಾಲ ಎಂಬಿವುಗಳಿಗೆ ಸಂಬಂಧಿಸಿದ ಸರಕಾರದ ಸಮಗ್ರವಾದ ನೀತಿಯಾಗಿದೆ. ಆರ್ಥಿಕ ಇಲಾಖೆಯು ತಯಾರಿಸುವ ಈ ನೀತಿಯನ್ನು ಬಜೆಟಿನ ಮೂಲಕ ಜಾರಿಗೊಳಿಸಲಾಗುತ್ತದೆ. ಇದು ಪ್ರಸ್ತುತ ಇರುವ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸಲು ಹಾಗೂ ಆರ್ಥಿಕ ಸ್ಥಿರತೆಯನ್ನು ಹೊಂದಲು ಸರಕಾರಕ್ಕೆ ಮಾರ್ಗದರ್ಶನ ಮಾಡುವ ಒಂದು ನೀತಿಯೂ ಆಗಿದೆ.

## ಆರ್ಥಿಕ ನೀತಿಯ ಉದ್ದೇಶಗಳು

- ಹೆಚ್ಚುವರಿ ವೆಚ್ಚಗಳನ್ನು ನಿಯಂತ್ರಿಸುವುದು.
- ಆದಾಯದ ವಿತರಣೆಯ ಅಸಮಾನತೆಯನ್ನು ಇಲ್ಲದೆ ಮಾಡುವುದು.
- ಆರ್ಥಿಕ ಬೆಳವಣಿಗೆಯನ್ನು ತ್ವರಿತಗೊಳಿಸುವುದು.
- ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದು.

ಸಂಸ್ಥೆಗಳು, ಸ್ಥಳೀಯಾಡಳಿತ ಸಂಸ್ಥೆಗಳು, ರಾಜ್ಯ, ದೇಶ ಎಂಬಿವುಗಳು ಬಜೆಟ್ ತಯಾರಿಸಿ ಕಾರ್ಯ ನಿರ್ವಹಿಸುವುದರ ಮೂಲಕ ಕ್ಷೇಮಾಭಿವೃದ್ಧಿ ಕಾರ್ಯಗಳು ನಡೆಯುವುದಕ್ಕೂ ಸುಸ್ಥಿರ ಅಭಿವೃದ್ಧಿ ಸಾಧಿಸುವುದಕ್ಕೂ ಸಹಾಯಕವಾಗುತ್ತದೆ.

## ಮುಂದುವರಿದ ಚಟುವಟಿಕೆಗಳು

- ಆಯ ವ್ಯಯ ಲೆಕ್ಕಗಳ ಕುರಿತು ಹೆತ್ತವರಲ್ಲಿ ಕೇಳಿ ತಿಳಿದು ನಿಮ್ಮ ಕುಟುಂಬ ಬಜೆಟ್ ತಯಾರಿಸಿರಿ.
- ಕೇಂದ್ರ, ರಾಜ್ಯ ಸರಕಾರಗಳು ನಡೆಸುವ ಕ್ಷೇಮಾಭಿವೃದ್ಧಿ ಚಟುವಟಿಕೆಗಳನ್ನೊಳಗೊಂಡ ಪತ್ರಿಕಾ ವಾರ್ತೆಗಳನ್ನು ಸಂಗ್ರಹಿಸಿ ಒಂದು ಸಂಚಿಕೆ ತಯಾರಿಸಿರಿ.
- ಸರಕು ಮತ್ತು ಸೇವೆಗಳನ್ನು ಸ್ವೀಕರಿಸುವಾಗ ನಾವು ನೀಡುವ ಜಿ.ಎಸ್.ಟಿ. ದರಗಳನ್ನು ಕೆಳಗೆ ಕೊಡಲಾಗಿದೆ. ಯಾವೆಲ್ಲ ಸರಕು ಮತ್ತು ಸೇವೆಗಳಿಗಾಗಿ ತೆರಿಗೆಯನ್ನು ಹೇರಿರುವುದೆಂದು ಕಂಡುಕೊಂಡು ಪಟ್ಟಿ ಪೂರ್ತಿಗೊಳಿಸಿರಿ.

| ತೆರಿಗೆ ದರಗಳು | ಸರಕುಗಳು | ಸೇವೆಗಳು |
|---|---|---|
| 0% | | |
| 5% | | |
| 12% | | |
| 18% | | |
| 28% | | |

- ಕೇಂದ್ರ, ರಾಜ್ಯ ಸರಕಾರಗಳಂತೆ ಸ್ಥಳೀಯಾಡಳಿತ ಸಂಸ್ಥೆಗಳು ವಿವಿಧ ತರದ ತೆರಿಗೆಗಳನ್ನು ವಿಧಿಸುತ್ತವಲ್ಲವೆ. ಅವುಗಳು ಯಾವುವೆಂದು ಅನ್ವೇಷಿಸಿ ಕಂಡುಹಿಡಿದು ಪಟ್ಟಿಮಾಡಿರಿ.







11

# ತಾರತಮ್ಯದ ವಿರುದ್ಧ

"ಈ ನ್ಯಾಯಾಲಯದಲ್ಲಿ ಬೇರೂರಿರುವ ಬಿಳಿಯರ ಪ್ರಾಬಲ್ಯದ ವಾತಾವರಣವು ನನ್ನನು ವಿಚಲಿತನಾಗಿಸುತ್ತದೆ. ಇದೇ ಆಧಿಪತ್ಯದಿಂದ ನನ್ನ ಜನರಿಗೆ ಆಗಿರುವ ಅಮಾನವೀಯ ಅನ್ಯಾಯಗಳಿಂದ ನಾನು ವಿಚಲಿತನಾಗಿದ್ದೇನೆ. ಈ ಸಂಸತ್ತಿನಿಂದಲೇ ನಾನು ಮತದಾನದ ಹಕ್ಕು ಇಲ್ಲದವನಾಗಿದ್ದು ಎಂದು ನಾನು ನೆನಪಿಸುತ್ತೇನೆ. ನಮಗೆ ಒಂದು ತುಂಡು ಭೂಮಿಯಿಲ್ಲ. ಆದರೂ ಜನರು ಬಡತನದೊಂದಿಗೆ ಹೋರಾಡುವ ಸ್ಥಳಗಳಿಗೆ ನಮ್ಮನ್ನು ಬಲವಂತವಾಗಿ ಕಳುಹಿಸುತ್ತಾರೆ. ಅನೇಕ ವರ್ಷಗಳಿಂದ ಈ ದೇಶದಲ್ಲಿ ಅನ್ಯಾಯ ಮತ್ತು ನೋವಿಗೆ ಕಾರಣವಾದ ಅದೇ ವರ್ಣಭೇದವು ನಿಷ್ಪಕ್ಷವಾದ ಒಂದು ವಿಚಾರಣೆಯನ್ನು ನನಗೆ ನೀಡುತ್ತದೆ ಎಂದು ಹೇಗೆ ದೃಢಪಡಿಸಲು ಸಾಧ್ಯ?"

*ನೆಲ್ಸನ್ ಮಂಡೇಲರ*
*ಪ್ರಿಟೋರಿಯಾ ವಿಚಾರಣೆ - (1962)*



*ಚಿತ್ರ 11.1*

ಮೇಲೆ ಕೊಟ್ಟಿರುವುದು ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯ ಹೋರಾಟ ನಾಯಕರಾದ ನೆಲ್ಸನ್ ಮಂಡೇಲರ ಮಾತುಗಳಾಗಿವೆ.

ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದವನ್ನು ಜಾರಿಗೊಳಿಸಿದವರು ಯಾರು?

ನೆಲ್ಸನ್ ಮಂಡೇಲರಿಗೆ ಈ ರೀತಿಯ ಒಂದು ವಿಚಾರಣೆ ಎದುರಿಸಬೇಕಾಗಿ ಬಂದ ಸನ್ನಿವೇಶ ಯಾವುದು?

ನೆಲ್ಸನ್ ಮಂಡೇಲರು ನೂರಾರು ವರ್ಷಗಳವರೆಗೆ ವರ್ಣದ ಹೆಸರಿನಲ್ಲಿ ದಬ್ಬಾಳಿಕೆ ಎದುರಿಸಿದ ದಕ್ಷಿಣ ಆಫ್ರಿಕಾದ ಜನರ ವಿಮೋಚನೆಗಾಗಿ ಹೋರಾಡಿದ ವ್ಯಕ್ತಿಯಾಗಿದ್ದಾರೆ. ಸ್ವಂತ ದೇಶದ ಹಾಗು ಜನರ ವಿಮೋಚನೆಗಾಗಿ ಹೋರಾಡಿದ್ದಕ್ಕಾಗಿ ಅವರಿಗೆ ಮೂರು ದಶಕಗಳವರೆಗೆ ಜೈಲುವಾಸ ಅನುಭವಿಸಬೇಕಾಗಿ ಬಂತು. ದಕ್ಷಿಣ ಆಫ್ರಿಕಾದ ಜನರು ಎದುರಿಸಿದ ತಾರತಮ್ಯ ಹಾಗು ದಬ್ಬಾಳಿಕೆಯ ಕುರಿತು ಹೆಚ್ಚಿನ ಮಾಹಿತಿಯನ್ನು ತಿಳಿಯಲು ಈ ದೇಶದ ವಿಶೇಷತೆಗಳನ್ನು ಅರಿಯಬೇಕಾಗಿದೆ.

ಜಾಗತಿಕ ಭೂಪಟವನ್ನು ನೋಡಿ ದಕ್ಷಿಣ ಆಫ್ರಿಕಾ ಯಾವ ಭೂಖಂಡದಲ್ಲಿದೆ ಎಂದು ಕಂಡು ಹಿಡಿಯಿರಿ.




*ಚಿತ್ರ 11.2*
*ಜಾಗತಿಕ ಭೂಪಟ*

## ದಕ್ಷಿಣ ಆಫ್ರಿಕಾ: ಸ್ಥಾನ, ಭೂಪ್ರಕೃತಿ

ದಕ್ಷಿಣ ಆಫ್ರಿಕಾವು ಆಫ್ರಿಕಾ ಭೂಖಂಡದ ದಕ್ಷಿಣ ತುದಿಯಲ್ಲಿ ಇಂಡಿಯನ್ ಮಹಾಸಮುದ್ರ ಮತ್ತು ಅಟ್ಲಾಂಟಿಕ್ ಸಮುದ್ರದೊಂದಿಗೆ ಗಡಿ ಹಂಚಿಕೊಂಡಿರುವ ದೇಶವಾಗಿದೆ. ವೈವಿಧ್ಯಮಯವಾದ ಭೌಗೋಳಿಕ ವೈಶಿಷ್ಟ್ಯಗಳು ದಕ್ಷಿಣ ಆಫ್ರಿಕಾದ ವಿಶೇಷತೆಗಳಾಗಿವೆ. ವಿಶಾಲವಾದ ತೀರ ಪ್ರದೇಶಗಳು, ವಿಸ್ತಾರವಾದ ಸಮತಲಗಳು ಮತ್ತು

ಪೀಠಭೂಮಿಗಳು, ಎತ್ತರದ ಪರ್ವತ ಸಾಲುಗಳು, ದೊಡ್ಡ ನದಿಗಳು, ಜಲಪಾತಗಳು, ಒಣ ಮರುಭೂಮಿ ಮೊದಲಾದವುಗಳು ಈ ದೇಶವನ್ನು ವಿಭಿನ್ನವಾಗಿಸುತ್ತವೆ. ಒಳನಾಡಿನ ಕೃಷಿ ಭೂಮಿ ಮತ್ತು ಗಣಿಗಳಿಂದ ಇರುವ ಸಂಪತ್ತು, ಹವಾಗುಣ, ಮಾನವ ಸಂಪನ್ಮೂಲ ಇತ್ಯಾದಿಗಳು ಯೂರೋಪಿಯನ್ನರನ್ನು ದಕ್ಷಿಣ ಆಫ್ರಿಕಾದ ಕಡೆಗೆ ಆಕರ್ಷಿಸಿತು.

ಗ್ಲೋಬ್, ಅಟ್ಲಾಸ್ ಮೊದಲಾದುವುಗಳನ್ನು ನಿರೀಕ್ಷಿಸಿ ಕೆಳಗೆ ಹೇಳಿರುವ ಮಾಹಿತಿಯನ್ನು ಕಂಡು ಹಿಡಿಯಿರಿ.

ಯಾವೆಲ್ಲ ಅಕ್ಷಾಂಶ, ರೇಖಾಂಶ ರೇಖೆಗಳೆಡೆಯಲ್ಲಿ ದಕ್ಷಿಣ ಆಫ್ರಿಕಾ ನೆಲೆ ನಿಂತಿದೆ?

ದಕ್ಷಿಣ ಆಫ್ರಿಕಾದೊಂದಿಗೆ ಗಡಿ ಹಂಚಿಕೊಂಡಿರುವ ದೇಶಗಳು ಯಾವುವು?




*ಚಿತ್ರ 11.3*

### ಶುಭ ಭರವಸೆಯ ಭೂಶಿರ
(Cape of Good Hope)

ಆಫ್ರಿಕಾ ಭೂಖಂಡದ ದಕ್ಷಿಣ ಭಾಗದ ಅಟ್ಲಾಂಟಿಕ್ ಸಮುದ್ರ ತೀರದಲ್ಲಿ ಶುಭ ಭರವಸೆಯ ಭೂಶಿರವಿದೆ. ಯುರೋಪಿಯನ್ನರಿಗೆ ಅಟ್ಲಾಂಟಿಕ್ ಮಹಾ ಸಮುದ್ರದ ಮೂಲಕ ಆಫ್ರಿಕನ್ ಭೂಖಂಡವನ್ನು ಸುತ್ತಿ ಇಂಡಿಯನ್ ಮಹಾ ಸಮುದ್ರಕ್ಕೆ ತಲುಪಿದರೆ ಮಾತ್ರ ಏಷ್ಯಾ ಭೂಖಂಡದ ಭಾರತ ಮೊದಲಾದ ದೇಶಗಳಿಗೆ ತಲುಪಲು ಸಾಧ್ಯವಿತ್ತು. ಏಷ್ಯಾದೆಡೆಗೆ ತಲುಪಲಿರುವ ಭರವಸೆ ನೀಡುವುದು ಎಂಬ ಅರ್ಥದಲ್ಲಿ ಈ ಸ್ಥಳವನ್ನು 'ಶುಭ ಭರವಸೆಯ ಭೂಶಿರ' ಎಂಬ ಹೆಸರಿನಲ್ಲಿ ಕರೆಯಲು ಪ್ರಾರಂಭಿಸಿದರು.

**ಡಿಜಿಟಲ್ ಭೂಪಟ ಉಪಯೋಗಿಸಿ ಆಫ್ರಿಕಾ ಭೂಖಂಡದಲ್ಲಿ ದಕ್ಷಿಣ ಆಫ್ರಿಕಾದ ಸ್ಥಾನ, ರಾಜಧಾನಿ, ಪ್ರಧಾನ ನಗರಗಳು, ಚಾರಿತ್ರಿಕ ಪ್ರಧಾನ ಕೇಂದ್ರಗಳು ಇತ್ಯಾದಿಗಳನ್ನು ಕಂಡುಹಿಡಿಯಿರಿ.**

### ದಕ್ಷಿಣ ಆಫ್ರಿಕಾ ವಸಾಹತೀಕರಣಗೊಳ್ಳುತ್ತಿದೆ

ಸಾನ್, ಖೋಸಾ, ಮುಂತಾದ ಜನವಿಭಾಗದವರು ದಕ್ಷಿಣ ಆಫ್ರಿಕಾದ ಮೂಲನಿವಾಸಿಗಳಾಗಿದ್ದಾರೆ. ಆಫ್ರಿಕಾದ ಇತರ ಪ್ರದೇಶಗಳಿಂದ ತಲುಪಿದ ಗೋತ್ರ ವಿಭಾಗದವರು ಮೊತ್ತ ಮೊದಲು ಇಲ್ಲಿಗೆ ವಲಸೆ ಬಂದವರಾಗಿದ್ದಾರೆ. ಹದಿನೈದನೇ ಶತಮಾನದ ಅಂತ್ಯದಲ್ಲಿ ಯುರೋಪಿಯನ್ನರು ದಕ್ಷಿಣ ಆಫ್ರಿಕಾಕ್ಕೆ ತಲುಪಲಾರಂಭಿಸಿದರು. ಹದಿನೇಳನೇ ಶತಮಾನವಾಗುವುದರೊಂದಿಗೆ ದಕ್ಷಿಣ ಆಫ್ರಿಕಾದಲ್ಲಿ ಡಚ್ಚರ ಆಧಿಪತ್ಯವು ಪ್ರಬಲವಾಯಿತು ಮತ್ತು ಕೇಪ್ ಟೌನ್ ಎಂಬ ಪ್ರದೇಶವು ಅವರ ಮುಖ್ಯ ವಸಾಹತಾಗಿ ಬದಲಾಯಿತು.

**ವಸಾಹತೀಕರಣ**

ಒಂದು ದೇಶವು ಮತ್ತೊಂದು ಪ್ರದೇಶದ ಹಾಗು ಅಲ್ಲಿಯ ಜನರ ಮೇಲೆ ಅಧಿಕಾರ ಸ್ಥಾಪಿಸಿ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ನಿಯಂತ್ರಣ ತರುವುದನ್ನು ವಸಾಹತೀಕರಣ ಎಂದು ಕರೆಯುತ್ತಾರೆ.

ಹದಿನೆಂಟನೇ ಶತಮಾನವಾಗುವಾಗ ಬ್ರಿಟಿಷರು ದಕ್ಷಿಣ ಆಫ್ರಿಕಾಕ್ಕೆ ತಲುಪಿದರು. ಪ್ರಪಂಚದ ವಿವಿಧ ಭಾಗಗಳಲ್ಲಿ ಹೆಚ್ಚಿನ ಭೂಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳುವುದು, ಆಫ್ರಿಕಾ ಭೂಖಂಡದ ಅತಿ ಹೆಚ್ಚಿನ ಪ್ರಮಾಣದ ಸಂಪತ್ತನ್ನು ಕೈವಶಮಾಡುವುದು, ಇತರ ಯುರೋಪಿಯನ್ ರಾಷ್ಟ್ರಗಳ ಮೇಲೆ ಪ್ರಾಬಲ್ಯ ಸ್ಥಾಪಿಸುವುದು ಮತ್ತು ಏಷ್ಯಾ ಖಂಡಕ್ಕಿರುವ ಯಾತ್ರೆಗೆ ಕೇಂದ್ರವನ್ನಾಗಿ ಮಾಡುವುದು ಮುಂತಾದ ಉದ್ದೇಶಗಳಿಂದ ದಕ್ಷಿಣ ಆಫ್ರಿಕಾವನ್ನು ವಸಾಹತು ಮಾಡಲು ಬ್ರಿಟನ್ ಪ್ರಯತ್ನಿಸಿತು.

## ಗ್ರೇಟ್ ಟ್ರೆಕ್ (Great Trek)

**ಬೂವರುಗಳು** (Boers)

ಬೂವರುಗಳು ಯೂರೋಪಿನಿಂದ ಮೊದಲು ದಕ್ಷಿಣ ಆಫ್ರಿಕಾಕ್ಕೆ ತಲುಪಿದ ನೆದರ್ಲ್ಯಾಂಡ್ (ಡಚ್ಚ್), ಫ್ರಾನ್ಸ್, ಜರ್ಮನಿ, ಮೊದಲಾದ ರಾಷ್ಟ್ರಗಳ ಪೂರ್ವಜರಾಗಿದ್ದಾರೆ. ಕೃಷಿಕ ಎಂಬುದು ಬೂವರ್ ಎಂಬ ಡಚ್ಚ್ ಪದದ ಅರ್ಥವಾಗಿದೆ. ಮುಂದೆ ಈ ಜನವಿಭಾಗಗಳು ಆಫ್ರಿಕಾನರ್ (Afrikaner) ಎಂದೂ, ಇವರ ಭಾಷೆ ಮತ್ತು ಸಂಸ್ಕೃತಿಯು ಆಫ್ರಿಕಾನ್ಸ್ (Afrikaans) ಎಂದೂ ಹೆಸರಿಸಲ್ಪಟ್ಟಿತು.

ಬ್ರಿಟನ್ ಜಾರಿಗೊಳಿಸಿದ ವಸಾಹತೀಕರಣ ಯೋಜನೆಗಳು ಬೂವರುಗಳ ಮೇಲೆ ಹೇಗೆ ಬಾಧಿಸಿರಬಹುದೆಂದು ನೋಡೋಣ.

ಡಚ್ಚರಿಂದ ಕೇಪ್ ವಸಾಹತನ್ನು ವಶಪಡಿಸಿಕೊಂಡ ಬ್ರಿಟನ್ ಆ ಪ್ರದೇಶದಲ್ಲಿ ಕೆಲವು ನೀತಿಗಳನ್ನು ಜಾರಿಗೊಳಿಸಿತು.

ಡಚ್ಚ್ ಭಾಷೆಯನ್ನು ನಿಷೇಧಿಸಲಾಯಿತು. ಇಂಗ್ಲೀಷನ್ನು ಕೇಪ್ ವಸಾಹತಿನ ಏಕೈಕ ಭಾಷೆಯನ್ನಾಗಿ ಮಾಡಲಾಯಿತು.

ಹತ್ತೊಂಬತ್ತನೇ ಶತಮಾನದ ಮಧ್ಯಭಾಗಕ್ಕಾಗುವಾಗ ಬ್ರಿಟನ್ ತನ್ನ ವಸಾಹತುಗಳಲ್ಲಿ ಗುಲಾಮಗಿರಿಯನ್ನು ನಿಷೇಧಿಸಿತು. ಇದು ಗುಲಾಮರನ್ನು ಬಳಸಿಕೊಂಡು ಕೃಷಿ ಮಾಡುತಿದ್ದ ಬೂವರುಗಳನ್ನು ಪ್ರತಿಕೂಲವಾಗಿ ಬಾಧಿಸಿತು.

ಬ್ರಿಟನ್ ಜಾರಿಗೊಳಿಸಿದ ಇಂತಹ ನೀತಿಗಳಿಂದ ತಪ್ಪಿಸಿಕೊಳ್ಳಲು ಕೇಪ್ ವಸಾಹತಿನಿಂದ ದಕ್ಷಿಣ ಆಫ್ರಿಕಾದ ಒಳಪ್ರದೇಶಕ್ಕೆ ಬೂವರುಗಳ ಪಲಾಯನವನ್ನು ಗ್ರೇಟ್ ಟ್ರೆಕ್ ಎಂದು ಕರೆಯಲಾಗುತ್ತದೆ.



*ಚಿತ್ರ 11.4*
*ಗ್ರೇಟ್ ಟ್ರೆಕ್*

ಗ್ರೇಟ್ ಟ್ರೆಕ್‌ನ ನಂತರ, ಬೂವರುಗಳು ಟ್ರಾನ್ಸ್‌ವಾಲ್, ಆರೆಂಜ್ ಫ್ರೀ ಸ್ಟೇಟ್ ಮತ್ತು ನೆಟ್ಟಾಲ್ ಎಂಬೆಡೆಗಳಲ್ಲಿ ಗಣರಾಜ್ಯಗಳನ್ನು ಸ್ಥಾಪಿಸಿದರು.

## ಬೂವರ್ ಯುದ್ಧಗಳು

ದಕ್ಷಿಣ ಆಫ್ರಿಕಾದ ಚರಿತ್ರೆಯನ್ನು ಬದಲಾಯಿಸಿದ ಬೂವರ್ ಯುದ್ಧಗಳಿಗೆ ಕಾರಣವಾದ ಸನ್ನಿವೇಶಗಳು ಯಾವುವೆಂದು ನೋಡೋಣ.

ಹತ್ತೊಂಬತ್ತನೇ ಶತಮಾನದ ಅಂತ್ಯದೊಂದಿಗೆ ಬೂವರ್ ಗಣರಾಜ್ಯದ ಅಧೀನ ಪ್ರದೇಶಗಳಲ್ಲಿ ಚಿನ್ನ ಮತ್ತು ವಜ್ರದ ಗಣಿಗಳನ್ನು ಕಂಡುಹಿಡಿಯಲಾಯಿತು. ಇದರೊಂದಿಗೆ ದಕ್ಷಿಣ ಆಫ್ರಿಕಾವು ಜಗತ್ತಿನ ಅಗ್ರಗಣ್ಯ ಚಿನ್ನ ಮತ್ತು ವಜ್ರ ಉತ್ಪಾದಕ ರಾಷ್ಟ್ರವಾಗಿ ಬದಲಾಯಿತು. ಬೂವರ್ ಗಣರಾಜ್ಯಗಳನ್ನು ಬ್ರಿಟಿಷ್ ವಸಾಹತುಗಳೊಂದಿಗೆ ಸೇರಿಸಲು ಬ್ರಿಟನ್ ಪ್ರಯತ್ನಿಸಿದಾಗ ಬೂವರ್ ಯುದ್ಧಗಳು ಪ್ರಾರಂಭವಾದವು.

### ಒಂದನೇ ಬೂವರ್ ಯುದ್ಧ

ಬ್ರಿಟಿಷ್ ಆಳ್ವಿಕೆಯನ್ನು ಹೆಚ್ಚಿನ ಪ್ರದೇಶಗಳಿಗೆ ವಿಸ್ತರಿಸುವ ಉದ್ದೇಶದಿಂದ ಬ್ರಿಟನ್ ಬೂವರುಗಳಿಂದ ಟ್ರಾನ್ಸ್ ವಾಲನ್ನು ವಶಪಡಿಸಿಕೊಂಡಿತು. ಇದರೊಂದಿಗೆ ಒಂದನೇ ಬೂವರ್ ಯುದ್ಧ (1880-81)ಆರಂಭವಾಯಿತು. ಈ ಯುದ್ಧದಲ್ಲಿ ಬೂವರುಗಳು ವಿಜಯಿಗಳಾದರು ಮತ್ತು ಟ್ರಾನ್ಸ್ ವಾಲ್ ಹಾಗು ನೆರೆಯ ಪ್ರದೇಶಗಳನ್ನು ಒಟ್ಟುಗೂಡಿಸಿ ದಕ್ಷಿಣ ಆಫ್ರಿಕಾ ಗಣರಾಜ್ಯವನ್ನು ರೂಪಿಸಲಾಯಿತು.

### ಎರಡನೇ ಬೂವರ್ ಯುದ್ಧ

ಚಿನ್ನದ ಗಣಿಗಳ ಸಂಪತ್ತು ಮತ್ತು ಅವುಗಳ ನಿಯಂತ್ರಣದ ಮೇಲಿನ ವಿವಾದಗಳು ಎರಡನೇ ಬೂವರ್ ಯುದ್ಧಕ್ಕೆ ಕಾರಣವಾಯಿತು. ಬೂವರ್ ಆಡಳಿತಾಧಿಕಾರಿಗಳು ಗಣಿಗಳ ಮೇಲೆ ತೆರಿಗೆ ವಿಧಿಸಿದರು. ಗಣಿಗಳ ಬ್ರಿಟಿಷ್ ಕಾರ್ಮಿಕರಿಗೆ ಮತದಾನದ ಹಕ್ಕುಗಳಿಗಾಗಿ ಬ್ರಿಟನ್ ಒತ್ತಾಯಿಸಿತು. ಗಣರಾಜ್ಯದ ಆಡಳಿತಾಧಿಕಾರಿಗಳು ಈ ಬೇಡಿಕೆಯನ್ನು ತಿರಸ್ಕರಿಸುವುದರೊಂದಿಗೆ ದಕ್ಷಿಣ ಆಫ್ರಿಕಾದ ಅತ್ಯಂತ ವಿನಾಶಕಾರಿ ಸಶಸ್ತ್ರ ಸಂಘರ್ಷವಾದ ಎರಡನೇ ಬೂವರ್ ಯುದ್ಧ(1899-1902)ಪ್ರಾರಂಭವಾಯಿತು

ಈ ಯುದ್ಧದಲ್ಲಿ ಬ್ರಿಟಿಷ್ ಸೈನ್ಯವು ಬೂವರ್ ಗಣರಾಜ್ಯವನ್ನು ಸೋಲಿಸಿತು.

ವೆರಿನಿಗಿಂಗ್ ಒಪ್ಪಂದದ ಪ್ರಕಾರ ಬೂವರುಗಳು ಬ್ರಿಟನಿನ ಸಾರ್ವಭೌಮತ್ವವನ್ನು ಅಂಗೀಕರಿಸಿದರು. ಬ್ರಿಟನಿನ ನಿಯಂತ್ರಣದಲ್ಲಿರುವ ಸ್ವಾಯತ್ತ ಪ್ರದೇಶ ಎಂಬ ನೆಲೆಯಲ್ಲಿ ಯೂನಿಯನ್ ಓಫ್ ಸೌತ್ ಆಫ್ರಿಕಾ ರೂಪುಗೊಂಡಿತು. ಯೂನಿಯನ್ ಓಫ್ ಸೌತ್ ಆಫ್ರಿಕಾದಲ್ಲಿ ಜಾರಿಗೆ ತಂದ ಸಂವಿಧಾನದ ಪ್ರಕಾರ ಬ್ರಿಟಿಷ್ ಮತ್ತು ಆಫ್ರಿಕಾನರ್‌ರಿಗೆ ಉನ್ನತ ಪರಿಗಣನೆ ಲಭಿಸಿತು. ಕಪ್ಪು ವರ್ಗದವರ ಮೂಲಭೂತ ಹಕ್ಕುಗಳು ನಿಷೇಧಿಸಲ್ಪಟ್ಟಿತು.



*ಚಿತ್ರ 11.5*
*ಎರಡನೇ ಬೂವರ್ ಯುದ್ಧ*

**ದಕ್ಷಿಣ ಆಫ್ರಿಕಾದ ಚರಿತ್ರೆಯಲ್ಲಿ ಬೂವರ್ ಯುದ್ಧಗಳಿಗಿರುವ ಪ್ರಾಮುಖ್ಯದ ಕುರಿತು ಆಶಯ ಚಿತ್ರ ತಯಾರಿಸಿರಿ.**

## ದಕ್ಷಿಣ ಆಫ್ರಿಕಾದಲ್ಲಿ ಮಹಾತ್ಮಾಗಾಂಧಿ




*ಚಿತ್ರ 11.6*

...ಆ ವೇಳೆಗೆ ಮತ್ತೊಬ್ಬ ಅಧಿಕಾರಿ ನನ್ನ ಬಳಿ ಬಂದು ಹೀಗೆ ಹೇಳಿದನು: "ಹೊರಡು. ಕೊನೆಯಲ್ಲಿರುವ ಗಾಡಿಗೆ ನೀನು ಹೋಗಬೇಕು." ನಾನು ಹೀಗೆ ಹೇಳಿದೆ: "ಆದರೆ ನಾನು ಫಸ್ಟ್ ಕ್ಲಾಸ್ ಟಿಕೆಟ್ ತೆಗೆದುಕೊಂಡಿದ್ದೇನೆ." ಆತ "ಚಿಂತೆಯಿಲ್ಲ, ನನ್ನ ಮಾತನ್ನು ಕೇಳು. ನೀನು ಕೊನೆಯ ಗಾಡಿಗೆ ಹೋಗಲೇಬೇಕು." ಎಂದನು. "ಇಲ್ಲಿ ಕೇಳಿ. ನಾನು ಈ ಗಾಡಿಯಲ್ಲಿ ಕುಳಿತು ಪ್ರಯಾಣ ಮಾಡಲು ಡರ್ಬಾನಿನಲ್ಲಿ ಅವಕಾಶ ದೊರೆತಿದೆ. ನಾನು ಇದರಲ್ಲಿಯೇ ಪ್ರಯಾಣ ಮಾಡುವುದು ನಿಶ್ಚಯ." ಅಧಿಕಾರಿಯು "ಕೂಡದು. ಈ ಗಾಡಿಯಿಂದ ನೀನು ಇಳಿಯಲೇಬೇಕು. ಇಲ್ಲದಿದ್ದರೆ ಪೊಲೀಸ್ ಕಾನ್‌ಸ್ಟೇಬಲ್‌ನನ್ನು ಕರೆಯುತ್ತೇನೆ. ನಾನೇ ಕತ್ತು ಹಿಡಿದು ದಬ್ಬುತ್ತೇನೆ." ಎಂದನು. "ಸರಿ. ನೀನು ದಬ್ಬಬಹುದು. ನಾನಾಗಿಯೇ ಗಾಡಿ ಬಿಟ್ಟು ಇಳಿಯುವುದಿಲ್ಲ." ಕಾನ್‌ಸ್ಟೇಬಲ್ ಬಂದನು. ಅವನು ನನ್ನ ಕೈ ಹಿಡಿದು ನನ್ನನ್ನು ಹೊರಗೆ ತಳ್ಳಿದನು. ನನ್ನ ಸಾಮಾನುಗಳನ್ನೂ ಹೊರಗೆ ಹಾಕಿದನು... ಸಾಯಂಕಾಲದ ರೈಲು ಬಂದಿತು. ಅದರಲ್ಲಿ ನನಗಾಗಿ ಮೀಸಲಿರಿಸಿದ ಒಂದು ಬರ್ತ್ ಇತ್ತು. ನನಗೆ ಡರ್ಬಾನಿನಲ್ಲಿ ನಿರಾಕರಿಸಿದ ಹಾಸಿಗೆ ಟಿಕೆಟನ್ನು ಮೆರಿಟ್ಸ್‌ಬರ್ಗ್‌ನಲ್ಲಿ ಕೊಂಡುಕೊಂಡೆನು.

ಎಂ. ಕೆ. ಗಾಂಧಿ - 'ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ'

ದಕ್ಷಿಣ ಆಫ್ರಿಕಾದಲ್ಲಿ ಅಸ್ತಿತ್ವದಲ್ಲಿದ್ದ ಸಾಮಾಜಿಕ ಸ್ಥಿತಿಯನ್ನು ಗಾಂಧೀಜಿಯವರು ತಮ್ಮ ಆತ್ಮಚರಿತ್ರೆಯಲ್ಲಿ ಹೀಗೆ ವಿವರಿಸಿದ್ದಾರೆ.

1893-ರಲ್ಲಿ ಮಹಾತ್ಮಾ ಗಾಂಧೀಜಿಯವರು ದಕ್ಷಿಣ ಆಫ್ರಿಕಾಕ್ಕೆ ತಲುಪಿದರು. ಅದು ಅಘೋಷಿತ ವರ್ಣಭೇದದ ಕಾಲವಾಗಿತ್ತು. ಗಾಂಧೀಜಿಯವರು ದಕ್ಷಿಣ ಆಫ್ರಿಕಾದಲ್ಲಿ ಆರಂಭಿಸಿದ 'ಇಂಡಿಯನ್ ಒಪಿನಿಯನ್' ಎಂಬ ಪತ್ರಿಕೆಯಲ್ಲಿ ವಸಾಹತುಶಾಹಿ ಆಡಳಿತವು ಆಫ್ರಿಕನ್ನರಲ್ಲಿ ತೋರಿಸುವ ತಾರತಮ್ಯದ ಕುರಿತು ಈ ರೀತಿ ಬರೆದರು; 'ಆಫ್ರಿಕನ್ನರು ಮಾತ್ರವೇ ಭೂಮಿಯ ಮೂಲ ನಿವಾಸಿಗಳು. ಬಿಳಿಯರು ಆ ಭೂಮಿಯನ್ನು ಬಲಪ್ರಯೋಗದ ಮೂಲಕ ವಶಪಡಿಸಿಕೊಂಡು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡರು'.

ಎರಡನೇ ಬೂವರ್ ಯುದ್ಧದ ಸಮಯದಲ್ಲಿ ಯುದ್ಧ ಸಂತ್ರಸ್ತರಿಗೆ ಸಹಾಯ ಮಾಡಲು ಸ್ವಯಂ ಸೇವಕರಾಗಿ ಅವರು ಭಾಗವಹಿಸಿದರು. ಇಲ್ಲಿಯೇ ಗಾಂಧೀಜಿಯವರ ಸತ್ಯಾಗ್ರಹ, ಅಸಹಕಾರ, ನಿಯಮ ಉಲ್ಲಂಘನೆ ಮೊದಲಾದ ಹೋರಾಟ ವಿಧಾನಗಳನ್ನು ಪರೀಕ್ಷಿಸಿದರು. ದಕ್ಷಿಣ ಆಫ್ರಿಕಾವನ್ನು 'ಗಾಂಧೀಜಿಯ ರಾಜಕೀಯ ಪ್ರಯೋಗಾಲಯ' ಎಂದು ಕರೆಯಲಾಗುತ್ತದೆ.

**ದಕ್ಷಿಣ ಆಫ್ರಿಕಾದಲ್ಲಿ ಅಸ್ತಿತ್ವದಲ್ಲಿದ್ದ ತಾರತಮ್ಯದ ಕುರಿತಾದ ಗಾಂಧೀಜಿಯ ಅಭಿಪ್ರಾಯಗಳು ಮತ್ತು ಅವರ ಹೋರಾಟ ವಿಧಾನಗಳನ್ನು ಸೇರಿಸಿ ಒಂದು ವಿಶ್ಲೇಷಣಾತ್ಮಕ ಟಿಪ್ಪಣಿ ತಯಾರಿಸಿರಿ.**

## ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ರೂಪೀಕರಣ

ದಕ್ಷಿಣ ಆಫ್ರಿಕಾವು ಬ್ರಿಟನ್ ನಿಯಂತ್ರಣದ ಸ್ವ ಆಡಳಿತ ಪ್ರದೇಶವಾದ ನಂತರ ನಡೆದ ಮೊದಲ ಚುನಾವಣೆಯಲ್ಲಿ ಬಿಳಿಯರ ನೇತೃತ್ವದ ದಕ್ಷಿಣ ಆಫ್ರಿಕನ್ ಪಕ್ಷವು ಅಧಿಕಾರಕ್ಕೆ ಬಂತು. ವಸತಿ, ಆಡಳಿತ, ಉದ್ಯಮದಂತಹ ಕ್ಷೇತ್ರಗಳಲ್ಲಿ ಜನರನ್ನು ಬಾಧಿಸುವ ಕಾನೂನುಗಳನ್ನು ತಂದರು. ಕರಿಯರು ಮತ್ತು ಬಿಳಿಯರು ಎಂಬ ಜನಾಂಗೀಯ ವಿಭಜನೆ ಪ್ರಬಲವಾಯಿತು. ಜನರಿಗೆ ಸಂಚಾರ ಸ್ವಾತಂತ್ರ್ಯ ಮತ್ತು ಶಿಕ್ಷಣಕ್ಕಿರುವ ಹಕ್ಕುಗಳನ್ನು ನಿಷೇಧಿಸಲಾಯಿತು. ಈ ನೀತಿಯನ್ನು ವಿರೋಧಿಸಿ ಆಫ್ರಿಕನ್ ಜನರ ಹಕ್ಕುಗಳನ್ನು ಸಂರಕ್ಷಿಸಲು ರೂಪೀಕರಿಸಿದ ಸೌತ್ ಆಫ್ರಿಕನ್ ನೇಟಿವ್ ನ್ಯಾಷನಲ್ ಕಾಂಗ್ರೆಸ್ ಎಂಬ ಸಂಘಟನೆಯನ್ನು ಅನಂತರದ ಕಾಲದಲ್ಲಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಎಂದು ಕರೆಯಲಾಯಿತು. ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ನ ನಾಯಕರು ತಾರತಮ್ಯವಿಲ್ಲದ ದಕ್ಷಿಣ ಆಫ್ರಿಕಾವನ್ನು ನಿರ್ಮಿಸಲು ಅನೇಕ ಹೋರಾಟದ ವಿಧಾನಗಳನ್ನು ಅಳವಡಿಸಿದರು.

ದಕ್ಷಿಣ ಆಫ್ರಿಕಾದಲ್ಲಿ ಅಧಿಕಾರಕ್ಕೆ ಬಂದ ವಿವಿಧ ಸರಕಾರಗಳು ಜಾರಿಗೊಳಿಸಿದ ದಬ್ಬಾಳಿಕೆ ಹಾಗು ಅವುಗಳ ಪರಿಣಾಮಗಳು ಯಾವುವು ಎಂದು ನೋಡೋಣ.

| ಕಾಯಿದೆಗಳು | ಪರಿಣಾಮಗಳು |
|---|---|
| ಗಣಿ ಕೆಲಸ ಕಾಯಿದೆ<br>(The Mines and Works Regulations Act) | ನೈಪುಣ್ಯ ಅಗತ್ಯವಿರುವ ಉದ್ಯೋಗಗಳು ಬಿಳಿಯರಿಗೆ ಮಾತ್ರ ಮೀಸಲಾಗಿತ್ತು. |
| ಪ್ರಾದೇಶಿಕ ಭೂ ಕಾಯಿದೆ<br>(Natives Land Act) | 'ಮೀಸಲು' ಎಂಬ ಹೆಸರಿನಲ್ಲಿ ಮೀಸಲಿಟ್ಟ ವಿಶೇಷ ಪ್ರದೇಶಗಳನ್ನು ಹೊರತು ಪಡಿಸಿ ಬೇರೆ ಪ್ರದೇಶಗಳಲ್ಲಿ ಭೂಮಿಯನ್ನು ಖರೀದಿಸಲು ಕರಿಯರಿಗೆ ಹಕ್ಕಿಲ್ಲ |
| ಪ್ರಾದೇಶಿಕ ನಗರ ಪ್ರದೇಶ ಕಾಯಿದೆ<br>(The Natives [Urban Areas] Act) | ಕಪ್ಪು ವರ್ಗದವರಿಗೆ ನಗರಗಳಿಗೆ ಪ್ರವೇಶಿಸಲು ನಿಯಂತ್ರಣವನ್ನು ಏರ್ಪಡಿಸಲಾಯಿತು. |
| ಮತದಾರರ ಪ್ರತ್ಯೇಕ ಪ್ರಾತಿನಿಧ್ಯ ಕಾಯಿದೆ<br>(Separate Representation of Voters Act) | ಕಪ್ಪು ವರ್ಗದವರನ್ನು ಸಾರ್ವಜನಿಕ ಮತದಾರರ ಪಟ್ಟಿಯಿಂದ ತೆಗೆದು ಹಾಕಲಾಯಿತು. |

## ನೆಲ್ಸನ್ ಮಂಡೇಲ

ನೆಲ್ಸನ್ ಮಂಡೇಲರು 1918 ಜುಲೈ 18-ರಂದು ದಕ್ಷಿಣ ಆಫ್ರಿಕಾದ ಟ್ರಾನ್ಸ್ಕಿ ಪ್ರಾಂತ್ಯದ ತೆಂಬು ರಾಜವಂಶದಲ್ಲಿ ಜನಿಸಿದರು. ಅವರ ಹೆಸರು ರೋಲಿಹ್ಲಾಹ್ಲ ಎಂದಾಗಿತ್ತು. ಅವರ ತಂದೆ ಮಾಡಿಬಾ ವಂಶದ ಮುಖ್ಯಸ್ಥನಾಗಿದ್ದ ಗಾಡ್ ಲ ಹೆಂಟ್ರಿ ಮಂಡೇಲ ಮತ್ತು ತಾಯಿ ನೊಸ್ಕೆನಿ ಫ್ಯಾನಿ . ಅವರು ಪ್ರಾಥಮಿಕ ವಿದ್ಯಾಭ್ಯಾಸದ ನಂತರ ದಕ್ಷಿಣ ಆಫ್ರಿಕದ ಗೋತ್ರ ಪರಂಪರೆ, ಸಂಸ್ಕೃತಿ ಎಂಬಿವುಗಳಲ್ಲಿ ಅಧ್ಯಯನ ಮಾಡಿ ವಕೀಲ ಪದವಿಯನ್ನು ಪಡೆದರು.




ಚಿತ್ರ 11.7

*"ನನ್ನ ಕುಟುಂಬದಲ್ಲಿ ಇದುವರೆಗೆ ಯಾರೂ ಶಾಲೆಗೆ ಹೋಗಲಿಲ್ಲ........ ಶಾಲೆಯ ಮೊದಲ ದಿವಸ ನನ್ನ ಟೀಚರ್ ಮಿಸ್. ಎಂಡಿಂಗೇನ್ (Miss Mdingane) ನಮಗೆ ಒಬ್ಬೊಬ್ಬರಿಗೂ ಒಂದೊಂದು ಇಂಗ್ಲಿಷ್ ಹೆಸರು ನೀಡಿದರು. ಆ ಕಾಲದಲ್ಲಿ ಆಫ್ರಿಕನ್ನರ ನಡುವೆ ಇದು ಸಾಮಾನ್ಯವಾಗಿತ್ತು. ನಮ್ಮ ಶಿಕ್ಷಣದಲ್ಲಿದ್ದ ಬ್ರಿಟಿಷರ ಪಕ್ಷಪಾತ ಧೋರಣೆಯು ಇದಕ್ಕೆ ಕಾರಣವಾಗಿತ್ತು. ಆವತ್ತು ಮಿಸ್. ಎಂಡಿಂಗೇನ್ ನನ್ನಲ್ಲಿ ಹೇಳಿದರು, ನನ್ನ ಹೊಸ ಹೆಸರು ನೆಲ್ಸನ್ ಎಂದು. ಯಾಕಾಗಿ ಈ ಪ್ರತ್ಯೇಕ ಹೆಸರು, ನನಗೆ ಗೊತ್ತಿಲ್ಲ".*

*- ನೆಲ್ಸನ್ ಮಂಡೇಲ, ಲಾಂಗ್ ವಾಕ್ ಟು ಫ್ರೀಡಂ, 1994*

"ದಕ್ಷಿಣ ಆಫ್ರಿಕಾದ ಒಂದು ಆಫ್ರಿಕ್ಕಾನ್ ಮಗು ಆಫ್ರಿಕ್ಕಾನರಿಗೆ ಮಾತ್ರ ಸೀಮಿತವಾಗಿರುವ ಆಸ್ಪತ್ರೆಯಲ್ಲಿ ಜನಿಸುತ್ತದೆ........ ಅವನು ಬೆಳೆದಾಗ ಆಫ್ರಿಕ್ಕಾನರ ಕೆಲಸಗಳನ್ನು ಮಾತ್ರ ಮಾಡಲು, ಆಫ್ರಿಕ್ಕಾನ್ ಟೌನ್‌ಶಿಪ್‌ನಲ್ಲಿ ಮಾತ್ರ ಒಂದು ಮನೆ ಬಾಡಿಗೆಗೆ ಪಡೆಯಲು ಮತ್ತು ಆಫ್ರಿಕ್ಕಾನರ ರೈಲಿನಲ್ಲಿ ಮಾತ್ರ ಪ್ರಯಾಣಿಸಲು ನಿರ್ಬಂಧಿಸಲಾಗುತ್ತದೆ. ರಾತ್ರಿ ಹಗಲು ವ್ಯತ್ಯಾಸವಿಲ್ಲದೆ ಯಾವುದೇ ಸಮಯದಲ್ಲಿ ತಡೆದು ನಿಲ್ಲಿಸಿ 'ಪಾಸ್' ಹಾಜರು ಪಡಿಸಲು ಆದೇಶಿಸಲಾಗುತ್ತದೆ. ಅದು ಇಲ್ಲದಿದ್ದರೆ ಬಂಧಿಸಿ ಜೈಲಿಗೆ ಹಾಕಲಾಗುತ್ತದೆ. ಅವನ ಬೆಳವಣಿಗೆಯನ್ನು ದುರ್ಬಲಗೊಳಿಸುವ, ಅವನ ಪ್ರತಿಭೆಯನ್ನು ನಂದಿಸುವ ಮತ್ತು ಅವನ ಜೀವನವನ್ನು ಕುಂಠಿತಗೊಳಿಸುವ ಕ್ರೂರವಾದ ಜನಾಂಗೀಯ ನಿಯಮಗಳು ಹಾಗು ನಿಬಂಧನೆಗಳು ಅವನ ಜೀವನವನ್ನು ಸುತ್ತುವರಿದಿದೆ".

-ನೆಲ್ಸನ್ ಮಂಡೇಲ,
ಲಾಂಗ್ ವಾಕ್ ಟು ಫ್ರೀಡಂ, 1994

ದಕ್ಷಿಣ ಆಫ್ರಿಕಾದ ಜನತೆಯು ಎದುರಿಸಬೇಕಾಗಿ ಬಂದ ಜೀವನ ಪರಿಸ್ಥಿತಿಗಳ ಬಗ್ಗೆ ನೆಲ್ಸನ್ ಮಂಡೇಲರು ನೀಡಿದ ವಿವರಣೆಯನ್ನು ನೀವು ಓದಿದಿರಲ್ಲವೇ?

ಶಿಕ್ಷಕರು ನೆಲ್ಸನ್ ಮಂಡೇಲರಿಗೆ ಅವರ ಹೆತ್ತವರಿಟ್ಟ ಹೆಸರಿನ ಬದಲು ಬೇರೆ ಹೊಸ ಹೆಸರನ್ನು ನೀಡಲು ಕಾರಣವೇನಾಗಿರಬಹುದು?

ದಕ್ಷಿಣ ಆಫ್ರಿಕಾದ ಜನರು ಯಾವೆಲ್ಲ ದಬ್ಬಾಳಿಕೆಗಳನ್ನು ಎದುರಿಸಿದರು?

ವಸಾಹತೀಕರಣ ಮತ್ತು ವರ್ಣಭೇದದಿಂದ ಸ್ಥಳೀಯ ಜನತೆಯನ್ನು ವಿಮೋಚಿಸಬೇಕಾದ ಅಗತ್ಯವನ್ನು ತಿಳಿದುಕೊಂಡ ನೆಲ್ಸನ್ ಮಂಡೇಲ ತನ್ನ ದೇಶ ಹಾಗೂ ದೇಶದ ಜನರ ವಿಮೋಚನೆಗಾಗಿ ಅವಿರತವಾಗಿ ಪ್ರಯತ್ನಿಸಿದರು.



**ದಕ್ಷಿಣ ಆಫ್ರಿಕಾದಲ್ಲಿ ಜಾರಿಗೊಳಿಸಲಾದ ಕಾನೂನುಗಳು ಹಾಗು ನೆಲ್ಸನ್ ಮಂಡೇಲರ ಪರಾಮರ್ಶೆಗಳ ಆಧಾರದಲ್ಲಿ, ಕಪ್ಪು ವರ್ಗದವರು ಎದುರಿಸಬೇಕಾಗಿ ಬಂದ ಜೀವನ ಪರಿಸ್ಥಿತಿಗಳ ಬಗ್ಗೆ ಚರ್ಚೆ ಆಯೋಜಿಸಿರಿ.**

ನೆಲ್ಸನ್ ಮಂಡೇಲರು 1942-ರಲ್ಲಿ ಯುವಜನರನ್ನು ಸೇರಿಸಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಯೂತ್ ಲೀಗ್ ಎಂಬ ಸಂಘಟನೆಯನ್ನು ರೂಪೀಕರಿಸಿದರು ಮತ್ತು ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನಲ್ಲಿ ಸದಸ್ಯತ್ವವನ್ನು ಪಡೆದುಕೊಂಡರು. .

ವಾಲ್ಟರ್ ಸಿಸಿಲು, ಒಲಿವರ್ ತಾಂಬೊ, ಡೆಸ್ಮಂಡ್ ಟುಟ್ಟು ಮೊದಲಾದವರು ಮಂಡೇಲರೊಂದಿಗೆ ಕೆಲಸ ಮಾಡಿದ ಇತರ ಪ್ರಮುಖ ನಾಯಕರಾಗಿದ್ದಾರೆ.



*ಚಿತ್ರ 11.8*
*ವಾಲ್ಟರ್ ಸಿಸಿಲು*



*ಚಿತ್ರ 11.9*
*ಒಲಿವರ್ ತಾಂಬೊ*



*ಚಿತ್ರ 11.10*
*ಡೆಸ್ಮಂಡ್ ಟುಟ್ಟು*

## ವರ್ಣಭೇದ (Apartheid)

ಕಪ್ಪು ವರ್ಗದ ಜನರ ವಿರುದ್ಧ ಹೇರಿದ ಜನಾಂಗೀಯ ಮತ್ತು ಆರ್ಥಿಕ ತಾರತಮ್ಯದ ಸಾಮಾಜಿಕ ವ್ಯವಸ್ಥೆಯು ವರ್ಣಭೇದವಾಗಿದೆ. ದಕ್ಷಿಣ ಆಫ್ರಿಕಾದ ಇತರ ಜನ ವಿಭಾಗಗಳಿಗಿಂತ ಬಿಳಿಯರಿಗೆ ಹೆಚ್ಚಿನ ಪರಿಗಣನೆಯನ್ನು ಈ ಮೂಲಕ ಖಚಿತಪಡಿಸಲಾಯಿತು.

1948-ರಲ್ಲಿ ಅಧಿಕಾರಕ್ಕೆ ಬಂದ ನೇಶನಲ್ ಪಾರ್ಟಿಯ ವಿಭಜನೆ ಮತ್ತು ತಾರತಮ್ಯವನ್ನು ಕಾನೂನಿನ ಮೂಲಕ ಜಾರಿಗೊಳಿಸಿ ವರ್ಣಭೇದವನ್ನು ಕಾನೂನು ಬದ್ಧಗೊಳಿಸಿತು. ವರ್ಣಭೇದವನ್ನು ಜಾರಿಗೊಳಿಸುವುದಕ್ಕಾಗಿ ರಚಿಸಿದ ಕಾನೂನುಗಳಲ್ಲಿ ಪ್ರಮುಖವಾದವುಗಳನ್ನು ಕೆಳಗೆ ನೀಡಲಾಗಿದೆ.

| | |
|---|---|
| **ಪಾಸ್ ಕಾಯಿದೆ**<br>**(Native Pass Law Act)** | ಕಪ್ಪುವರ್ಗದವರಿಗೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಂಚರಿಸಲು ಪ್ರತ್ಯೇಕ ಅನುಮತಿ ಪತ್ರಗಳು (Passes) ಬೇಕಾಗಿತ್ತು. |
| **ಗುಂಪು ಪ್ರದೇಶ ಕಾಯಿದೆ**<br>**(Group Areas and Segregation Act)** | ಜನಾಂಗದ ಆಧಾರದ ಮೇಲೆ ಜನರನ್ನು ಪ್ರತ್ಯೇಕ ಪ್ರದೇಶಗಳಿಗೆ ಸ್ಥಳಾಂತರಿಸಲಾಯಿತು. ಈ ವ್ಯವಸ್ಥೆಯನ್ನು ಮಹಾ ವರ್ಣಭೇದ (Great Apartheid) ಎಂದು ಕರೆಯುತ್ತಾರೆ. |
| **ಜನಸಂಖ್ಯಾ ದಾಖಲಾತಿ ಕಾಯಿದೆ**<br>**(Population Registration Act)** | 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರಿಗೂ ಅವರ ಜನಾಂಗವನ್ನು ಸ್ಪಷ್ಟಪಡಿಸುವ ಗುರುತಿನ ಚೀಟಿಯನ್ನು ಕಡ್ಡಾಯಗೊಳಿಸಲಾಯಿತು. |
| **ಬಂಟು ಅಧಿಕಾರ ಕಾಯಿದೆ**<br>**(Home Land System Bantu Authorities Act)** | ಕರಿಯರು ಪ್ರತ್ಯೇಕ ಸ್ವಾಯತ್ತ ಆಡಳಿತ ಪ್ರದೇಶಗಳ ನಾಗರಿಕರಾಗಿ ಬದಲಾದರು ಮತ್ತು ಅವರಿಗೆ ದಕ್ಷಿಣ ಆಫ್ರಿಕಾದ ಪೌರತ್ವ ನಷ್ಟವಾಯಿತು. |
| **ಪ್ರತ್ಯೇಕ ಸೌಲಭ್ಯ ಮೀಸಲಾತಿ ಕಾಯಿದೆ**<br>**(Reservation of Separate Amenities Act)** | ಮೈದಾನಗಳು, ಬೀಚುಗಳು, ಬಸ್, ಆಸ್ಪತ್ರೆ, ಶಾಲೆಗಳು, ಉದ್ಯಾನಗಳು ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಸೂಚನಾ ಫಲಕಗಳನ್ನು ಅಳವಡಿಸಲಾಯಿತು. |
| **ಬಂಟು ಶಿಕ್ಷಣ ಕಾಯಿದೆ**<br>**(The Bantu Education Act)** | ಕಪ್ಪು ವರ್ಗದವರಿಗೆ ಸಾಂಪ್ರದಾಯಿಕ ರೀತಿಯಲ್ಲಿರುವ ಶಿಕ್ಷಣದ ಹಕ್ಕನ್ನು ಮಾತ್ರ ನೀಡಲಾಯಿತು. |

ಪ್ರತ್ಯೇಕ ಸೌಲಭ್ಯ ಮೀಸಲಾತಿ ಕಾಯಿದೆಗೆ ಸಂಬಂಧಿಸಿದಂತೆ ದಕ್ಷಿಣ ಆಫ್ರಿಕಾದಲ್ಲಿ ಸ್ಥಾಪಿಸಲಾದ ಕೆಲವು ಸೂಚನಾ ಫಲಕಗಳ ಚಿತ್ರಗಳನ್ನು ಕೆಳಗೆ ನೀಡಲಾಗಿದೆ.




ಬಿಳಿಯರಲ್ಲದ ಪುರುಷರಿಗೆ ಮಾತ್ರ ಪ್ರವೇಶ

ಯುರೋಪಿಯನ್ ಮಕ್ಕಳಿಗೆ ಮಾತ್ರವಾಗಿರುವ ಆಟದ ಸ್ಥಳ






ಬಿಳಿಯರಿಗೆ ಮಾತ್ರ ಪ್ರವೇಶ

ಈ ಸಾರ್ವಜನಿಕ ಸ್ಥಳಗಳು ಮತ್ತು ಸೌಲಭ್ಯಗಳು ಬಿಳಿಯರಿಗೆ ಮಾತ್ರ ಸೀಮಿತವಾಗಿವೆ.







ಎಚ್ಚರಿಕೆ : ಸ್ಥಳೀಯರ ಬಗ್ಗೆ ಎಚ್ಚರದಿಂದಿರಿ

ಡರ್ಬನ್ ತೀರ ಕಾಯಿದೆ ಸೆಕ್ಷನ್ 37 ರ ಪ್ರಕಾರ ಡರ್ಬನ್ ಕಡಲು ತೀರವನ್ನು ಬಿಳಿವರ್ಗದವರು ಮಾತ್ರವೇ ಉಪಯೋಗಿಸಬೇಕು.




*ಚಿತ್ರಗಳು 11.11*
*ವರ್ಣ ಭೇದ ಕಾಲದ ಎಚ್ಚರಿಕೆ ಫಲಕಗಳು*

ಕಪ್ಪು ವರ್ಗದವರು ತಮ್ಮ ನಾಡಿನಲ್ಲಿ ಅನುಭವಿಸಬೇಕಾಗಿ ಬಂದ ಮಾನವ ಹಕ್ಕುಗಳ ಉಲ್ಲಂಘನೆಯ ತೀವ್ರತೆಯನ್ನು ಈ ಸೂಚನಾ ಫಲಕಗಳು ಸೂಚಿಸುತ್ತವೆ.

ಇಂತಹ ಅಮಾನವೀಯ ಕಾನೂನುಗಳನ್ನು ಜಾರಿಗೊಳಿಸುವುದರೊಂದಿಗೆ ದಕ್ಷಿಣ ಆಫ್ರಿಕಾದ ಒಡೆಯರಾದ ಜನರು, ಮತದಾನದ ಹಕ್ಕು ಇಲ್ಲದವರೂ, ಆಡಳಿತದ ಹಕ್ಕು ಮತ್ತು ಶಿಕ್ಷಣದ ಹಕ್ಕು ನಿಷೇಧಿಸಲ್ಪಟ್ಟವರೂ ಆಗಿ ಬದಲಾದರು.

**ವರ್ಣ ತಾರತಮ್ಯ ನಿಯಮಗಳಿಂದಾಗಿ ಜನರು ಎದುರಿಸಿದ ತೊಂದರೆಗಳನ್ನು ರೋಲ್‌ಪ್ಲೇ ಮಾಡಿ ಪ್ರಸ್ತುತಪಡಿಸಿರಿ.**

## ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯ ಹೋರಾಟ

ವಸಾಹತುಶಾಹಿ ಮತ್ತು ವರ್ಣಭೇದವು ದಕ್ಷಿಣ ಆಫ್ರಿಕಾದ ಜನಜೀವನವನ್ನು ನಕಾರಾತ್ಮಕವಾಗಿ ಭಾಧಿಸಿತು. ದಕ್ಷಿಣ ಆಫ್ರಿಕಾದ ಕಪ್ಪು ವರ್ಗದವರು ರಾಜಕೀಯವಾಗಿಯೂ, ಆರ್ಥಿಕವಾಗಿಯೂ ಸಾಂಸ್ಕೃತಿಕವಾಗಿಯೂ

ಅವನತಿಯನ್ನು ಅನುಭವಿಸಿದರು. ದೇಶದ ಆರ್ಥವ್ಯವಸ್ಥೆಯು ವೇಗವಾಗಿ ಬೆಳೆಯುತಿದ್ದರೂ, ಸ್ಥಳೀಯ ಜನರು ಮೂಲಭೂತ ಅಗತ್ಯಗಳಿಗಾಗಿ ಕಷ್ಟಪಟ್ಟರು.

ಇಂತಹ ತಾರತಮ್ಯ ಮತ್ತು ದಬ್ಬಾಳಿಕೆಯ ವಿರುದ್ಧ ದಕ್ಷಿಣ ಆಫ್ರಿಕನ್ನರು ನಡೆಸಿದ ಕೆಲವು ಪ್ರಮುಖ ಹೋರಾಟಗಳು ಯಾವುವೆಂದು ನೋಡೋಣ.

ನೆಲ್ಸನ್ ಮಂಡೇಲರ ನೇತೃತ್ವದಲ್ಲಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್, ಕಪ್ಪು ವರ್ಗದವರ ವಿಮೋಚನೆಗಾಗಿ ದೇಶ ವ್ಯಾಪಕವಾಗಿ ಪ್ರತಿಭಟನೆಗಳನ್ನು ಆರಂಭಿಸಿತು. ಆರಂಭಿಕ ಪ್ರತಿಭಟನೆಗಳು ಸಂಪೂರ್ಣವಾಗಿ ಶಾಂತಿಯುತವಾದ ನಿಯಮ ಉಲ್ಲಂಘನೆಯ ಹೋರಾಟಗಳಾದ್ದವು.




*ಚಿತ್ರ 11.12*
*ದಬ್ಬಾಳಿಕೆಯ ವಿರುದ್ಧ ದಕ್ಷಿಣ ಆಫ್ರಿಕಾದ ಜನರು ನಡೆಸಿದ ಪ್ರತಿಭಟನೆ*

ದಕ್ಷಿಣ ಆಫ್ರಿಕಾದ ಭಾರತೀಯ ಕಾಂಗ್ರೆಸ್ ಮತ್ತು ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ಆಹ್ವಾನದ ಪ್ರಕಾರ, ಕಾರ್ಖಾನೆಯ ಕಾರ್ಮಿಕರು, ಕಚೇರಿ ನೌಕರರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಮುಂತಾದ ವಿವಿಧ ವಿಭಾಗದ ಜನರು ಹೋರಾಟಗಳಲ್ಲಿ ಒಟ್ಟುಗೂಡಿದರು. ಪಾಸ್ ಕಾನೂನುಗಳು ಮತ್ತು ನಿಷೇದಾಜ್ಞೆ ಇತ್ಯಾದಿಗಳನ್ನು ಪ್ರಶ್ನಿಸಿದ ಪ್ರತಿಭಟನೆಗಾರರನ್ನು ಬಂಧಿಸಿ ಜೈಲಿನಲ್ಲಿರಿಸಲಾಯಿತು.

ನೆಲ್ಸನ್ ಮಂಡೇಲರನ್ನು 1956-ರಲ್ಲಿ ದೇಶದ್ರೋಹದ ಆರೋಪದ ಮೇಲೆ ಪುನಃ ಬಂಧಿಸಲಾಯಿತು. ದೀರ್ಘಕಾಲದ ವಿಚಾರಣೆಯ ನಂತರ ಅವರನ್ನು ಆರೋಪ ಮುಕ್ತಗೊಳಿಸಲಾಯಿತು.



*ಚಿತ್ರ 11.13*

## ಆಫ್ರಿಕನ್ ವರ್ಷ

ಆಫ್ರಿಕಾದ ದೇಶಗಳ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ 1960 ಎಂಬುದು ಬಹಳ ಪ್ರಾಧಾನ್ಯ ಇರುವ ವರ್ಷವಾಗಿದೆ. ಹದಿನೇಳು ಆಫ್ರಿಕಾ ದೇಶಗಳಿಗೆ ಸ್ವಾತಂತ್ರ್ಯ ಲಭಿಸಿದ ಈ ವರ್ಷಕ್ಕೆ ದಕ್ಷಿಣ ಆಫ್ರಿಕಾದ ಇತಿಹಾಸದಲ್ಲಿಯೂ ಬಹಳ ಪ್ರಾಮುಖ್ಯವಿದೆ. 1960-ರಲ್ಲಿ ಪಾಸ್ ಕಾಯಿದೆಗಳ ವಿರುದ್ಧ ಪ್ರತಿಭಟಿಸಿದ ಜನರನ್ನು ಶಾರ್ಪ್ ವಿಲ್(Sharp Velle) ಎಂಬ ಸ್ಥಳದಲ್ಲಿ ಸಾಮೂಹಿಕವಾಗಿ ಹತ್ಯೆಗೈದುದೂ, ದಕ್ಷಿಣ ಆಫ್ರಿಕಾದ ಸರಕಾರದ ವಿರುದ್ಧ ಸಶಸ್ತ್ರ ದಂಗೆ ಆರಂಭವಾದದ್ದು 1960-ರಲ್ಲಾಗಿದೆ.

## ರೊಬನ್ ದ್ವೀಪ



ಚಿತ್ರ 11.14



ಭಾರತೀಯ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಅಂಡಮಾನ್ ದ್ವೀಪದ ಸೆಲ್ಯೂಲಾರ್ (ಕಾಲಾಪಾನಿ) ಜೈಲಿಗಿರುವಷ್ಟೇ ಮಹತ್ವವು ದಕ್ಷಿಣ ಆಫ್ರಿಕಾದ ಇತಿಹಾಸದಲ್ಲಿ ರೊಬನ್ ದ್ವೀಪಕ್ಕಿದೆ. ಬಂಧನಕ್ಕೊಳಗಾದ ಆಫ್ರಿಕಾದ ನಾಯಕರನ್ನು ಗಡಿಪಾರು ಮಾಡಲು ಉಪಯೋಗಿಸುತ್ತಿದ್ದ ದ್ವೀಪವು ಇದಾಗಿದೆ. ನೆಲ್ಸನ್ ಮಂಡೇಲರು ಹದಿನೆಂಟು ವರ್ಷ ಸೆರೆಮನೆ ವಾಸ ಅನುಭವಿಸಿದ್ದು ಇದೇ ದ್ವೀಪದಲ್ಲಾಗಿದೆ.

ಮತದಾನದ ಹಕ್ಕು, ವರ್ಣಭೇದವಿಲ್ಲದ ಸಂವಿಧಾನ ಮತ್ತು ಪಾಸ್ ಕಾಯಿದೆಗಳನ್ನು ಹಿಂತೆಗೆದುಕೊಳ್ಳುವುದು ಮೊದಲಾದ ಬೇಡಿಕೆಗಳನ್ನು ಮುಂದಿರಿಸಿ ಮನೆಯಲ್ಲಿರುವಿಕೆ(Stay-at-home) ಎಂಬ ಹೊಸ ಹೋರಾಟ ರೀತಿಯನ್ನು ಆಯೋಜಿಸಲಾಯಿತು. ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಮತ್ತು ದಕ್ಷಿಣ ಆಫ್ರಿಕನ್ ಇಂಡಿಯನ್ ಕಾಂಗ್ರೆಸ್ ಈ ಹೋರಾಟಕ್ಕೆ ನೇತೃತ್ವ ನೀಡಿತು. ಈ ಹೋರಾಟದಲ್ಲಿ ಸ್ಥಳೀಯರು ಮತ್ತು ಭಾರತೀಯ ಕಾರ್ಮಿಕರು ಭಾಗವಹಿಸಿದರು. ದೇಶದ ಕಾರ್ಖಾನೆಗಳು, ಬಟ್ಟೆಗಿರಣಿಗಳು ಮತ್ತು ಶಾಲೆಗಳು ಮುಚ್ಚಲ್ಪಟ್ಟವು. ಈ ಹೋರಾಟವು ವರ್ಣಭೇದ ವಿರೋಧಿ ಚಳುವಳಿಯ ಏಕತೆ ಮತ್ತು ಶಕ್ತಿಯನ್ನು ಬಹಿರಂಗಪಡಿಸಿತು. ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯ ಹೋರಾಟದ ಇತಿಹಾಸದಲ್ಲಿ ಮನೆಯಲ್ಲಿರುವಿಕೆ ಹೋರಾಟವು ಒಂದು ಪ್ರಮುಖ ಹೋರಾಟವಾಗಿದೆ. ಶಾಂತಿಯುತವಾದ ಹೋರಾಟಗಳಿಗೆ ಫಲ ಸಿಗದ ಕಾರಣ ನೆಲ್ಸನ್ ಮಂಡೇಲ ಸಶಸ್ತ್ರ ದಂಗೆಗಳಿಗೆ ಕರೆ ನೀಡಿದರು.

1964-ರಲ್ಲಿ, ನೆಲ್ಸನ್ ಮಂಡೇಲರಿಗೆ ವಿಧ್ವಂಸಕ ಕೃತ್ಯ, ದೇಶದ್ರೋಹ ಮತ್ತು ಪಿತೂರಿಯ ಆರೋಪದ ಮೇಲೆ ಜೀವಾವಧಿ ಶಿಕ್ಷೆ ವಿಧಿಸಲಾಯಿತು. ರೊಬನ್ ದ್ವೀಪದಲ್ಲಿ ಮತ್ತು ಪೋಲ್ಸ್ ಮೂರ್ ಜೈಲಿನಲ್ಲಿ ಸತತ 26 ವರ್ಷಗಳ ಕಠಿಣ ಸೆರೆವಾಸವನ್ನು ಅನುಭವಿಸಬೇಕಾಯಿತು. ವಿಶ್ವರಾಷ್ಟ್ರಗಳು ದಕ್ಷಿಣ ಆಫ್ರಿಕಾದ ವಿರುದ್ಧ ನಿರ್ಬಂಧಗಳನ್ನು ವಿಧಿಸಿದವು. ವಿಶ್ವ ಸಂಸ್ಥೆಯು 'ವರ್ಣಭೇದವು ಮಾನವೀಯತೆಯ ವಿರುದ್ಧದ ಅಪರಾಧ' ಎಂಬ ನಿರ್ಣಯವನ್ನು ಅಂಗೀಕರಿಸಿತು. ಇದರೊಂದಿಗೆ ನಾಡಿನೆಲ್ಲೆಡೆ ಗಲಭೆ ಹಬ್ಬಿತು. ಜನರ ಪ್ರತಿಭಟನೆಯನ್ನು ಹತ್ತಿಕ್ಕಲು ಸರಕಾರವು 1984-ರಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಿತು. ನಂತರದ ಘರ್ಷಣೆಯಲ್ಲಿ ಅನೇಕ ಕಪ್ಪು ವರ್ಗದವರು ಕೊಲ್ಲಲ್ಪಟ್ಟರು.

ಪ್ರತಿಭಟನೆಗಳು ನಿಯಂತ್ರಣ ಕಳೆದುಕೊಂಡಾಗ, ವರ್ಣಭೇದವನ್ನು ಕೊನೆಗೊಳಿಸುವ ಕ್ರಮಗಳನ್ನು ಆರಂಭಿಸಲಾಯಿತು. ರಾಜಕೀಯ ಕೈದಿಗಳನ್ನು ಬಿಡುಗಡೆ ಮಾಡಲಾಯಿತು ಮತ್ತು ರಾಜಕೀಯ ಪಕ್ಷಗಳ ಮೇಲಿನ ನಿಷೇಧವನ್ನು ತೆಗೆದು ಹಾಕಲಾಯಿತು. 1990 ಫೆಬ್ರವರಿ 11-ರಂದು ನೆಲ್ಸನ್ ಮಂಡೇಲ ಜೈಲಿನಿಂದ ಬಿಡುಗಡೆಯಾದರು.

1991-ರಲ್ಲಿ ವರ್ಣಬೇಧ ನೀತಿಯನ್ನು ಹಿಂತೆಗೆದುಕೊಳ್ಳಲಾಯಿತು. 1994-ರಲ್ಲಿ ನಡೆದ ಮೊದಲ ಚುನಾವಣೆಯಲ್ಲಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಬಹುಮತ ಗಳಿಸಿತು ಮತ್ತು ನೆಲ್ಸನ್ ಮಂಡೇಲ ಸ್ವತಂತ್ರ ಪ್ರಜಾಪ್ರಭುತ್ವ ದಕ್ಷಿಣ ಆಫ್ರಿಕಾದ ಮೊದಲ ಕಪ್ಪು ವರ್ಗದ ಅಧ್ಯಕ್ಷರಾಗಿ ಆಯ್ಕೆಯಾದರು.

**ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯಹೋರಾಟಕ್ಕೆ ಸಂಬಂಧಿಸಿದ ವಿಚಾರಗಳನ್ನೊಳಗೊಂಡ ರಸಪ್ರಶ್ನೆ ಸ್ಪರ್ಧೆಯನ್ನು ಆಯೋಜಿಸಿರಿ..**

### ಅಧ್ಯಕ್ಷ ಸ್ಥಾನವಹಿಸಿದ ನೆಲ್ಸನ್ ಮಂಡೇಲ ನಡೆಸಿದ ಭಾಷಣ

ನಾವು, ದಕ್ಷಿಣ ಆಫ್ರಿಕಾದ ಜನರು, ನಮ್ಮ ದೇಶಕ್ಕೆ ಮತ್ತು ಜಗತ್ತಿಗೆ ತಿಳಿಯಲು ಘೋಷಿಸುತ್ತೇವೆ: ದಕ್ಷಿಣ ಆಫ್ರಿಕಾ, ಈ ದೇಶದಲ್ಲಿ ವಾಸಿಸುವ ಕಪ್ಪು ಮತ್ತು ಬಿಳಿಯ ಎಲ್ಲರಿಗೂ ಸೇರಿರುವುದಾಗಿದೆ. ಇಲ್ಲಿ ಜನರ ಇಚ್ಛೆಯ ಆಧಾರದಲ್ಲಲ್ಲದೆ ಯಾವುದೇ ಒಂದು ಸರಕಾರಕ್ಕೆ ನ್ಯಾಯಯುತವಾಗಿ ಅಧಿಕಾರದ ಹಕ್ಕು ಸ್ಥಾಪಿಸಲು ಸಾಧ್ಯವಿಲ್ಲ.

- 1994 ರ ಸ್ವಾತಂತ್ರ್ಯ ಚಾರ್ಟರ್‌ನ ಪರಿಚಯಾತ್ಮಕ ಪದಗಳು,

ಈ ಭಾಷಣದ ಮೂಲಕ, ಆಫ್ರಿಕನ್ನರು ಒಗ್ಗಟ್ಟಿನಿಂದ ನಿಲ್ಲಬೇಕಾದ ಮಹತ್ವವನ್ನು ನೆಲ್ಸನ್ ಮಂಡೇಲ ನೆನಪಿಸಿದರು.

ಒಂದೇ ಪ್ರದೇಶದಲ್ಲಿ, ವಿವಿಧ ಜನಾಂಗದವರು ಒಟ್ಟಿಗೆ ವಾಸಿಸುವ ಇಂದಿನ ಕಾಲದಲ್ಲಿ, ನೆಲ್ಸನ್ ಮಂಡೇಲ ಎತ್ತಿ ಹಿಡಿದ ಸಹಬಾಳ್ವೆಯ ನಿಲುವು ಜಗತ್ತಿನ ಎಲ್ಲ ದೇಶಗಳಿಗೂ ಮಾದರಿಯಾಗಿದೆ.

## ಮುಂದುವರಿದ ಚಟುವಟಿಕೆಗಳು

- ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರು ಜಾರಿಗೊಳಿಸಿದ ವಸಾಹತುಶಾಹಿತ್ವ ಮತ್ತು ವರ್ಣಭೇದವು ಕಪ್ಪು ವರ್ಗದವರ ಜೀವನವನ್ನು ಎಷ್ಟರ ಮಟ್ಟಿಗೆ ದುಸ್ತರಗೊಳಿಸಿತು ಎಂಬುದನ್ನು ನೀವು ನೋಡಿದಿರಲ್ಲವೇ. ತಾರತಮ್ಯವನ್ನು ಬೇರುಸಹಿತ ಕಿತ್ತುಹಾಕಲು ಅವರು ನಡೆಸಿದ ಹೋರಾಟಗಳನ್ನು ನಾಟಕ ರೂಪದಲ್ಲಿ ಪ್ರಸ್ತುತಪಡಿಸಿರಿ.
- ದಕ್ಷಿಣ ಆಫ್ರಿಕಾದ ವರ್ಣಭೇದ ವಿರೋಧಿ ಹೋರಾಟಗಳ ಘಟನಾವಳಿಗಳನ್ನು ಸೇರಿಸಿ ಒಂದು ಟೈಮ್ ಲೈನ್ (Time Line) ತಯಾರಿಸಿರಿ.




# ಚರಿತ್ರೆಯ ಆಧಾರ ಶಿಲೆಗಳು

ಪ್ರಾದೇಶಿಕ ಚರಿತ್ರೆ ರಚನಾ ಸ್ಪರ್ಧೆಯಲ್ಲಿ ಅನು ತಯಾರಿಸಿದ ಪ್ರಾದೇಶಿಕ ಚರಿತ್ರೆಯ ಒಂದು ಭಾಗವನ್ನು ಇಲ್ಲಿ ಕೊಡಲಾಗಿದೆ.



ವಿಝಿಂಜಂ, ತಿರುವನಂತಪುರ ನಗರದ ದಕ್ಷಿಣಕ್ಕೆ 15 ಕಿಲೋಮೀಟರ್ ದೂರದಲ್ಲಿರುವ ಪ್ರದೇಶವಾಗಿದೆ. ಇದು ಪ್ರಾಚೀನ ಕಾಲದಿಂದಲೂ ಅತ್ಯಂತ ಐತಿಹಾಸಿಕ ಮತ್ತು ವಾಣಿಜ್ಯಕ್ಕೆ ಹೆಚ್ಚಿನ ಪ್ರಾಧಾನ್ಯವನ್ನು ಹೊಂದಿರುವ ಕರಾವಳಿ ಪ್ರದೇಶವಾಗಿದೆ. ಪ್ರಾಚೀನ ತಮಿಳಗಂನ ಪ್ರಮುಖ ಕೇಂದ್ರಗಳಲ್ಲಿ ವಿಝಿಂಜಂ ಒಂದಾಗಿತ್ತು ಎಂದು ಸಂಘಕಾಲದ ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖಿಸಲಾಗಿದೆ.

ಒಂದು ಬಂದರು ಮತ್ತು ವ್ಯಾಪಾರ ಕೇಂದ್ರವೆಂಬ ನೆಲೆಯಲ್ಲಿ ಈ ಪ್ರದೇಶವು ದಕ್ಷಿಣ ಭಾರತದ ರಾಜಕೀಯ, ಸಾಮಾಜಿಕ, ಆರ್ಥಿಕ ಚರಿತ್ರೆಯ ಭಾಗವಾಗಿದೆ. ಸಿ. ಇ. 9-10ನೇ ಶತಮಾನಗಳಲ್ಲಿ ವಿಝಿಂಜಂ ದಕ್ಷಿಣ ಭಾರತದ ಆಯ್ ರಾಜವಂಶದ ಕೇಂದ್ರವಾಗಿತ್ತು ಎಂದು ಶಿಲಾಲಿಖಿತಗಳು ಮತ್ತು ಇತರ ಚಾರಿತ್ರಿಕ ದಾಖಲೆಗಳು ಸೂಚಿಸುತ್ತವೆ. ಅಟ್ಟೂರ್ ಕೃಷ್ಣಪಿಶಾರಡಿ ಬರೆದ ಲೀಲಾತಿಲಕ ಎಂಬ ಪುಸ್ತಕದಲ್ಲಿ ಪಾಂಡ್ಯರಿಂದ ಸೋಲಿಸಲ್ಪಟ್ಟ ಆಯ್ ಕುಟುಂಬವು ಆಯ್ಕುಡಿಯನ್ನು ತ್ಯಜಿಸಿ ವಿಝಿಂಜಂಗೆ ವಲಸೆ ಹೋದರು ಎಂದು ದಾಖಲಿಸಿದ್ದಾರೆ. ಉದ್ಯೋತನಸೂರಿ ಎಂಬ ಜೈನಮುನಿ ರಚಿಸಿದ 'ಕುವಲಯಮಾಲಾ' ಎಂಬ ಕೃತಿಯಲ್ಲಿ ವಿಝಿಂಜಮನ್ನು 'ವಿಜಯಪುರಿ' ಎಂದು ಉಲ್ಲೇಖಿಸಿದ್ದಾರೆ. ಪಾಂಡ್ಯ ರಾಜನಾದ ನೆಡುಂಜೆಝಿಯನ್‌ನ ಶಾಸನದಲ್ಲಿ ಇಲ್ಲಿಯ ಕೋಟೆಗಳ ಬಗ್ಗೆ ದಾಖಲಿಸಿದ್ದಾರೆ.

ಸಂಘಕಾಲದಲ್ಲಿಯೇ ವಿಝಿಂಜಂ ಒಂದು ಪ್ರಧಾನ ವಾಣಿಜ್ಯ ಬಂದರು ಕೇಂದ್ರವಾಗಿತ್ತು ಎಂದು ವಿದೇಶಿ ಸಂಚಾರ ಸಾಹಿತ್ಯ ಕೃತಿಯಾದ 'ಪೆರಿಪ್ಲಸ್ ಆಫ್ ದಿ ಎರಿತ್ರಿಯನ್ ಸಿ' ಎಂಬ ಪುಸ್ತಕದಲ್ಲಿ ದಾಖಲಿಸಲ್ಪಟ್ಟಿದೆ.

ಕೇರಳ ವಿಶ್ವವಿದ್ಯಾನಿಲಯದ ಪುರಾತತ್ವ ವಿಭಾಗವು ನಡೆಸಿದ ಉತ್ಖನನದಲ್ಲಿ ಈ ಪ್ರದೇಶದ ಸಮೀಪದಲ್ಲಿ ನೆಲೆನಿಂತಿದ್ದ ಕೋಟೆಯ ಅವಶೇಷಗಳನ್ನು ಕಂಡುಹಿಡಿಯಲಾಗಿದೆ. 'ಕೋಟಪುರ' ಎಂಬ ಸ್ಥಳನಾಮವು ಇಂದಿಗೂ ವಿಝಿಂಜಂನ ಸಮೀಪದಲ್ಲಿದೆ. ಚೀನಿ-ರೋಮನ್ ನಿರ್ಮಿತ ಪಾತ್ರೆಗಳು ಮತ್ತು ಇತರ ವಸ್ತುಗಳ ಅವಶೇಷಗಳು, ರೋಮನ್ ನಾಣ್ಯಗಳು ಮೊದಲಾದವುಗಳು ಈ ಪ್ರದೇಶದಿಂದ ಲಭಿಸಿವೆ. ಈ ಪುರಾತತ್ವ ಪುರಾವೆಗಳನ್ನು ಪ್ರಾಚೀನ ಕಾಲದ ವಿದೇಶಿ ವ್ಯಾಪಾರ ಸಂಬಂಧಗಳ ಸೂಚನೆಗಳಾಗಿ ಪರಿಗಣಿಸಬಹುದು.

ಇಲ್ಲಿ ನೆಲೆನಿಂತಿರುವ ಪುರಾತನ ಗುಹಾ ದೇವಾಲಯವು ಈ ಪ್ರದೇಶದ ಪ್ರಾಚೀನತೆಯನ್ನು ಸಾಬೀತುಪಡಿಸುತ್ತದೆ. ವಿವಿಧ ಜಾತಿ-ಮತ ವಿಭಾಗದ ಜನರು ಸಹಿಷ್ಣುತೆಯಿಂದ ವಾಸಿಸುವ ಈ ಪ್ರದೇಶದಲ್ಲಿ ವಿವಿಧ ಮತಗಳ ಆರಾಧನಾಲಯಗಳನ್ನು ಧಾರಾಳವಾಗಿ ಕಾಣಬಹುದು. ಪ್ರಾಚೀನ ಬಂದರಾಗಿದ್ದ ವಿಝಿಂಜಂ ಇಂದು ಆಧುನಿಕ ಸೌಕರ್ಯಗಳಿರುವ ಬಂದರು ಕೇಂದ್ರವಾಗಿ ಬದಲಾಗಿದೆ.

ಮೇಲೆ ಕೊಟ್ಟಿರುವ ಪ್ರಾದೇಶಿಕ ಚರಿತ್ರಾ ಟಿಪ್ಪಣಿಯನ್ನು ಓದಿದಿರಲ್ಲವೇ. ಈ ಟಿಪ್ಪಣಿ ತಯಾರಿಸಲು ಯಾವೆಲ್ಲಾ ಮೂಲಗಳನ್ನು ಉಪಯೋಗಿಸಲಾಗಿದೆ ಎಂದು ಕಂಡುಹಿಡಿಯಬಹುದೆ?

- ಪುರಾತತ್ವ ಪುರಾವೆಗಳು
- ಲಿಖಿತಗಳು
- ಸಾಹಿತ್ಯಕೃತಿಗಳು
- 
- 
- 
- 

ಈ ರೀತಿಯಲ್ಲಿ ಪುರಾವೆಗಳ ಆಧಾರದಲ್ಲಿ ಭೂತಕಾಲವನ್ನು ವೈಜ್ಞಾನಿಕವಾಗಿ ದಾಖಲಿಸುವ ಕಲಿಕಾ ಶಾಖೆಯು ಚರಿತ್ರೆಯಾಗಿದೆ. ಚರಿತ್ರೆಯ ರಚನೆಗೆ ಅಗತ್ಯವಾದ ಅನೇಕ ಪುರಾವೆಗಳು ಪ್ರತಿಯೊಂದು ಕಾಲದಲ್ಲಿಯೂ ವಿವಿಧ ರೂಪಗಳಲ್ಲಿ ಉಳಿಸಿರಬಹುದು. ಅವುಗಳನ್ನು ಒಟ್ಟು ಸೇರಿಸಿ ವೈಜ್ಞಾನಿಕವಾಗಿ ವಿಶ್ಲೇಷಿಸಿ ಭೂತಕಾಲವನ್ನು ದಾಖಲಿಸುವ ಪ್ರಕ್ರಿಯೆಯು ಚರಿತ್ರೆ ರಚನೆಯಾಗಿದೆ.

ಮಧ್ಯಕಾಲಭಾರತದಲ್ಲಿ ನೆಲೆನಿಂತಿದ್ದ ವಿಶಾಲವಾದ ಮೊಘಲ್-ವಿಜಯನಗರ ರಾಜ್ಯಗಳ ಮತ್ತು ಅಲ್ಲಿಯ ಆಢಳಿತಾಧಿಕಾರಿಗಳ ಕುರಿತು ಹಿಂದಿನ ಅಧ್ಯಾಯದಲ್ಲಿ ನೀವು ಚರ್ಚಿಸಿದ್ದೀರಲ್ಲವೆ. ಈ ರೀತಿಯ ವಿಶಾಲವಾದ ರಾಜ್ಯಗಳ ಮತ್ತು ರಾಜರುಗಳ ಚರಿತ್ರೆಯಿಂದ ವ್ಯತ್ಯಸ್ಥವಾಗಿ ಒಂದು ಸಣ್ಣ ಪ್ರದೇಶದ, ವ್ಯಕ್ತಿಯ ಅಥವಾ ಘಟನೆಯ ಸೂಕ್ಷ್ಮ ಮತ್ತು ಸಮಗ್ರವಾದ ದಾಖಲಿಸುವಿಕೆಯು ಪ್ರಾದೇಶಿಕ ಚರಿತ್ರೆಯಾಗಿದೆ.

| ಚರಿತ್ರೆ | ಪ್ರಾದೇಶಿಕ ಚರಿತ್ರೆ |
|---|---|
| ವಿಶಾಲವಾದ ಪ್ರದೇಶದ, ನಾಡಿನ, ದೇಶದ ಅಥವಾ ಘಟನೆಗಳ ಇತಿಹಾಸವನ್ನು ದಾಖಲಿಸುವುದು. | ಜಾಗತಿಕ ಚರಿತ್ರೆ, ದೇಶದ ಚರಿತ್ರೆ, ರಾಜ್ಯದ ಇತಿಹಾಸ ಮೊದಲಾದವುಗಳಿಂದ ವ್ಯತ್ಯಸ್ತವಾಗಿ ಚಿಕ್ಕ ಪ್ರದೇಶದ ವಿಷಯಗಳ, ಘಟನೆಗಳ ಸೂಕ್ಷ್ಮವಾದ ಚರಿತ್ರಾನ್ವೇಷಣೆಯಾಗಿದೆ. |
| ಲಿಖಿತ ದಾಖಲೆಗಳು, ಪುರಾತತ್ವ ಪುರಾವೆಗಳು ಮತ್ತು ಇತಿಹಾಸದ ಅವಶೇಷಗಳನ್ನು ಬಳಸಿಕೊಂಡು ಇತಿಹಾಸವನ್ನು ನಿರ್ಮಿಸುವುದು. | ಪ್ರಾದೇಶಿಕ ಆಚರಣೆಗಳು, ಆಹಾರ ಪದ್ಧತಿ, ಆಚಾರನುಷ್ಠಾನಗಳು, ಜನಪದ ನುಡಿಗಟ್ಟುಗಳು ಮೊದಲಾದವುಗಳು ಚರಿತ್ರೆ ರಚನೆಯ ಭಾಗವಾಗಿವೆ. |
| ಭೂತಕಾಲದ ಘಟನೆಗಳು, ಸಂಸ್ಕೃತಿಗಳು, ಸಮಾಜಗಳು ಎಂಬಿವುಗಳನ್ನು ವಿಶಾಲ ದೃಷ್ಟಿಕೋನದಲ್ಲಿ ಮೌಲ್ಯಮಾಪನ ಮಾಡುವುದು. | ಇತಿಹಾಸವನ್ನು ಪ್ರಜಾಪ್ರಭುತ್ವಗೊಳಿಸುವ ಮೂಲಕ ಇತಿಹಾಸದ ಮುಖ್ಯವಾಹಿನಿಯಲ್ಲಿ ಸ್ಥಾನ ಪಡೆಯದ ಪ್ರದೇಶಗಳು, ಜನವಿಭಾಗಗಳಿಗೆ ಮತ್ತು ಘಟನೆಗಳಿಗೆ ಸರಿಯಾದ ಪ್ರಾತಿನಿಧ್ಯವನ್ನು ನೀಡಲಾಗುತ್ತದೆ. |

**ಹೆಚ್ಚಿನ ಮಾಹಿತಿಗಳನ್ನು ಸಂಗ್ರಹಿಸಿ 'ಚರಿತ್ರೆಯೂ ಪ್ರಾದೇಶಿಕ ಚರಿತ್ರೆಯೂ' ಎಂಬ ವಿಷಯದಲ್ಲಿ ಪ್ಯಾನಲ್ ಚರ್ಚೆಯನ್ನು ಆಯೋಜಿಸಿರಿ.**

## ಚರಿತ್ರೆಯ ಮೂಲಗಳು

ವಿವಿಧ ಪುರಾವೆಗಳ ಆಧಾರದ ಮೇಲೆ ಚರಿತ್ರೆಗಳನ್ನು ಬರೆಯಲಾಗುತ್ತದೆ ಎಂದು ನೀವು ತಿಳಿದಿರಲ್ಲವೇ. ಚರಿತ್ರೆಯ ಕುರಿತು ನಮಗೆ ವಿವರಣೆ ನೀಡುವ ಎಲ್ಲವನ್ನೂ ಚರಿತ್ರೆ ರಚನೆಯ ಮೂಲಗಳು ಎಂದು ಕರೆಯಲಾಗುತ್ತದೆ. ನಿಶ್ಚಿತ ಕಾಲಘಟ್ಟಕ್ಕೆ ಸಂಬಂಧಿಸಿದ ಮತ್ತು ಉಪಯುಕ್ತವಾದ ಮಾಹಿತಿಗಳನ್ನು ನೀಡುವ ಯಾವುದೇ ವಸ್ತುವೂ ಚರಿತ್ರೆಯ ಮೂಲವಾಗಿದೆ.

ಚರಿತ್ರೆ ರಚನೆಗೆ ಉಪಯುಕ್ತವಾದ ಪ್ರಧಾನ ಮೂಲಗಳನ್ನು ಪರಿಚಯಿಸೋಣ.

ಚರಿತ್ರೆಯ ಮೂಲಗಳು →

- ಪುರಾತನ ವಸ್ತುಗಳು
- ಸ್ಮಾರಕಗಳು
- ಸಾಹಿತ್ಯ ಕೃತಿಗಳು
- ಪ್ರವಾಸ ಕಥನಗಳು
- ಪತ್ರಿಕೆಗಳು
- ಅಧಿಕೃತ ದಾಖಲೆಗಳು

## ಪುರಾತತ್ವಶಾಸ್ತ್ರದ ಮೂಲಗಳು

ಪುರಾತತ್ವ ಮೂಲಗಳು ಅವುಗಳು ನಿರ್ಮಿಸಿದ ಕಾಲಘಟ್ಟದ ಜನಜೀವನದ ಕುರಿತು ಮಾಹಿತಿ ಮತ್ತು ಪುರಾವೆಗಳನ್ನು ಒದಗಿಸುವ ದಾಖಲೆಗಳಾಗಿವೆ. ಅವುಗಳಲ್ಲಿ ಪ್ರಧಾನವಾದವುಗಳನ್ನು ನಾವು ಪರಿಚಯಿಸೋಣವೆ?




### ಶಿಲಾಸ್ಮಾರಕಗಳು

ನಮ್ಮ ಸುತ್ತ ಮುತ್ತಲೂ ಕಾಣುವ ಪ್ರತಿಯೊಂದು ಕಲ್ಲಿಗೂ ಒಂದೊಂದು ಕಥೆಯನ್ನು ಹೇಳುವುದಕ್ಕಿರಬಹುದು. ದೊಡ್ಡ ಕಲ್ಲುಗಳಿಂದ ನಿರ್ಮಿಸಿದ ಅನೇಕ ಸ್ಮಾರಕಗಳ ಅವಶೇಷಗಳನ್ನು ನಮ್ಮ ಪೂರ್ವಿಕರು ಇಲ್ಲಿ ಬಿಟ್ಟುಹೋಗಿದ್ದಾರೆ.

ಕೊಟ್ಟಿರುವ ಚಿತ್ರಗಳನ್ನು ಗಮನಿಸಿ.


*ಕೊಡೆಕಲ್ಲು*


*ತೊಪ್ಪಿಕಲ್ಲು*


*ಮುನಿಯರ*

*ಚಿತ್ರಗಳು 12.1*

ಈ ಶಿಲಾ ಸ್ಮಾರಕಗಳು ಕೇರಳದ ವಿವಿಧ ಪ್ರದೇಶಗಳಲ್ಲಿ ಸಿಕ್ಕಿದ ಚರಿತ್ರೆಯ ಅವಶೇಷಗಳಾಗಿವೆ. ದೊಡ್ಡ ಶಿಲೆಗಳಿಂದ ನಿರ್ಮಿಸಿದ ಕಾರಣದಿಂದಾಗಿ ಇವುಗಳನ್ನು ಮಹಾಶಿಲಾಸ್ಮಾರಕಗಳು ಎಂದು ಕರೆಯುತ್ತಾರೆ. ಪ್ರಾಚೀನ ಕಾಲದ ಮಾನವರು ನಿರ್ಮಿಸಿದ ಈ ಶಿಲಾಸ್ಮಾರಕಗಳು ಹಿಂದಿನಕಾಲದ ಚರಿತ್ರೆಯನ್ನು ನಮಗೆ ಹೇಳುತ್ತವೆ. ಇಡುಕ್ಕಿ ಜಿಲ್ಲೆಯ ಮರಯೂರು, ತ್ರಿಶೂರು ಜಿಲ್ಲೆಯ ಚಿರಮಂಗನಾಡ್, ಮಲಪ್ಪುರ ಜಿಲ್ಲೆಯ

ತವನೂರ್ ಮೊದಲಾದ ಸ್ಥಳಗಳಿಂದ ಈ ರೀತಿಯ ಶಿಲಾಸ್ಮಾರಕಗಳ ಅವಶೇಷಗಳು ಲಭಿಸಿವೆ. ನಮ್ಮ ಪೂರ್ವಜರು ಭೌತಿಕ ಅವಶೇಷಗಳನ್ನು ಹೂಳಲು ಇವುಗಳನ್ನು ಉಪಯೋಗಿಸುತ್ತಿದ್ದರು.



*ಚಿತ್ರ 12.2*

**ನನ್ನಂಜಾಡಿಗಳು**

ನನ್ನಂಜಾಡಿಗಳು ಮಹಾಶಿಲಾಯುಗದ ಕಾಲದಲ್ಲಿ ಶವಸಂಸ್ಕಾರಕ್ಕೆ ಉಪಯೋಗಿಸುತ್ತಿದ್ದ ದೊಡ್ಡ ಮಣ್ಣಿನ ಪಾತ್ರೆಗಳಾಗಿವೆ. ಇವುಗಳು ಮಾನವನ ಭೌತಿಕ ಅವಶೇಷಗಳನ್ನು ಹಾಕಿ ಮಣ್ಣಿನಡಿಯಲ್ಲಿ ಹೂಳುವ ಭರಣಿಗಳಾಗಿದ್ದವು.

## ಗುಹೆಗಳು

ಗುಹೆಗಳು ಕೇರಳದ ಪ್ರಾಚೀನ ಚರಿತ್ರೆಯ ಮೇಲೆ ಬೆಳಕು ಚೆಲ್ಲುತ್ತವೆ. ಪ್ರಕೃತಿದತ್ತವಾದ ಇಂತಹ ಗುಹೆಗಳಲ್ಲಿ ಚರಿತ್ರೆಯ ಪೂರ್ವ ಕಾಲದ ಮಾನವರ ಜೀವನವನ್ನು ಸೂಚಿಸುವ ಚಿತ್ರಗಳನ್ನು ಮತ್ತು ಇತರ ವಸ್ತುಗಳನ್ನು ಕೆತ್ತಲಾಗಿದೆ. ಎಡಕ್ಕಲ್(ವಯನಾಡು), ಮರಯೂರು (ಇಡುಕ್ಕಿ), ಆಂಕೋಡ್(ತಿರುವನಂತಪುರ), ತೆನ್ಮಲ, ಕೋಟುಕ್ಕಲ್ (ಕೊಲ್ಲಂ) ಮೊದಲಾದೆಡೆಗಳಲ್ಲಿ ಕೆಲವು ಪ್ರಧಾನ ಗುಹೆಗಳಿವೆ. ಕೇರಳದ ಇಂತಹ ಅನೇಕ ಚಾರಿತ್ರಿಕ ಪ್ರಾಧಾನ್ಯವಿರುವ ಪುರಾವಸ್ತುಗಳನ್ನು ಅರ್ಕಿಯೋಲಾಜಿಕಲ್ ಸರ್ವೆ ಆಫ್ ಇಂಡಿಯಾ ಮತ್ತು ಕೇರಳ ಅರ್ಕಿಯೋಲಾಜಿಕಲ್ ಇಲಾಖೆಯು ಸಂರಕ್ಷಿಸುತ್ತದೆ.

**ಎಡಕ್ಕಲ್ ಗುಹೆ**



*ಚಿತ್ರ 12.3*

ಪ್ರಾಚೀನಕಾಲದ ಮಾನವರು ಉಪಯೋಗಿಸಿದ್ದ ಕೇರಳದ ಪ್ರಧಾನ ಗುಹೆಗಳಲ್ಲಿ ಎಡಕ್ಕಲ್ ಗುಹೆಯು ಒಂದಾಗಿದೆ. ಎಡಕ್ಕಲ್ ಗುಹೆಯು ವಯನಾಡು ಜಿಲ್ಲೆಯ ಸುಲ್ತಾನ್ ಬತ್ತೇರಿಯಿಂದ 10 ಕಿಲೋ ಮೀಟರ್ ದೂರದಲ್ಲಿದೆ. ಇಲ್ಲಿರುವ ಗುಹೆಗಳ ಗೋಡೆಗಳಲ್ಲಿ ಕೆತ್ತಲಾಗಿರುವ ಗುಹಾ ಚಿತ್ರಗಳು ಶಿಲಾಯುಗದ ಮಾನವರ ಕುರಿತು ಮತ್ತು ಅವರ ಜೀವನದ ಕುರಿತು ಮಾಹಿತಿಯನ್ನು ನೀಡುತ್ತದೆ.

**ನಿಮ್ಮ ಪ್ರದೇಶದಲ್ಲಿ ಇಂತಹ ಶಿಲಾ ಸ್ಮಾರಕಗಳಿವೆಯೇ ? ನಿಮಗೆ ತಿಳಿದಿರುವ ಶಿಲಾಸ್ಮಾರಕಗಳ ಕುರಿತು ಟಿಪ್ಪಣಿ ಬರೆಯಿರಿ.**

### ಪ್ರಾಚೀನ ಲಿಖಿತಗಳು

ಒಂದು ಮೇಲ್ಮೈಯಲ್ಲಿ ಬರೆದ ಅಥವಾ ಕೆತ್ತಲಾದ ಸಂದೇಶ ಅಥವಾ ವಾಕ್ಯಗಳು ಪ್ರಾಚೀನ ಲಿಖಿತಗಳಾಗಿವೆ. ವಿವಿಧ ಮೇಲ್ಮೈಗಳಲ್ಲಿ ಲಿಖಿತಗಳನ್ನು ದಾಖಲಿಸಲಾಗಿದೆ.

ಪ್ರಾಚೀನ ಲಿಖಿತಗಳು



ಲೋಹದ ತಗಡುಗಳು



ಶಿಲೆಗಳು



ತಾಳೆಯೋಲೆಗಳು

*ಚಿತ್ರಗಳು 12.4*



**ಲಿಖಿತಗಳ ಅಧ್ಯಯನ**
(Epigraphy)
ಎಪಿಗ್ರಾಫಿ ಎಂದರೆ ಶಿಲೆಗಳು, ಲೋಹದ ತಗಡುಗಳು, ತಾಳೆಗರಿಗಳು ಮೊದಲಾದವುಗಳ ಕುರಿತಾದ ಅಧ್ಯಯನವಾಗಿದೆ.

ಕೇರಳದಾದ್ಯಂತ ಇಂತಹ ಅನೇಕ ಲಿಖಿತಗಳು ಲಭ್ಯವಾಗಿವೆ. ತರಿಸಾಪಳ್ಳಿಶಾಸನ (ಕೊಲ್ಲಂ), ಯಹೂದಿ ಶಾಸನ (ಮಟ್ಟಾಂಚೇರಿ) ಪಾಲಿಯಂ ಶಾಸನ (ಆಲಪ್ಪುಝ) ಮೊದಲಾದವುಗಳು ಕೇರಳದ ಪ್ರಧಾನ ಲಿಖಿತಗಳಾಗಿವೆ. ಕೇರಳದಲ್ಲಿ ಪ್ರಾಚೀನ ಲಿಖಿತಗಳ ಸಂಗ್ರಹ ಮತ್ತು ಸಂರಕ್ಷಣೆಯನ್ನು ಕೇರಳ ಆರ್ಕೈವ್ಸ್ ಇಲಾಖೆಯು ನೋಡಿಕೊಳ್ಳುತ್ತದೆ.




*ಚಿತ್ರ 12.5*



**ನಿಮ್ಮ ಶಾಲೆಯಲ್ಲಿರುವ ಶಿಲಾಫಲಕವನ್ನು ಗಮನಿಸಿ. ಇದೇ ರೀತಿ ನಿಮ್ಮ ಸಮೀಪದ ಸಾರ್ವಜನಿಕ ಕಟ್ಟಡಗಳಲ್ಲಿ, ಆರಾಧನಾಲಯಗಳಲ್ಲಿ ಇಂತಹ ಶಿಲಾಫಲಕಗಳನ್ನು ನೋಡಿರುವಿರಲ್ಲವೆ? ಆ ಸಂಸ್ಥೆಯ ಚರಿತ್ರೆ ರಚನೆಗೆ ಸಹಾಯಕವಾಗುವ ಯಾವೆಲ್ಲಾ ಮಾಹಿತಿಗಳು ಶಿಲಾ ಫಲಕದಿಂದ ಲಭಿಸುತ್ತವೆ?**

### ಕೋಟೆಗಳು ಅರಮನೆಗಳು

ದೇಶದ ಸಂರಕ್ಷಣೆ, ಸೈನ್ಯದ ಅಗತ್ಯಗಳು, ವ್ಯಾಪಾರ ಮೊದಲಾದವುಗಳಿಗಾಗಿ ನಿರ್ಮಿಸಿದ ಕೋಟೆಗಳನ್ನು ಚರಿತ್ರೆ ರಚನೆಯ ಪ್ರಧಾನ ಮೂಲಗಳಾಗಿ ಉಪಯೋಗಿಸಬಹುದು. ಕೇರಳದ ವಿವಿಧ ಕಾಲಘಟ್ಟಗಳ ಕುರಿತೂ ಆಡಳಿತಾಧಿಕಾರಿಗಳ ಕುರಿತೂ ಕೋಟೆಗಳು ನಮಗೆ ಮಾಹಿತಿಗಳನ್ನು ನೀಡುತ್ತವೆ. ಬೇಕಲಕೋಟೆ, ಕಣ್ಣೂರು ಕೋಟೆ, ಪಾಲಕ್ಕಾಡ್ ಕೋಟೆ, ಅಂಜುತೆಂಙ್ ಕೋಟೆ ಮೊದಲಾದವುಗಳು ಕೇರಳದ ಪ್ರಧಾನ ಕೋಟೆಗಳಾಗಿವೆ. ನಿಮ್ಮೂರಿನಲ್ಲಿ ಇಂತಹ ಕೋಟೆಗಳಿವೆಯೇ?

ಕೋಟೆಗಳಂತೆಯೇ ಅರಮನೆಗಳೂ ಚಾರಿತ್ರಿಕ ಪ್ರಾಧಾನ್ಯವಿರುವವುಗಳಾಗಿವೆ. ಕೇರಳದ ಕೆಲವು ಪ್ರಧಾನ ಅರಮನೆಗಳ ಹೆಸರುಗಳನ್ನು ಕೆಳಗೆ ಕೊಡಲಾಗಿದೆ. ನಿಮಗೆ ತಿಳಿದಿರುವ ಅರಮನೆಗಳ ಹೆಸರುಗಳನ್ನು ಸೇರಿಸಿ ಪಟ್ಟಿಯನ್ನು ವಿಸ್ತರಿಸಿರಿ.

- ಪದ್ಮನಾಭಪುರ ಅರಮನೆ
- ಮಟ್ಟಾಂಚೇರಿ ಅರಮನೆ
- ಕಿಳಿಮಾನೂರ್ ಅರಮನೆ
- ಅರಯ್ಕಲ್ ಅರಮನೆ
- ಕೃಷ್ಣಪುರ ಅರಮನೆ
- 
- 



ಚಿತ್ರ 12.6

#### ಬೇಕಲಕೋಟೆ

ಬೇಕಲಕೋಟೆಯು 17-ನೇ ಶತಮಾನದಲ್ಲಿ ಕೇರಳದಲ್ಲಿ ನಿರ್ಮಿಸಿದ ಕೋಟೆಗಳಲ್ಲಿ ಅತ್ಯಂತ ದೊಡ್ಡಕೋಟೆಯಾಗಿದೆ. ಕಾಸರಗೋಡು ಜಿಲ್ಲೆಯ ಪಳ್ಳಿಕೆರೆ ಗ್ರಾಮದಲ್ಲಿರುವ ಈ ಕೋಟೆಯೊಳಗೆ ಶಸ್ತ್ರಾಗಾರಗಳು, ಸಮುದ್ರದೆಡೆಗೆ ತರೆದಿರುವ ಕಿಟಿಕಿಗಳು, ಸಮುದ್ರ ದಾರಿಯಾಗಿ ಬರುವ ಶತ್ರುಗಳನ್ನು ಎದುರಿಸುವ ತಾಣಗಳು, ರಹಸ್ಯಭೂಗತ ಕೋಣೆಗಳು, ಅಡಗು ತಾಣಗಳು, ಜಲ ಸಂಗ್ರಾಹಕಗಾರ ಮೊದಲಾದವುಗಳು ಇವೆ.

**ನಿಮ್ಮ ಜಿಲ್ಲೆಯಲ್ಲೂ ಕೋಟೆ ಮತ್ತು ಅರಮನೆಗಳು ಇರಬಹುದಲ್ಲವೆ? ಅವುಗಳ ಕುರಿತು ಒಂದು ಕಿರು ಚರಿತ್ರಾ ವಿವರಣೆ ಬರೆಯಿರಿ.**

### ನಾಣ್ಯಗಳು

ನಾಣ್ಯಗಳು ಚರಿತ್ರೆಯ ಪ್ರಧಾನ ಮೂಲಗಳಾಗಿವೆ. ನಿರ್ಮಾಣವಾದ ಕಾಲಘಟ್ಟದ ಅರ್ಥಿಕ, ರಾಜಕೀಯ, ಸಾಂಸ್ಕೃತಿಕ ಚರಿತ್ರೆಗಳ ಕುರಿತು ನಾಣ್ಯಗಳು ಜ್ಞಾನವನ್ನು ನೀಡುತ್ತವೆ. ನಾಣ್ಯಗಳ ಕುರಿತಾದ ಅಧ್ಯಯನವನ್ನು ನಾಣ್ಯಶಾಸ್ತ್ರ (Numismatics) ಎಂದು ಕರೆಯುತ್ತಾರೆ.

ಕೇರಳದ ವಿವಿಧ ಪ್ರದೇಶಗಳಿಂದ ಲಭಿಸಿದ ನಾಣ್ಯಗಳ ಚಿತ್ರಗಳನ್ನು ಕೆಳಗೆ ಕೊಡಲಾಗಿದೆ ಕಾಸು, ಅಚ್ಚು, ಪಣಂ,

ಅನಂತರಾಯನ್ ಪಣಂ, ಸುಲ್ತಾನ್ ಕಾಸ್ ಮೊದಲಾದ ಹೆಸರುಗಳಿಂದ ಇವುಗಳನ್ನು ಕರೆಯುತ್ತಾರೆ. ವಿವಿಧ ಕಾಲಗಳಲ್ಲಿ ಚಲಾವಣೆಗೆ ಬಂದ ಈ ನಾಣ್ಯಗಳಿಂದ ನಮಗೆ ಯಾವೆಲ್ಲಾ ವಿಚಾರಗಳನ್ನು ತಿಳಿಯಬಹುದು?

- ನಾಣ್ಯಗಳು ನಿರ್ಮಾಣವಾದ ವರ್ಷ
- ನಾಣ್ಯಗಳನ್ನು ನಿರ್ಮಿಸಿ ಜಾರಿಗೆ ತಂದ ಆಡಳಿತಾಧಿಕಾರಿಗಳು
- 
- 
- 




*ಚಿತ್ರಗಳು 12.7*

### ವೀರರಾಯನ್ ಪಣಂ



ಚಿತ್ರ 12.8

ವೀರರಾಯನ್ ಪಣಂ ಕೋಝಿಕೋಡನ್ನು ಆಳಿದ ಸಾಮೂದಿರಿ ರಾಜರ ಕಾಲದಲ್ಲಿ ಚಲಾವಣೆಯಲ್ಲಿದ್ದ ಹಣವಾಗಿದೆ. ಹಳೆಯವೀರ ರಾಯ, ಹೊಸವೀರ ರಾಯ ಎಂಬ ಎರಡು ರೀತಿಯ ನಾಣ್ಯಗಳು ಇದ್ದವು. ಈ ನಾಣ್ಯಗಳನ್ನು 1667-ರ ನಂತರ ತಯಾರಿಸಿ ಚಲಾವಣೆಗೆ ತರಲಾಯಿತು. ಚಿನ್ನದಿಂದ ನಿರ್ಮಿಸಿದ ಈ ನಾಣ್ಯಗಳನ್ನು ವಿದೇಶಿಯರು 'ಚಿನ್ನದ ನಾಣ್ಯ' ಎಂಬುದಾಗಿ ಕರೆಯುತ್ತಿದ್ದರು. ವೈಷ್ಣವರು ಬಳಸುತ್ತಿದ್ದ ನಾಮ, ಸೂರ್ಯನಚಿಹ್ನೆ, ಸಿಂಹದಚಿಹ್ನೆ ಇತ್ಯಾದಿಗಳನ್ನು ಇದರಲ್ಲಿ ಕಾಣಬಹುದು.

**'ಪುರಾತತ್ವಶಾಸ್ತ್ರದ ಮೂಲಗಳು' ಎಂಬ ವಿಷಯದ ಆಧಾರದಲ್ಲಿ ತರಗತಿಯಲ್ಲಿ ವಿಚಾರಗೋಷ್ಠಿ ನಡೆಸಿರಿ.**

## ಚಾರಿತ್ರಿಕ ಸ್ಮಾರಕಗಳು

ಕೆಳಗೆ ಕೊಟ್ಟಿರುವ ಚಿತ್ರಗಳನ್ನು ಗಮನಿಸಿರಿ. ಇವುಗಳು ಪ್ರತಿಯೊಂದೂ ಪ್ರದೇಶದ ಆರ್ಥಿಕ, ಸಾಂಸ್ಕೃತಿಕ ಇತಿಹಾಸಕ್ಕೆ ನಮ್ಮನ್ನು ಕೊಂಡೊಯ್ಯುವ ಮೂಲಗಳಾಗಿವೆ.



*ತಳಿ ಕ್ಷೇತ್ರ*



*ಮಿಶ್ಕಾಲ್ ಪಳ್ಳಿ*




*ದೇವಮಾತಾ ಕೆಥಡ್ರಲ್*



*ಕಡಲ ಸೇತುವೆ*

*ಚಿತ್ರಗಳು 12.9*

ಇವುಗಳು ಕೋಯಿಕ್ಕೋಡಿನ ಕೆಲವು ಚಾರಿತ್ರಿಕ ಸ್ಮಾರಕಗಳಾಗಿವೆ. ಸಾಮೂದಿರಿಯ ಕಾಲದಲ್ಲಿ ಪ್ರಸಿದ್ಧವಾದ ರೇವತಿಪಟ್ಟಾಂತಾನಂ ಎಂಬ ಪಂಡಿತಸಭೆಯು ತಳಿ ಕ್ಷೇತ್ರದಲ್ಲಿ ನಡೆಯುತಿತ್ತು. ಮಿಶ್ಕಾಲ್ ಪಳ್ಳಿಯು ಪೋರ್ಚುಗೀಸರಿಗೆ ವಿರುದ್ಧವಾಗಿದ್ದ ಸಾಮೂದಿರಿಯ ಪ್ರಧಾನ ಯುದ್ಧ ಕೇಂದ್ರವಾಗಿತ್ತು. 1513-ರಲ್ಲಿ ನಿರ್ಮಿಸಿದ ದೇವಮಾತಾ ಕೆಥಡ್ರಲ್ ಕೋಯಿಕ್ಕೋಡಿನಲ್ಲಿ ಪೋರ್ಚುಗೀಸರ ಅಸ್ತಿತ್ವದ ಸ್ಮಾರಕವಾಗಿದೆ. ಕಡಲ ಸೇತುವೆಗಳು ಶತಮಾನಗಳಿಂದ ಕೋಯಿಕ್ಕೋಡಿಗೆ ವಿವಿಧ ದೇಶಗಳೊಂದಿಗಿದ್ದ ವ್ಯಾಪಾರ ಸಂಬಂಧಗಳ ಕುರುಹಾಗಿದೆ.

ಇದೇ ರೀತಿ ಕೇರಳದಾದ್ಯಂತ ಅನೇಕ ಚಾರಿತ್ರಿಕ ಸ್ಮಾರಕಗಳನ್ನು ಕಾಣಬಹುದು. ಇಂತಹ ಚಾರಿತ್ರಿಕ ಸ್ಮಾರಕಗಳು ಪ್ರತಿಯೊಂದೂ ಹಳೆಯಕಾಲದ ಚರಿತ್ರೆಯನ್ನು ನಮ್ಮಲ್ಲಿ ಹೇಳುತ್ತವೆ.

**ಚಾರಿತ್ರಿಕ ಸ್ಮಾರಕಗಳು**

**ಜಿಲ್ಲೆಗಳನ್ನು ಗುರುತಿಸಿ ಬರೆಯಿರಿ**



ಕರುಮಾಡಿಕುಟ್ಟನ್ ಸ್ಮಾರಕ

------------------------------



ಚಂದ್ರಗಿರಿ ಕೋಟೆ

------------------------------



ಸಿನಗೋಗ್

------------------------------



ಪುನಲೂರು ತೂಗು ಸೇತುವೆ

------------------------------



ವ್ಯಾಗನ್ ದುರಂತ ಸ್ಮಾರಕ

------------------------------

*ಚಿತ್ರಗಳು 12.10*

## ಸಾಹಿತ್ಯದ ಮೂಲಗಳು

ಸಾಹಿತ್ಯ ಮೂಲಗಳು ಲಭ್ಯವಾದ ಚರಿತ್ರೆಯ ರಚನೆಯಲ್ಲಿ ಒಂದು ಪ್ರಧಾನ ಮೂಲವಾಗಿದೆ. ವ್ಯತ್ಯಸ್ಥವಾದ ವಸ್ತುವಿರುವ ಅನೇಕ ಸಾಹಿತ್ಯಕೃತಿಗಳು ಚರಿತ್ರೆಯ ಪುನರ್ ನಿರ್ಮಾಣಕ್ಕೆ ನಮಗೆ ಸಹಾಯಕವಾಗಿವೆ.

‘ಸಮುದ್ರದ ಮಗಳಾದ ಕನ್ಯಕ ಈ ನಗರದಲ್ಲಿ
ವಾಸಿಸುತ್ತಿದ್ದುದರಿಂದ ಸಾಗರಮಾತೆಯು ದೂರದ
ದ್ವೀಪಗಳಿಂದ ರತ್ನಗಳನ್ನು ಹೊತ್ತುಕೊಂಡು ಬರುವ
ಹಡಗುಗಳನ್ನು ಸಮುದ್ರದ ಅಲೆಗಳಿಂದ ತಳ್ಳಿ ತಳ್ಳಿ
ಕೋಝಿಕೋಡಿಗೆ ತಲುಪಿಸುತ್ತಿತ್ತು.’

-ಕೋಕಿಲ ಸಂದೇಶ

ಹದಿನೈದನೆ ಶತಮಾನದಲ್ಲಿ ಉದ್ದಂಡ ಶಾಸ್ತ್ರಿಗಳು ಬರೆದ ‘ಕೋಕಿಲ ಸಂದೇಶ’ ಎಂಬ ಸಂಸ್ಕೃತ ಸಂದೇಶ ಕಾವ್ಯದಲ್ಲಿ ಕೋಝಿಕೋಡಿನ ಕುರಿತು ಬರೆದ ಒಂದು ಶ್ಲೋಕದ ಆಶಯವನ್ನು ಓದಿ ನೋಡಿ.

**ಸಂಘಸಾಹಿತ್ಯ ಕೃತಿಗಳು**

ತಮಿಳಿನಲ್ಲಿ ಬರೆದ ಸಂಘಸಾಹಿತ್ಯ ಕೃತಿಗಳು ಕೇರಳದ ಪ್ರಾಚೀನ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಸಾಹಿತ್ಯ ಮೂಲಗಳಾಗಿವೆ. ಪದಿಟ್ಟುಪತ್ತ್, ಪುರನಾನೂರ್, ಅಕನಾನೂರ್, ಕುರುಂತೊಗೈ, ನಟ್ಟಿನೈ ಮೊದಲಾದವುಗಳು ಸಂಘ ಸಾಹಿತ್ಯ ಕೃತಿಗಳಾಗಿವೆ.

ಇದೇ ರೀತಿಯಲ್ಲಿ ವಿವಿಧ ಭಾಷೆಗಳಲ್ಲಿ ವಿವಿಧ ಕಾಲಘಟ್ಟದಲ್ಲಿ ರಚಿಸಿದ ಅನೇಕ ಸಾಹಿತ್ಯ ಕೃತಿಗಳು ನಮಗೆ ಲಭ್ಯವಿವೆ. ಈ ಕೃತಿಗಳು ರಚನೆಯಾದ ಕಾಲದ ಚರಿತ್ರೆಯನ್ನು ತಿಳಿದುಕೊಳ್ಳಲು ನಮಗೆ ಸಹಾಯಕವಾಗುತ್ತವೆ. ಉದಾಹರಣೆಗೆ, 12-15 ನೇ ಶತಮಾನದಲ್ಲಿ ರಚಿತವಾದ 'ಮಣಿಪ್ರವಾಳ ಕೃತಿಗಳು' ಆ ಕಾಲದ ನಾಡುವಾಳಿ ವ್ಯವಸ್ಥೆಯ ಕುರಿತೂ ಸಂಸ್ಕೃತಿಯ ಕುರಿತೂ ನಮಗೆ ಮಾಹಿತಿಯನ್ನು ನೀಡುತ್ತವೆ. ಮಲಬಾರಿನ 'ವಡಕ್ಕನ್ ಪಾಟ್ಟುಗಳು' ಮದ್ಯಕಾಲ ಚರಿತ್ರೆಯ ಸಾಮಾನ್ಯ ಜನರ ಜೀವನದ ಮೇಲೆ ಬೆಳಕು ಬೀರುತ್ತವೆ. 19-ನೇ ಶತಮಾನದಲ್ಲಿ ಚಂದು ಮೆನೊನ್ ಬರೆದ 'ಇಂದುಲೇಖ'ವು ಮಲಬಾರಿನ ಸಾಮಾಜಿಕ ಇತಿಹಾಸವನ್ನು ತಿಳಿಯಲು ಸಹಾಯಕವಾಗುತ್ತದೆ.

### ಪ್ರವಾಸ ಟಿಪ್ಪಣಿಗಳು

'ಪ್ರಪಂಚದ ಎಲ್ಲಾ ಮೂಲೆಗಳಿಂದ ವ್ಯಾಪಾರಿ ಹಡಗುಗಳು ಅಮೂಲ್ಯವಾದ ಸರಕುಗಳೊಂದಿಗೆ ಇಲ್ಲಿಗೆ ಬಂದು ಆ ಸರಕುಗಳನ್ನು ಸುಲಭವಾಗಿ ಮಾರಾಟ ಮಾಡುತ್ತಿದ್ದರು. ನಗರದ ರಕ್ಷಣಾ ಕಾರ್ಯಚರಣೆಗಳು ಮತ್ತು ನ್ಯಾಯಾಡಳಿತವನ್ನು ಅತ್ಯಂತ ಪರಿಣಾಮಕಾರಿಯಾಗಿ ನಡೆಸಲಾಗುತ್ತಿದೆ. ಆದುದರಿಂದ ವಿದೇಶಗಳಿಂದ ಸರಕುಗಳನ್ನು ತರುವ ವ್ಯಾಪಾರಿಗಳಿಗೆ ಯಾವುದೇ ಭಯವಿಲ್ಲ. ಮಾರುಕಟ್ಟೆಯ ಸಂಪೂರ್ಣ ಜವಾಬ್ದಾರಿಯು ರಾಜನಿಗಾಗಿದೆ. ಮಾರುಕಟ್ಟೆಗೆ ತಲುಪುವ ಸರಕುಗಳ ನಲ್ವತ್ತರಲ್ಲಿ ಒಂದು ಭಾಗವನ್ನು ಸುಂಕವಾಗಿ ಪಾವತಿಸಬೇಕು. ಯಾವುದೇ ವ್ಯಾಪಾರಿಯು ಮರಣ ಹೊಂದಿದರೆ ಅಥವಾ ಸರಕುಗಳನ್ನು ತುಂಬಿಸಿದ ಹಡಗು ಮುರಿದು ಅದರಲ್ಲಿರುವ ಸರಕುಗಳು ಬಂದರಿಗೆ ತಲುಪಿದರೆ ಆ ಸರಕುಗಳಿಗೆ ಸಂಬಂಧಿಸಿ ಯಾವುದೇ ವಂಚನೆ ಉಂಟಾಗುವುದಿಲ್ಲ. ಕರಿ ಮೆಣಸು ಇಲ್ಲಿಂದ ರಫ್ತಾಗುವ ಪ್ರಧಾನ ವಸ್ತುವಾಗಿದೆ. ಇಲ್ಲಿಯ ಜನರು ಸಮುದ್ರ ವ್ಯಾಪಾರದಲ್ಲಿ ಸಮರ್ಥರಾಗಿದ್ದರು.'

*ಪರ್ಷಿಯನ್ ಯಾತ್ರಿಕ ಅಬ್ದುರ್ ರಜಾಕ್‌ನ ಪ್ರವಾಸ ಟಿಪ್ಪಣಿಯಿಂದ*

ಮೇಲೆ ಕೊಟ್ಟಿರುವ ಪ್ರವಾಸ ಟಿಪ್ಪಣಿಯನ್ನು ಓದಿದಿರಲ್ಲವೇ?

ಇದು ಹದಿನೈದನೇ ಶತಮಾನದಲ್ಲಿ ಕೋಝಿಕೋಡ್‌ಗೆ ಬಂದ ಪರ್ಶಿಯನ್ ಯಾತ್ರಿಕ ಅಬ್ದುರ್ ರಜಾಕ್ ಕೋಝಿಕೋಡ್ ಬಂದರಿನ ಕುರಿತು ಹೇಳುವ ವಿವರಣೆಯಾಗಿದೆ. ಈ ವಿವರಣೆಗಳಿಂದ ಯಾವೆಲ್ಲ ವಿಚಾರಗಳನ್ನು ನಿಮಗೆ ತಿಳಿಯಲು ಸಾಧ್ಯವಾಗುತ್ತದೆ?

- 
- 
- 

ಪ್ರವಾಸ ಟಿಪ್ಪಣಿಗಳು ಪ್ರಾದೇಶಿಕ ಚರಿತ್ರೆ ರಚನೆಯಲ್ಲಿ ಪ್ರಧಾನ ಪಾತ್ರವನ್ನು ವಹಿಸುತ್ತವೆ. ಪ್ರತ್ಯೇಕ ಸ್ಥಳಗಳು, ಘಟನೆಗಳು, ಸಂಸ್ಕೃತಿಗಳು ಮೊದಲಾದವುಗಳ ಪ್ರತ್ಯಕ್ಷ ಅನುಭವಗಳನ್ನು ನೀಡಲು ಸಂಚಾರ ಟಿಪ್ಪಣಿಗಳಿಗೆ ಸಾಧ್ಯವಾಗುತ್ತದೆ. ಒಂದು ಪ್ರದೇಶದ ಚರಿತ್ರೆ, ಭೌಗೋಳಿಕತೆ, ಆರ್ಥಿಕತೆ, ಸಾಮಾಜಿಕ ಜೀವನ ಮೊದಲಾದವುಗಳ ಮೇಲೆ ಇವು ಬೆಳಕು ಚೆಲ್ಲುತ್ತವೆ.

| ಕೇರಳದ ಕುರಿತು ಉಲ್ಲೇಖಿಸಿರುವ ಕೆಲವು ವಿದೇಶೀ ಯಾತ್ರಿಕರು | |
|---|---|
| ಯಾತ್ರಿಕರು | ದೇಶ |
| ಮೆಗಸ್ತನೀಸ್ | ಗ್ರೀಸ್ |
| ಸುಲೈಮಾನ್ | ಪರ್ಷಿಯಾ |
| ಅಬ್ದುರ್ ರಸಾಕ್ | ಪರ್ಷಿಯಾ |
| ಮಾರ್ಕೋಪೋಲೋ | ವೆನೀಸ್ |
| ಇಬನ್ ಬತೂತ | ಮೊರೊಕ್ಕೋ |
| ನಿಕೋಲೋ ಕೋಂಟಿ | ವೆನೀಸ್ |
| ಮಾಹ್ವಾನ್ | ಚೈನಾ |
| ಬಾರ್ಬೋಸ | ಪೋರ್ಚುಗಲ್ |



*ಚಿತ್ರ 12.11*
*ನಿಕೋಲೋ ಕೋಂಟಿ*



*ಚಿತ್ರ 12.12*
*ಇಬನ್ ಬತೂತ*

**ಶಾಲಾ ಗ್ರಂಥಾಲಯದಿಂದ ಪ್ರವಾಸ ಸಾಹಿತ್ಯಕೃತಿಗಳನ್ನು ಪಡೆದುಕೊಂಡು ಕೇರಳಕ್ಕೆ ಸಂಬಂಧಿಸಿದ ಭಾಗವನ್ನು ಓದಿ ತರಗತಿಯಲ್ಲಿ ಚರ್ಚೆಯನ್ನು ಆಯೋಜಿಸಿರಿ.**

### ಆತ್ಮಕಥೆಗಳು ಜೀವನ ಚರಿತ್ರೆಗಳು

ಹೆಚ್ಚಿನ ಆತ್ಮಕಥೆಗಳು ಮತ್ತು ಜೀವನ ಚರಿತ್ರೆಗಳು ಚರಿತ್ರೆರಚನೆಗೆ ಉಪಯೋಗಿಸುವ ಸಾಹಿತ್ಯಮೂಲಗಳಾಗಿವೆ.




*ಚಿತ್ರ 12.13*

“ಅಂಬಳಪುಝ ಶಾಲೆಗೆ ಹೋದಾಗ ನಾನು ಮೊದಲಬಾರಿಗೆ ಉಡುಪನ್ನು ಧರಿಸಿದ್ದು, ಹತ್ತಿಬಟ್ಟೆಯಿಂದ ಎರಡು ಉಡುಪುಗಳನ್ನು ಹೊಲಿಸಿದೆ... ಅಂದು ನಮ್ಮೂರಿನಲ್ಲಿ ಬಟ್ಟೆಗೆ ಇಸ್ತ್ರಿ ಹಾಕುವ ವ್ಯವಸ್ಥೆ ಇರಲಿಲ್ಲ. ಗಂಜಿ ನೀರಿನಲ್ಲಿ ನೀಲಿ ಸೇರಿಸಿ ಬಟ್ಟೆಯನ್ನು ಹಿಂಡಿ ಒಣಗಿಸುತ್ತಿದ್ದರು. ನಂತರ ಉರುಟುಕೋಲಿನಿಂದ ಸುತ್ತಿ ಬಟ್ಟೆಯನ್ನು ಮಡಚಿಡುತ್ತಿದ್ದರು... ತಿರುವನಂತಪುರದ ಕಾನೂನು ಕಾಲೇಜಿಗೆ ಸೇರಿದ ನಂತರ ಮೊತ್ತಮೊದಲು ಇಸ್ತ್ರಿ ಹಾಕಿದ ಅಂಗಿಯನ್ನು ಧರಿಸಿದೆನೆಂದು ತೋರುತ್ತದೆ. ಆ ಕಾಲದಲ್ಲಿ ತಕಝಿಯಲ್ಲಿ ಸಾಬೂನು ಅಪೂರ್ವ ವಸ್ತುವಾಗಿತ್ತು. ತೆಂಗಿನ ಗರಿಯನ್ನು ಸುಟ್ಟ ಬೂದಿಯನ್ನು ಸೋಸಿ ತೆಗೆದು ಅದರಲ್ಲಿ ಬಟ್ಟೆಯನ್ನು ಬಿಳುಪುಗೊಳಿಸುತ್ತಿದ್ದರು.”

(ಆಕರ: ಆತ್ಮಕಥೆ ತಗಝಿ. ಪುಟ 47)

ಮೇಲೆ ನೀಡಿರುವಂತಹ ಆತ್ಮಕಥೆಗಳು, ಜೀವನಚರಿತ್ರೆಗಳು ಅದನ್ನು ಬರೆದ ಪ್ರದೇಶದ/ಕಾಲದ ವಿವಿಧ ವಲಯಗಳ ಕುರಿತು ವಿವರಣೆಗಳನ್ನು ನೀಡುವವುಗಳಾಗಿವೆ.

ತರಗತಿ ಗ್ರಂಥಾಲಯದಲ್ಲಿ ಲಭ್ಯವಿರುವ ಆತ್ಮಕಥೆಗಳು ಜೀವನ ಚರಿತ್ರೆಗಳನ್ನು ಪರಿಶೋಧಿಸಿ ಚರಿತ್ರೆ ರಚನೆಗೆ ಸಹಾಯಕವಾಗುವ ಭಾಗಗಳನ್ನು ಕಂಡುಕೊಂಡು ಮಂಡಿಸಿರಿ.

## ದಿನ ಪತ್ರಿಕೆಗಳು


ದೇಶದಲ್ಲಿ ಸ್ವಾತಂತ್ರ್ಯದ ಸೂರ್ಯೋದಯ

5 ನಿಮಿಷದಲ್ಲಿ 2 ದೇಶಕ್ಕೆ ಸ್ವಾತಂತ್ರ್ಯ!

ಮಧ್ಯರಾತ್ರಿಯೇಕೆ ಸ್ವಾತಂತ್ರ್ಯ ಕೊಟ್ಟರು?

അർധരാത്രിയിൽ സ്വാതന്ത്ര്യം

*ಚಿತ್ರಗಳು 12.14*

ದೈನಂದಿನ ಘಟನೆಗಳನ್ನು ತಿಳಿಯಲು ಇಂದು ನಾವು ದಿನ ಪತ್ರಿಕೆಗಳು, ದೃಶ್ಯಮಾಧ್ಯಮಗಳು, ನವಮಾಧ್ಯಮಗಳು ಮೊದಲಾದವುಗಳನ್ನು ಆಶ್ರಯಿಸುತ್ತಿದ್ದೇವೆ. ಆದರೆ ಈ ಪತ್ರಿಕೆಗಳು ಕಾಲಕ್ರಮೇಣ ಇತಿಹಾಸವನ್ನು ತಿಳಿಯಲು ಇರುವ ಪ್ರಧಾನ ಮಾಧ್ಯಮಗಳಾಗಿ ಬದಲಾಗುತ್ತವೆ. ಭಾರತದಲ್ಲಿ ವಿದೇಶಿ ಆಧಿಪತ್ಯದ ಇತಿಹಾಸವನ್ನು ತಿಳಿಯಲು ಇತಿಹಾಸ ಅಧ್ಯಯನ ವಿದ್ಯಾರ್ಥಿಗಳು ಉಪಯೋಗಿಸುವ ಪ್ರಧಾನ ಮೂಲಗಳಲ್ಲಿ ಆ ಕಾಲದ ದಿನಪತ್ರಿಕೆಗಳು ಒಂದಾಗಿವೆ. ಕೇರಳದ ರಾಜಕೀಯ, ಸಾಮಾಜಿಕ, ಆರ್ಥಿಕ ಇತಿಹಾಸದ ಪೂರ್ತಿ ವಿಷಯಗಳನ್ನು ತಿಳಿಯಲು ದಿನ ಪತ್ರಿಕೆಗಳು ನಮಗೆ ಸಹಾಯಕವಾಗುತ್ತವೆ.

ನಿಮ್ಮ ಪ್ರದೇಶದ ಕುರಿತು/ಅಲ್ಲಿ ನಡೆದ ಘಟನೆಗಳ ಕುರಿತು ಪತ್ರಿಕೆಗಳಲ್ಲಿ ಬಂದ ವರದಿಗಳನ್ನು ಸಂಗ್ರಹಿಸಿ ಸಂಚಿಕೆ ತಯಾರಿಸಿ.

## ಪ್ರಾದೇಶಿಕ ಚರಿತ್ರೆ ರಚನೆಯಡೆಗೆ

ಒಂದು ನಿಶ್ಚಿತ ಪ್ರದೇಶದ ಹಿಂದಿನ ಕಾಲದ ಘಟನೆಗಳ ಕುರಿತಾದ ಅಧ್ಯಯನವು ಪ್ರಾದೇಶಿಕ ಚರಿತ್ರೆಯಾಗಿದೆ. ನಾವು ಇದುವರೆಗೆ ಪರಿಚಯಿಸಿಕೊಂಡ ಐತಿಹಾಸಿಕ ಮೂಲಗಳು ಪ್ರಧಾನವಾಗಿಯೂ ಮುಖ್ಯವಾಹಿನಿಯ ಚರಿತ್ರೆ ರಚನೆಗೆ ಸಹಾಯಕವಾಗುವವುಗಳಾಗಿವೆ. ಪ್ರಾದೇಶಿಕ ಚರಿತ್ರೆ ರಚನೆಗೆ ನಮಗೆ ಸಹಾಯಕವಾದ ಇತರ ಮೂಲಗಳನ್ನು ತಿಳಿದುಕೊಳ್ಳೋಣ.



## ಪ್ರಾದೇಶಿಕ ನಿರೀಕ್ಷಣೆ

ಪ್ರಾದೇಶಿಕ ಚರಿತ್ರೆ ರಚನೆಯು ಒಂದು ಸಣ್ಣ ಪ್ರದೇಶ ಅಥವಾ ಘಟನೆಯ ಸೂಕ್ಷ್ಮ ಅಧ್ಯಯನವಾಗಿದೆ. ಒಂದು ಪ್ರದೇಶದ ಸೂಕ್ಷ್ಮತೆಗಳನ್ನು ತಿಳಿಯಲು ಸ್ಥಳೀಯ ನಿರೀಕ್ಷಣೆ ನಮಗೆ ಸಹಾಯಕವಾಗುತ್ತದೆ. ಒಂದು ಸ್ಥಳೀಯ ಸಮಾಜವು ವಾಸಿಸುವ ಭೂಪ್ರದೇಶ, ಅಲ್ಲಿಯ ಭೌಗೋಳಿಕ ವಿಶೇಷತೆಗಳು, ದಿಕ್ಕು, ಸಸ್ಯ ಮತ್ತು ಪ್ರಾಣಿ ಸಂಕುಲಗಳು, ಸಿಹಿನೀರ ತಟಾಕಗಳು, ಕೃಷಿ ಪದ್ಧತಿ ಮೊದಲಾದ ವೈವಿಧ್ಯಗಳನ್ನು ತಿಳಿದು ಪ್ರಾದೇಶಿಕ ನಿರೀಕ್ಷಣೆ ಮಾಡುವುದು ಅತ್ಯಗತ್ಯವಾಗಿದೆ.




ನೀವು ವಾಸಿಸುವ ಪ್ರದೇಶದಲ್ಲಿ ನಿರೀಕ್ಷಣೆ ಮಾಡಿ ಕೆಳಗೆ ಕೊಟ್ಟಿರುವ ಪಟ್ಟಿಯನ್ನು ಪೂರ್ತಿಗೊಳಿಸಿರಿ.

| | |
|---|---|
| ಪ್ರದೇಶದ ಹೆಸರು : | ತಾಲೂಕು : |
| ಗ್ರಾಮ : | ಜಿಲ್ಲೆ : |

| | |
|---|---|
| ಮಣ್ಣಿನ ವಿಧಗಳು : | ಸಂಸ್ಥೆಗಳು : |
| ಸಸ್ಯಜಾಲಗಳು : | ಸಾರಿಗೆ-ವಾರ್ತಾವಿನಿಮಯ |
| ಪ್ರಾಣಿ ಸಂಕುಲ : | ವಿಧಾನಗಳು : |
| ಕೃಷಿ ತಳಿಗಳು : | ಆರಾಧನಾಲಯಗಳು : |
| ಕೃಷಿ ರೀತಿಗಳು : | ಹಬ್ಬಗಳು : |
| ವೃತ್ತಿ : | ಆಹಾರ ರೀತಿಗಳು : |
| ಜಲಮೂಲಗಳು : | ವಸ್ತ್ರ ಧಾರಣೆ : |
| | ಮನೋರಂಜನೆಗಳು : |
| | ಸಾಹಿತ್ಯ ಕೃತಿಗಳು : |
| | ಕಲೆಗಳು : |

## ನೆನಪುಗಳು (ಮೌಖಿಕಗಳು)

ಪ್ರತ್ಯಕ್ಷ ಅನುಭವಗಳುಳ್ಳ ಪೀಳಿಗೆಯಿಂದ ಸ್ವೀಕರಿಸುವ ಹೇಳಿಕೆಗಳನ್ನು ನೆನಪುಗಳು ಅಥವಾ ಮೌಖಿಕ ಚರಿತ್ರೆಗಳು ಎಂದು ಕರೆಯುತ್ತಾರೆ. ಪ್ರಾದೇಶಿಕ ಚರಿತ್ರೆ ರಚಿಸಲು ಆರಿಸುವ ಸ್ಥಳದ ಹಿರಿಯರ ನೆನಪುಗಳನ್ನು ಸಂಗ್ರಹಿಸುವುದು ಅತ್ಯಗತ್ಯವಾಗಿದೆ. ಒಂದು ಪ್ರದೇಶಕ್ಕೆ ಸಂಬಂಧಿಸಿದ ಸಂಸ್ಥೆಗಳು, ಸಾರಿಗೆ ಮಾರ್ಗಗಳು, ವಸ್ತ್ರ ಧಾರಣೆಯ ರೀತಿಗಳು, ಆಹಾರ ಪದ್ಧತಿಗಳು, ಮೌಖಿಕ ವಿವರಣೆಗಳು ಮೊದಲಾದವುಗಳು ಚರಿತ್ರೆ ರಚನೆಗೆ ಅಗತ್ಯವಾದ ಮಾಹಿತಿಗಳನ್ನು ಸಂಗ್ರಹಿಸಲು ಅನಿವಾರ್ಯವಾಗಿವೆ. ಇವುಗಳ ಕುರಿತಾದ ವ್ಯಕ್ತಿಗಳ ನೆನಪುಗಳು ಚರಿತ್ರೆಯನ್ನು ಪುನರ್ ನಿರ್ಮಿಸಲು ನಮಗೆ ಸಹಾಯಕವಾಗುತ್ತವೆ. ಸಮಾಜದಲ್ಲಿ ನೆಲೆನಿಂತಿದ್ದ ಸಂಪ್ರದಾಯಗಳು ನಂತರದ ಕಾಲದಲ್ಲಿ ಉಂಟಾದ ಬದಲಾವಣೆಗಳನ್ನು ವಿಶ್ಲೇಷಿಸಲು ಈ ನೆನಪುಗಳು ಸಹಾಯಕವಾಗುತ್ತವೆ. ನೆನಪಿನ ಮೂಲಗಳನ್ನು ಇತರ ಮೂಲಗಳೊಡನೆ ಒಟ್ಟು ಸೇರಿಸಿ ಪರಿಶೋಧಿಸಿ ವಿಶ್ವಾಸಾರ್ಹತೆಯನ್ನು ಖಚಿತಪಡಿಸಿಕೊಳ್ಳುವುದು ಅತ್ಯಗತ್ಯ.

**ನಿಮ್ಮ ಮನೆಯಲ್ಲಿ/ಪ್ರದೇಶದ ಹಿರಿಯರಲ್ಲಿ ಮಾಹಿತಿಗಳನ್ನು ಕೇಳಿ ತಿಳಿದು ಪ್ರಾದೇಶಿಕ ಮಾಹಿತಿ ಪಟ್ಟಿಯನ್ನು ಪೂರ್ತಿಗೊಳಿಸಿರಿ.**

| | ಹಳತು | ಹೊಸತು |
|---|---|---|
| ಪ್ರದೇಶದ ಹೆಸರು | | |
| ಸಂಸ್ಥೆ | | |
| ಉದ್ಯೋಗ | | |
| ಕೃಷಿ | | |
| ವಸ್ತ್ರಧಾರಣೆ | | |
| ಆಹಾರ ಪದ್ಧತಿಗಳು | | |
| ರಸ್ತೆ ಸಾರಿಗೆ | | |

## ಸ್ಥಳ ನಾಮ ಚರಿತ್ರೆ

ನಿಮ್ಮ ಊರಿಗೆ ಆ ಹೆಸರು ಹೇಗೆ ಬಂತು?

ಉದಾಹರಣೆಗೆ ಕೋಝಿಕೋಡ್ ಎಂಬ ಹೆಸರು ಹೇಗೆ ಬಂತು 'ಕೋಯಿಲ್' (ಅರಮನೆ) ಎಂದು 'ಕೋಟಾ' ಎಂಬ ಎರಡು ಪದಗಳು ಸೇರಿ ಆದ 'ಕೊಯಿಲ್ ಕೋಟಾ' ಎಂಬುದು ಹಳೆಯ ಹೆಸರಾಗಿತ್ತು. ಕೊಯಿಲ್ ಎಂದರೆ ಕೊಟ್ಟಾರ (ಅರಮನೆ) ಎಂದು ಅರ್ಥ. ಕೋಯಿಲ್ ಕೋಟಾ ಎಂದರೆ ಕೋಟೆಯಿಂದ ಸಂರಕ್ಷಿಸಲ್ಪಟ್ಟ ಅರಮನೆ ಎಂದರ್ಥ. ಆನಂತರ ಇದು ಕೊಝಿಕೋಡ್ ಎಂಬುದಾಗಿ ಬದಲಾಯಿತು ಎಂದು ಚರಿತ್ರೆಗಾರರು ಹೇಳುತ್ತಾರೆ. ತ್ರಿಶೂರು, ಕಣ್ಣೂರು, ತಲಶೇರಿ, ತಂಗಶೇರಿ ಮೊದಲಾದ ಸ್ಥಳನಾಮಗಳನ್ನು ಗಮನಿಸಿ. ಕೇರಳದಾದ್ಯಂತ 'ಊರು' ಅಥವಾ 'ಚೇರಿ' ಎಂಬ ವಾಕ್ಯದಿಂದ ಕೊನೆಗೊಳ್ಳುವ ಅನೇಕ ಸ್ಥಳಗಳಿವೆ. ಇವುಗಳಲ್ಲಿ ಹೆಚ್ಚಿನ ಸ್ಥಳನಾಮಗಳ ರೂಪೀಕರಣದಲ್ಲಿ ಭೌಗೋಳಿಕ ಪ್ರತ್ಯೇಕತೆಗಳು ಪ್ರಭಾವ ಬೀರುತ್ತವೆ.

**ನಿಮ್ಮ ಊರಿಗೆ ಆ ಹೆಸರು ಬಂದ ಹಿನ್ನಲೆಯ ಕುರಿತು ತಿಳಿದು ಟಿಪ್ಪಣಿ ತಯಾರಿಸಿ ಸ್ಕೂಲ್‌ವಿಕ್ಕಿಯಲ್ಲಿ ಸೇರಿಸಿರಿ.**

## ಕುಟುಂಬ ಚರಿತ್ರೆ

ಕುಟುಂಬಗಳ ಚರಿತ್ರೆಯು ಪ್ರಾದೇಶಿಕ ಚರಿತ್ರೆ ರಚನೆಯಲ್ಲಿ ಪ್ರಧಾನ ಪಾತ್ರ ವಹಿಸುವ ಒಂದು ಸಾಹಿತ್ಯ ಮೂಲವಾಗಿದೆ. ಒಂದು ಗ್ರಾಮದ, ಪ್ರದೇಶದ ಬೆಳವಣಿಗೆಯಲ್ಲಿ ವ್ಯಕ್ತಿಗಳ ಭಾಗವಹಿಸುವಿಕೆ, ಕೊಡುಗೆಗಳು ವಸ್ತು ನಿಷ್ಠತೆಯನ್ನು ಖಾತರಿಪಡಿಸಿ ಸಂಗ್ರಹಿಸುವುದು ಪ್ರಾದೇಶಿಕ ಚರಿತ್ರೆ ಅನ್ವೇಷಕನ ಜವಾಬ್ದಾರಿಯಾಗಿದೆ.

## ಅಧಿಕೃತ ದಾಖಲೆಗಳು

ಕೆಳಗೆ ಕೊಟ್ಟಿರುವ ವಿವರಣೆಯನ್ನು ಗಮನಿಸಿ.

**"ಉಪ್ಪು ಕಾನೂನು ಉಲ್ಲಂಘನೆ"**

*1930 ಮೇ 17-ರಂದು ಬೃಹತ್ ಜನಸ್ತೋಮದ ನೇತೃತ್ವದಲ್ಲಿ 27 ಸ್ಥಳಗಳಲ್ಲಿ ಕೋಝಿಕೋಡ್ ಕರಾವಳಿ ಪ್ರದೇಶದಲ್ಲಿ ಬ್ರಿಟಿಷರು ಜಾರಿಗೊಳಿಸಿದ ಉಪ್ಪಿನ ಕಾನೂನನ್ನು ಉಲ್ಲಂಘಿಸಲಾಯಿತು. ಕೋಝಿಕೋಡಿನ ಗುಜರಾತಿ ನಿವಾಸಿಗಳು ಆಸಕ್ತಿಯಿಂದ ಈ ಚಟುವಟಿಕೆಗಳಲ್ಲಿ ಭಾಗವಹಿಸಿದರು. ತಿರುವಾಂಕೂರಿನಿಂದ ಬಂದ ಸತ್ಯಾಗ್ರಹ ಸ್ವಯಂಸೇವಕರೂ ಇವರೊಂದಿಗೆ ಸೇರಿಕೊಂಡರು. ಸಮುದ್ರ ನೀರನ್ನು ಬತ್ತಿಸಿ ತಯಾರಿಸಿದ ಉಪ್ಪಿನೊಂದಿಗೆ ಕಾನೂನು ಉಲ್ಲಂಘಿಸಿದ ಜನತೆಯು ಬ್ರಿಟಿಷರ ವಿರುದ್ಧ ಘೋಷಣೆಗಳನ್ನು ಕೂಗಿಕೊಂಡು ಮೆರವಣಿಗೆ ನಡೆಸಿದರು. ಅವರು ಉಪ್ಪು ತಯಾರಿಸಲು ಉಪಯೋಗಿಸಿದ ಸಾಮಾಗ್ರಿಗಳನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡಿದ್ದರು. ಕರಾವಳಿ ಪ್ರದೇಶದಲ್ಲಿ ನಡೆದ ಉಪ್ಪು ಸತ್ಯಾಗ್ರಹ ಪ್ರತಿಭಟನೆಯನ್ನು ಪೋಲೀಸರು ಕ್ರೂರವಾಗಿ ಧಮನಿಸಿದರು. ಸ್ವಾತಂತ್ರ್ಯ ಹೋರಾಟದ ಧ್ವಜವನ್ನು ಪೋಲಿಸರಿಂದ ರಕ್ಷಿಸಲು ಪಿ. ಕೃಷ್ಣ ಪಿಳ್ಳೆಯೂ, ಅಬ್ದುಲ್ ರಹಮಾನ್ ಸಾಹೆಬ್ ಐತಿಹಾಸಿಕವಾಗಿ ಪ್ರತಿಭಟನೆಯನ್ನು ನಡೆಸಿದರು.*

*(HFM files, No. 103, Tamil Nadu State Archives, Egmore)*

ತಮಿಳುನಾಡು ಪುರಾತನ ದಾಖಲೆಗಳ ಸಂಗ್ರಹಾಲಯದಲ್ಲಿ ಸಂರಕ್ಷಿಸಿರುವ (Archives) ಈ ದಾಖಲೆಯು ಕೇರಳದ ಸ್ವಾತಂತ್ರ್ಯ ಹೋರಾಟದ ಮೇಲೆ ಬೆಳಕು ಚೆಲ್ಲುತ್ತದೆ. ಈ ದಾಖಲೆಯಲ್ಲಿ ಯಾವೆಲ್ಲಾ ವಿಷಯಗಳನ್ನು ದಾಖಲಿಸಲಾಗಿದೆ ?

**ಕೆಳಗೆ ಕೊಟ್ಟಿರುವುದು ಪ್ರಧಾನವಾದ ಅಧಿಕೃತ ದಾಖಲೆಗಳಾಗಿವೆ.**

- ಜನಗಣತಿ ವರದಿ
- ಗಜೆಟ್ ದಾಖಲೆಗಳು
- ನ್ಯಾಯಲಯದ ದಾಖಲೆಗಳು
- ಸಮೀಕ್ಷಾ ವರದಿ
- ತೆರಿಗೆ ದಾಖಲೆಗಳು
- ಪೊಲೀಸ್ ವರದಿ
- ಗ್ರಾಮಪಂಚಾಯತುಗಳ ಅಬಿವೃದ್ಧಿ ದಾಖಲೆಗಳು

ಬ್ರಿಟಿಷರ ವಸಾಹತುಶಾಹಿ ಆಡಳಿತದ ವಿರುದ್ಧ ನಡೆದ ಹೋರಾಟಗಳು ಮತ್ತು ದಂಗೆಗಳ ವಿವರಗಳನ್ನು ನಾವು ನ್ಯಾಯಾಲಯದ ದಾಖಲೆಗಳಿಂದ ತಿಳಿದುಕೊಳ್ಳುತ್ತೇವೆ. ಒಂದು ಪ್ರದೇಶದ ಜನಸಂಖ್ಯೆ, ಜನವಿಭಾಗಗಳು ಮೊದಲಾದವುಗಳನ್ನು ತಿಳಿದುಕೊಳ್ಳಲು ನಾವು ಜನಗಣತಿ ದಾಖಲೆಗಳನ್ನು ಅವಲಂಬಿಸುತ್ತೇವೆ.

### ಕ್ರಯಚೀಟಿ ದಾಖಲೆಗಳು

ಕ್ರಯಚೀಟಿ ದಾಖಲೆಗಳು ಪ್ರಾದೇಶಿಕ ಚರಿತ್ರೆ ರಚನೆಗೆ ಆಸ್ತಿಯಾಗಿವೆ. ಇವುಗಳಿಂದ ವೈಯಕ್ತಿಕ ಮಾಹಿತಿ, ಸ್ವಂತ ಆಸ್ತಿ ಮೊದಲಾದವುಗಳ ಕುರಿತು ತಿಳಿಯಲು ಸಾಧ್ಯವಿದೆ.

**ನಿಮ್ಮ ಆಸ್ತಿಯ ದಾಖಲೆಗಳು/ಕ್ರಯ ಚೀಟಿಯನ್ನು ನೋಡಿ ತಿಳಿದು ಅದರಲ್ಲಿರುವ ಮಾಹಿತಿಗಳನ್ನು ಬರೆಯಿರಿ.**

### ಊರ ತಿಳುವಳಿಕೆಗಳು, ಹಾಡುಗಳು, ಆಚಾರ ಅನುಷ್ಠಾನಗಳು, ಕಲಾರೂಪಗಳು

ಪ್ರಾದೇಶಿಕ ಚರಿತ್ರೆ ರಚನೆಗೆ ಹೆಚ್ಚು ಸಹಾಯಕವಾಗುವ ಮೂಲಗಳಲ್ಲಿ ಊರ ತಿಳುವಳಿಕೆಗಳು, ಹಾಡುಗಳು, ಆಚಾರ ಅನುಷ್ಠಾನಗಳು ಪ್ರಧಾನವಾಗಿವೆ. ಅಂಗಡಿ ಸಂತೆಗಳಲ್ಲಿ ನಡೆಯುವ ವ್ಯವಹಾರಗಳ ಕುರಿತಾದ ಹಾಡುಗಳು ಊರಿನ ಪ್ರತ್ಯೇಕತೆಗಳನ್ನು ಸೂಚಿಸುತ್ತವೆ.

*ಕೂರನ್, ಚೋಝುನ್, ಪಝುವರಿ, ಕುರಕೊಂಜಣಂ, ವೆಣ್ಣಕಣ್ಣನ್,*
*ಮೋಡನ್, ಕಾಡನ್, ಕುರುವ, ಕೊಡಿಯನ್,*
*ಪಂಕಿ, ಪೊಂಗಾಲಿ, ಚೆನ್ನಲ್, ಆನಕೋಡನ್, ಕಿಳಿಯಿರ ಕನಂಜಾರಿಯನ್*
*ವೀರವಿತ್ತನ್. ಕಾಣಾಂ ಮಟ್ಟುಂ ಪಲವಿಧ ಮೂಡನ್. ನೆಲ್ಲು ಕಲ್ಯಾಣ ಕಿರ್ತೇ*
*-ಉಣ್ಣಿನೀಲಿ ಸಂದೇಶ*

ಈ ವಿವರಣೆಯಿಂದ ಯಾವೆಲ್ಲಾ ಪ್ರಾದೇಶಿಕ ಭತ್ತದ ಬೀಜಗಳ ಕುರಿತಾದ ಸೂಚನೆಗಳು ನಮಗೆ ಲಭಿಸುತ್ತವೆ ?

ಪ್ರಾಚೀನ ದಾಖಲೆಗಳು ಮತ್ತು ಐತಿಹಾಸಿಕ ಸ್ಮಾರಕಗಳ ಹೊರತಾಗಿ ನೆನಪುಗಳು, ಹಾಡುಗಳು, ಗಾದೆಗಳು, ಕಥೆಗಳು, ಬಾಯಿ ಮಾತುಗಳು, ಆಮಂತ್ರಣ ಪತ್ರಿಕೆಗಳು, ಕರಪತ್ರಗಳು ಇವುಗಳನ್ನೆಲ್ಲಾ ಮೂಲಗಳಾಗಿ ಬರೆಯುವ ಚರಿತ್ರೆಯೇ ಪ್ರಾದೇಶಿಕ ಚರಿತ್ರೆಯಾಗಿದೆ. ಪ್ರದೇಶದ ಸಮಗ್ರ ಜೀವನ ಶೈಲಿಯು, ದೈನಂದಿನ ಜೀವನವು ಪ್ರಾದೇಶಿಕ ಚರಿತ್ರೆಯಲ್ಲಿ ಉಲ್ಲೇಖಿಸಲ್ಪಡುತ್ತವೆ. ನಾವು ಪ್ರತಿಯೊಬ್ಬರೂ ಸಂಪರ್ಕದಲ್ಲಿರುವ ನಮ್ಮ ಸಮಾಜದ ನೇರ ಅನುಭವಗಳು ಪ್ರಾದೇಶಿಕ ಚರಿತ್ರೆಯಾಗಿದೆ.

ಮೇಲೆ ಹೇಳಿದ ಮೂಲಗಳನ್ನುಪಯೋಗಿಸಿ ನಾವು ಪ್ರಾದೇಶಿಕ ಚರಿತ್ರೆ ರಚಿಸಲು ಪ್ರಯತ್ನಿಸುವ.

### ಪ್ರಾದೇಶಿಕ ಚರಿತ್ರೆ ರಚನೆ : ಗಮನಿಸಬೇಕಾದ ಅಂಶಗಳು

| | |
|---|---|
| ಭೂಪ್ರಕೃತಿ | ಪ್ರಾದೇಶಿಕ ಚರಿತ್ರೆ ಅಧ್ಯಯನಕ್ಕೆ ಆಯ್ಕೆ ಮಾಡುವ ಪ್ರದೇಶದ ಸರಿಯಾದ ಭೌಗೋಳಿಕ ಗಡಿಗಳು, ಪ್ರಕೃತಿದತ್ತ ಪ್ರತ್ಯೇಕತೆಗಳು (ಗುಡ್ಡ, ನದಿ, ಶುದ್ಧಜಲ ತಟಾಕ) ಮೊದಲಾದವುಗಳು ಚರಿತ್ರೆ ರಚನೆಯಲ್ಲಿ ಇರಬೇಕು. |

| | |
|---|---|
| **ಚರಿತ್ರೆಯ ಸ್ಮಾರಕಗಳು** | ಪ್ರದೇಶದ ಆವಾಸ ಕೇಂದ್ರಗಳು, ಮಹಾಶಿಲೆಗಳು (Megaliths), ಶಿಲಾಲಿಖಿತಗಳು, ಕೋಟೆಗಳು, ಆರಾಧನಾಲಯಗಳು ಎಂಬಿವುಗಳನ್ನು ಪ್ರತಿಪಾದಿಸಿರಬೇಕು. |
| **ಜೀವನೋಪಾಯ** | ಪ್ರದೇಶದ ಪ್ರಧಾನ ಕೃಷಿ, ಕೈಕಸುಬು, ವಾಣಿಜ್ಯ ಕೇಂದ್ರಗಳು, ರೋಗಿಗಳ ಶುಶ್ರೂಷೆ, ವೈದ್ಯರು ಮೊದಲಾದವುಗಳ ಕುರಿತು ಸೂಚನೆಗಳಿರಬೇಕು. |
| **ಬದುಕುಳಿಯುವ ಮಾದರಿಗಳು** | ಅತಿವೃಷ್ಠಿ, ಬರಗಾಲ, ಸಾಂಕ್ರಮಿಕ ರೋಗಗಳು, ಬಡತನ, ಒಕ್ಕಲೆಬ್ಬಿಸುವುದು ಮೊದಲಾದ ಸಮಸ್ಯೆಗಳನ್ನು ಎದುರಿಸಿದ ವಿಶ್ಲೇಷಣೆಯನ್ನು ಅಳವಡಿಸಬೇಕು. |
| **ಸಾಂಸ್ಕೃತಿಕ ಸಂಸ್ಥೆಗಳು** | ಪ್ರದೇಶದ ವಿದ್ಯಾಭ್ಯಾಸ, ಸ್ತ್ರೀ ವಿದ್ಯಾಭ್ಯಾಸ, ವಾಚನಾಲಯ ಮೊದಲಾದವುಗಳನ್ನು ವಿವರಿಸಿರಬೇಕು. |
| **ಭೂ ಸಂಬಂಧಗಳು** | ಪ್ರದೇಶದ ಕೃಷಿ ಸಂಬಂಧಗಳು, ಜಮಿನ್ದಾರಿ ಪದ್ಧತಿ, ಹಳೆಯ ಲೆಕ್ಕಪತ್ರಗಳು ಮೊದಲಾದವುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ಸೇರಿಸಬೇಕು. |
| **ರಾಷ್ಟ್ರೀಯ ಪ್ರಜ್ಞೆ** | ಪ್ರದೇಶದ ರಾಜಕೀಯ ಚಳುವಳಿ, ರಾಷ್ಟ್ರೀಯ ಚಳುವಳಿ, ರಾಷ್ಟ್ರೀಯ ವ್ಯಕ್ತಿಗಳು ಮೊದಲಾದವುಗಳನ್ನು ಪ್ರತಿಪಾದಿಸಿರಬೇಕು. |
| **ಸ್ಥಳೀಯಾಡಳಿತ ಸಂಸ್ಥೆಗಳೂ ಅಭಿವೃದ್ಧಿಯೂ** | ಪ್ರದೇಶದ ಸ್ಥಳೀಯ ಆಡಳಿತ ಸಂಸ್ಥೆಗಳನ್ನೂ, ಅಲ್ಲಿಯ ಅಭಿವೃದ್ಧಿ ಚಟುವಟಿಕಗಳನ್ನೂ, ಪ್ರಾದೇಶಿಕ ಚರಿತ್ರೆ ರಚನೆಯಲ್ಲಿ ದಾಖಲಿಸಬೇಕು. |
| **ಗ್ರಂಥಸೂಚಿ** | ಗ್ರಂಥಸೂಚಿಯು(Bibiliography) ಚರಿತ್ರೆ ರಚನೆಯ ಅದಿಕೃತತೆಯನ್ನು ಖಾತರಿಪಡಿಸುವ ಪ್ರಧಾನ ಘಟಕವಾಗಿದೆ. ಇದು ಚರಿತ್ರೆ ರಚನೆಗೆ ಉಪಯೋಗಿಸುವ ಎಲ್ಲಾ ಮೂಲಗಳ ವಿವರವಾದ ತಖ್ತೆಯಾಗಿದೆ. ಅಧ್ಯಯನದ ಕೊನೆಯ ಭಾಗದಲ್ಲಿ ಗ್ರಂಥಸೂಚಿಯನ್ನು ನೀಡಲಾಗುತ್ತದೆ. |

**ಪ್ರಾದೇಶಿಕ ಚರಿತ್ರೆ ರಚನೆ - ಘಟಕಗಳು**

- ಶೀರ್ಷಿಕೆ
- ವಿಷಯ/ಮಕ್ಕಳ ಹೇಳಿಕೆ
- ಸಾಕ್ಷ್ಯಪತ್ರ

- ಕೃತಜ್ಞತಾ ಸಮರ್ಪಣೆ
- ಮುನ್ನುಡಿ
- ಅಧ್ಯಾಯಗಳು
- ಉಪಸಂಹಾರ
- ಉಲ್ಲೇಖಗಳು (ಚರ್ಚೆಯಲ್ಲಿ ಭಾಗವಹಿಸಿದವರ ಹೆಸರು, ಸಂದರ್ಶಿಸಿದ ಸ್ಥಳಗಳು, ಸಂಸ್ಥೆಗಳು ಮೊದಲಾದವುಗಳು)
- ಅನುಬಂಧಗಳು (ಫೋಟೋಗಳು, ಪದ್ಯಗಳು, ಪ್ರಶ್ನಾವಳಿಗಳು)
- ಗ್ರಂಥಸೂಚಿ

ಪ್ರಾದೇಶಿಕ ಚರಿತ್ರೆ ರಚನೆಯು ಸಂಸ್ಕೃತಿಗಳ ಪುನರ್‌ಸೃಷ್ಟಿಗೆ ನಮಗೆ ಸಹಾಯಕವಾಗುತ್ತದೆ. ಜೀವನದಲ್ಲಿ ನಿರಂತರ ಉಂಟಾಗುವ ಬದಲಾವಣೆಗಳನ್ನು ಕಂಡುಹಿಡಿಯುವುದು, ಭವಿಷ್ಯಕ್ಕಿರುವ ದಾರಿಗಳನ್ನು ರೂಪಿಸುವುದು, ಮುಂದಿನ ಪೀಳಿಗೆಗೆ ನಾಡಿನ ಚರಿತ್ರೆಯನ್ನು ಹಸ್ತಾಂತರಗೊಳಿಸುವುದು ಮೊದಲಾದವುಗಳು ಪ್ರಾದೇಶಿಕ ಚರಿತ್ರೆ ರಚನೆಯ ಉದ್ದೇಶಗಳಲ್ಲಿ ಸೇರಿರುವವುಗಳಾಗಿವೆ.

## ಮುಂದುವರಿದ ಚಟುವಟಿಕೆಗಳು

- ಪಾಠಭಾಗದಲ್ಲಿ ಕೊಟ್ಟಿರುವ ಮೂಲಗಳನ್ನು ಆಧರಿಸಿ ನಿಮ್ಮ ಊರಿನ ಚರಿತ್ರೆ ರಚನೆಗೆ ಅಗತ್ಯವಾದ ವಿಷಯಗಳನ್ನು ಸಂಗ್ರಹಿಸಿ ಅವುಗಳನ್ನು ಪರಿಶೀಲಿಸಿ ನಿಮ್ಮ ಊರಿನ ಚರಿತ್ರೆಯನ್ನು ಬರೆಯಿರಿ.
- ನಿಮ್ಮ ಊರಿನಲ್ಲಿ ಪ್ರಾದೇಶಿಕ ಚರಿತ್ರೆ ರಚನೆಯಲ್ಲಿ ಆಸಕ್ತಿಯುಳ್ಳ/ಪ್ರಾದೇಶಿಕ ಚರಿತ್ರೆಗಾರರೊಂದಿಗೆ ಒಂದು ಸಂವಾದವನ್ನು ಆಯೋಜಿಸಿರಿ.
- ನಿಮ್ಮ ಹತ್ತಿರದ ಪ್ರದೇಶದಲ್ಲಿ ಚರಿತ್ರೆಯ ಸ್ಮಾರಕಗಳನ್ನೋ, ಅರಮನೆಯನ್ನೋ ಸಂದರ್ಶಿಸಿ ಒಂದು ವಿವರಣೆಯನ್ನು ಬರೆಯಿರಿ.
- ವಿವಿಧ ದೇಶಗಳ ಹಳೆಯ ಮತ್ತು ಹೊಸ ನಾಣ್ಯಗಳನ್ನು ಸಂಗ್ರಹಿಸಿ ಪ್ರತಿಯೊಂದರ ಕಾಲಘಟ್ಟ, ದೇಶ, ವಿಶೇಷತೆಗಳನ್ನು ಕಂಡುಹಿಡಿದು ಆಲ್ಬಂ ತಯಾರಿಸಿರಿ.
- ನಿಮ್ಮ ಶಾಲೆಯ ಚರಿತ್ರೆಯನ್ನು ಬರೆದು ಸ್ಕೂಲ್‌ವಿಕ್ಕಿಯಲ್ಲಿ ಸೇರಿಸಿರಿ.

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

**51 ಕ. ಮೂಲಭೂತ ಕರ್ತವ್ಯಗಳು - ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ :**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ. ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಪೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಜ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ದಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

*ಸಂಪರ್ಕಿಸಬೇಕಾದ ವಿಳಾಸ:*

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

ಶ್ರೀ ಗಣೇಶ್, ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ - 34

ದೂರವಾಣಿ 0471 - 2326603

ಇ- ಮೇಲ್: childrightscpcr@kerala.gov.in, rtecpcr@kerala.gov.in

ವೆಬ್ ಸೈಟ್ : www.kescpcrkerala.gov.in.

ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400

ಕೇರಳ ಪೋಲೀಸ್ ಸಹಾಯವಾಣಿ : 0471 - 3243000/44000/45000

*online **R.T.E Monitoring : www.nireekshana.org.in***